
ಗೌರಿ ಲಂಕೇಶರ


ಲಂಕೇಶ್

ಮಾರ್ಚ್ 22, 2006 ಬೆಲೆ ರೂ. 9/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ತೇಜಸ್ವಿ



ರಾಜ್ಯಸಭಾ ಚುನಾವಣೆ



ಾಯಾಲೋಕ ಹೇಗಿದೆ?

ದೇವೇಗೌಡ ನಾಟಕ ಮಂಡಳಿ

ಾಸನ : ಕಾಮಕ್ಕೆ ಎಸ್ಪಿ ಡ್ರೈವರ್ ಬಲಿ

ಾಯುವ್ಯ ಸಾರಿಗೆ

ರ್ಕಾರಕ್ಕೆ ಲಾಸು-ಅಧಿಕಾರಿಗಳಿಗೆ ಕಾಸು



ನಾಡು

ಅಡಿಕೆ ಬೆಲೆ ಹೈ ಅಲ್ಲಿಗೂ ಬಂದ ರೈ!

ಬುಷ್ ಭಾರತಕ್ಕೆ ಬಂದಿದ್ದೇಕೆ? ಭಾರತ ಒಂದು ದೊಡ್ಡ ಪ್ರಜಾಪ್ರಭುತ್ವ ದೇಶವೆಂದೇ? ಜೊತೆಗೂಡಿ ವಿಶ್ವದಲ್ಲಿರುವ ಭಯೋತ್ಪಾದನೆಯ ವಿರುದ್ಧ ಸಮರ ಸಾರಲೆಂದೇ? ಭಾರತದ ನಾಗರೀಕ ಅಣುಶಕ್ತಿ ಯೋಜನೆಗಳಿಗೆ ಇಂಧನ ಸರಬರಾಜು ಮಾಡಲೆಂದೇ?... ಊಹೆಗಳನ್ನು ಬಿಡಿ. ತಾನು ಭಾರತಕ್ಕೆ ಬಂದಿದ್ದೇಕೆಂದು ಸ್ವಯಂ ಬುಷ್ ಮಹಾಶಯರೇ ತಿಳಿಸಿದ್ದಾರೆ.

ಒಂದು ಸತ್ಯ: ಭಾರತ 30 ಕೋಟಿ ಮಧ್ಯಮ ವರ್ಗವಿರುವ ಅತಿ ದೊಡ್ಡ ಮಾರುಕಟ್ಟೆ.ಅಮೆರಿಕನ್ ಜನಸಂಖ್ಯೆಗಿಂತ ದೊಡ್ಡದು. ಅಲ್ಲದೆ ಭಾರತದ ಆಡಳಿತ ನಡೆಸುತ್ತಿರುವವರು ಅಮೆರಿಕದ ಅಗತ್ಯ ಏನೆಂದು ಅರಿತು ಸಹಕರಿಸುವವರು. ಈ ಮಧ್ಯಮ ವರ್ಗದ ಮಾರುಕಟ್ಟೆ ನಮ್ಮೆರಡೂ ದೇಶಗಳನ್ನೂ ಹತ್ತಿರ ತಂದಿದೆ.....!!!



ಯಡಿಯೂರಪ್ಪನವರು ಇದೇ ಮಾರ್ಚ್ 20 ರಂದು ತಮ್ಮ ಚೊಚ್ಚಲ ಬಜೆಟ್ ಅನ್ನು ಮಂಡಿಸಲಿದ್ದಾರೆ. "ನಿಮಗೆ ಆಡಳಿತ ನಡೆಸಿದ ಅನುಭವವೂ ಇಲ್ಲ. ನೀವು ಆರ್ಥಿಕ ತಜ್ಞರೂ ಅಲ್ಲ. ಹಾಗಿದ್ದ ಮೇಲೆ ಎಂತಹ ಬಜೆಟ್ ಮಂಡಿಸುತ್ತೀರಿ" ಎಂದು ಪತ್ರಕರ್ತರು ಕೇಳಿದಾಗ "ಕಾದು ನೋಡಿ. ನಾನು ಹೊಸ ತೆರಿಗೆಗಳನ್ನೂ ಹಾಕುವುದಿಲ್ಲ.ಆದರೆ ಎಲ್ಲ ವರ್ಗಗಳ ಬೇಡಿಕೆಗಳನ್ನೂ ಈಡೇರಿಸುತ್ತೇನಿ" ಎಂದು ಹೇಳಿದ್ದಾರೆ.

ಒಂದು ಪ್ರಶ್ನೆ: ಆದರೆ ಮಾನ್ಯ ಮಂತ್ರಿಗಳೇ ಇದು ಹೇಗೆ ಸಾಧ್ಯ? ಸಂಪನ್ಮೂಲ ಕ್ರೂಢೀಕರಿಸದೆ ಎಲ್ಲರ ಬೇಡಿಕೆಗಳನ್ನು ಈಡೇರಿಸಲು ಬೇಕಾದ ಹಣ ಎಲ್ಲಿಂದ ತರುತ್ತೀರಿ? ಮಾನ್ಯ ಚಿದಂಬರಮ್ ಸಹ ಈ ಮಾತುಗಳನ್ನು ಆಡಿರಲಿಲ್ಲ. ಬದಲಿಗೆ ಬೇಡಿಕೆ ಈಡೇರಿಸದಿದ್ದರೂ ಹೆಚ್ಚಿನ ತೆರಿಗೆ ಹಾಕದಿರುವುದೇ ಒಂದು ಜನಪರ ಬಜೆಟ್ ಎನ್ನುವ ಪರಿಸ್ಥಿತಿ ಬಂದಿದೆ. ಆದರೆ ಅದೂ



ಸುಳ್ಳು-ಸುಳ್ಳೇ. ನಮೂದಾಗದೇ ಇರುವ ಹಲವಾರು ಹೊಸ ತೆರಿಗೆ ಪ್ರಸ್ತಾಪಗಳು ಕೇಂದ್ರ ಬಜೆಟ್‌ನಲ್ಲಿವೆ. ಹೀಗಿರುವಾಗ ಹೊಸ ತೆರಿಗೆಯನ್ನೂ ಹಾಕದೆ ಎಲ್ಲರ ಬೇಡಿಕೆಗಳನ್ನೂ ಈಡೇರಿಸುತ್ತೇನೆಂದು ಯಡಿಯೂರಪ್ಪನವರು ಬುರುಡೆ ಬಿಡುತ್ತಿದ್ದಾರಲ್ಲ..?

ಮುಸ್ಲಿಮರನ್ನು ಕೊಲ್ಲಲು ಎಣಿಸಬಹುದು..ಕಾಯಲಲ್ಲ..!




ಸೈನ್ಯದಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟಿದೆ ಎಂಬ ಬಗ್ಗೆ ಅಲ್ಪಸಂಖ್ಯಾತರ ಆಯೋಗದ ಪರವಾಗಿ ಹಿರಿಯ ಹಾಗೂ ನಿವೃತ್ತ ನ್ಯಾಯಾಧೀಶ ರಾಜೆಂದ್ರ ಸಚ್ಚಾರ್ ಸೈನ್ಯಾಧಿಕಾರಿಗಳಿಗೆ ಕಳಿಸಿದ ಸುತ್ತೋಲೆಯ ಕುರಿತು ಬಿ.ಜೆ.ಪಿಗಳು ದೇಶಾದ್ಯಂತ ದೊಡ್ಡ ಹುಯಿಲನ್ನೇ ಎಬ್ಬಿಸಿಬಿಟ್ಟರು. ಸೈನ್ಯದಲ್ಲಿ ಈ ರೀತಿಯ ಗಣತಿ ಮಾಡುವುದರಿಂದ ಸೈನ್ಯದ ಸೆಕ್ಯುಲಾರ್ ಸ್ವಭಾವಕ್ಕೆ ಧಕ್ಕೆ ಬರುತ್ತದೆಂದು ಕೋಮುವಾದಿ ಬಿ.ಜೆ.ಪಿ. ಕಣ್ಣೀರಿಟ್ಟಿತು. ತೋಳಕ್ಕೆ ಮೇಕೆಗಳ ಮೇಲೆ ಇದ್ದಕಿದ್ದಂತೆ ಸಹಾನುಭೂತಿ ಉಕ್ಕಿ ಹರಿಯಿತು. ಆದರೆ ಇದೇ ಬಿ.ಜೆ.ಪಿಗಳೇ ಗುಜರಾತಿನಲ್ಲಿ ಮುಸ್ಲಿಮರ ಒಬ್ಬೊಬ್ಬರ ಮನೆಯಿಲ್ಲಿ? ಅದರಲ್ಲಿ ಸ್ವಂತ ಮನೆಯೆಷ್ಟು, ಬಾಡಿಗೆ ಮನೆಯೆಷ್ಟು? ಎಂಬಿತ್ಯಾದಿ ಜನಗಣತಿಯನ್ನು 2002ರ ಫೆಬ್ರವರಿಯಲ್ಲಿ ಮಾಡಿದ್ದರಲ್ಲ, ಅದು ಏಕೆ?.. ಆದೇಕೆಂದರೆ ಆಗ ಮುಸ್ಲಿಮರ ಗಣತಿ ಬೇಕಿತ್ತು.ಹುಡುಕಿ ಹುಡುಕಿ ಸಾಯಿಸಲು.. ಈಗ ಅಲ್ಪ ಸಂಖ್ಯಾತರ ಆಯೋಗ ದೇಶಾದ್ಯಂತ ಸಾರ್ವಜನಿಕ ಹಾಗೂ ಖಾಸಗಿ ಸೇವೆಗಳಲ್ಲಿ ಮುಸ್ಲಿಮರ ಪ್ರಮಾಣವೆಷ್ಟು , ಅದು ನಿರೀಕ್ಷೆಯ ಮಟ್ಟಕ್ಕಿಂತ ಕಡಿಮೆಯಿದ್ದರೆ ಅದನ್ನು ಹೆಚ್ಚಿಸಲು ಅರ್ಥಾತ್ ಅವರನ್ನು ಮುಖ್ಯಧಾರೆಗೆ ಕರೆತರಲು ತೆಗೆದುಕೊಳ್ಳ ಬೇಕಾದ ಕ್ರಮಗಳೇನು ಎಂಬ ಬಗ್ಗೆ ವರದಿ ನೀಡಲು ಮುಸ್ಲಿಮರ ಎಣಿಕೆ ನಡೆಸುತ್ತಿದೆ. ಸೈನ್ಯವೂ ಸಹ ಒಂದು ಸಾರ್ವಜನಿಕ ಸಂಸ್ಥೆಯೇ ಆದ್ದರಿಂದ ಅಲ್ಲಿಯೂ ಮುಸ್ಲಿಮರ ಪ್ರಮಾಣವೆಷ್ಟೆಂದು ಕೇಳಲಾಗಿದೆಯಷ್ಟೆ. ಅಂದರೆ ಮುಸ್ಲಿಮರನ್ನು, ಅವರು ಈ ದೇಶದಲ್ಲಿ ಉತ್ತಮ ನಾಗರೀಕರಾಗಿ ಬದುಕಿ ಬಾಳಲು ಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಲು ಎಣಿಕೆ ನಡೆಯುತ್ತಿದೆ. ಬಿ.ಜೆ.ಪಿಯ ಕಣ್ಣು ಕುಕ್ಕುತ್ತಿರುವುದು ಇದೇ. ಕೊಲ್ಲಲು ಎಣಿಸಿದರೆ ಪರವಾಗಿಲ್ಲ... ಆದರೆ ಕಾಯಲು ಎಣಿಸಬಾರದಷ್ಟೆ.!

ಚಾರ್ವಾಕ
- ಶಿವಸುಂದರ್ -

ಹಾಗೆ ನೋಡಿದರೆ ಭಾರತ ವಿಭಜನೆಯ ಮುಂಚೆ ಭಾರತ ಸೈನ್ಯದಲ್ಲಿ ಮುಸ್ಲಿಂ ಸೈನಿಕರ ಪ್ರಮಾಣ ಶೇ.30ರಷ್ಟಿತ್ತು. ಈಗ ಅದು ಶೇ.2.7ಕ್ಕಿಳಿದಿದೆ. ಅಷ್ಟು ಮಾತ್ರವಲ್ಲ ಎಲ್ಲಾ ರಂಗಗಳಲ್ಲೂ ಮುಸ್ಲಿಮರ ಪ್ರಾತಿನಿಧ್ಯ ಅವರ ಜನಸಂಖ್ಯಾ ಪ್ರಮಾಣಕ್ಕಿಂತ ಸಾಕಷ್ಟು ಕಡಿಮೆ ಇದೆ. ಹೀಗಾಗಿ ಮುಸ್ಲಿಮರ ಸಾಮಾಜಿಕ ಬದುಕಿನ ಸ್ಥಿತಿಗತಿ ಅರಿಯಲು ಅವರ ಪ್ರಾತಿನಿಧ್ಯದ ಎಣಿಕೆ ಮಾಡಿದರೆ ತಪ್ಪೇನು? ವಾಸ್ತವವಾಗಿ ಈಗಲೂ ಭಾರತ ಸೈನ್ಯದ ಶೇ.30 ರಷ್ಟು ಭಾಗವನ್ನು (ರೆಜಿಮೆಂಟುಗಳು-ಸಿಖ್ ರೆಜಿಮೆಂಟ್, ಗೂರ್ಖ ರೆಜಿಮೆಂಟ್ ಇತ್ಯಾದಿ)ಧರ್ಮ, ಹಾಗೂ ಕುಲ ಹಾಗೂ ಜನಾಂಗಗಳ ಆಧಾರದಲ್ಲೇ ಉಳಿಸಿಕೊಳ್ಳಲಾಗಿದೆ. ನಮ್ಮನ್ನು ಒಡೆದು ಆಳಲು ಬ್ರಿಟಿಷರಿಗೆ ಈ ಬಗೆಯ ವಿಭಜನೆಯ ಅಗತ್ಯವಿತ್ತು. ಆದರೆ ಸ್ವಾತಂತ್ರ್ಯಾನಂತರವೂ ಈ ಬಗೆಯ ವಿಭಜನೆಯ ಅಗತ್ಯವೇನೆಂದು ಈ ದೇಶ ರಕ್ಷಕ ಬಿ.ಜೆ.ಪಿಗಳಿಗೆ ಏಕೆ ಅನಿಸುವುದಿಲ್ಲ? ಕಾರಣ ಸ್ಪಷ್ಟ. ಎಲ್ಲಿಯ ತನಕ ಆ ರೆಜಿಮೆಂಟುಗಳು ಪ್ರತಿನಿಧಿಸುವ ಧರ್ಮ, ಜನಾಂಗ ಹಿಂದೂತ್ವಕ್ಕೆ ಬದ್ಧವಾಗಿರುತ್ತವೋ ತೊಂದರೆಯಿಲ್ಲ. ಆದರೆ ಮುಸ್ಲಿಮರು ಭಾರತಕ್ಕೆ ಬದ್ಧರೇ ವಿನಹ ಹಿಂದೂತ್ವಕ್ಕೆ ಅಲ್ಲವಲ್ಲ. ಆದರೆ ಈ ಚೆಡ್ಡಿಗಳ ಮಟ್ಟಿಗೆ ಭಾರತದ ರಕ್ಷಣೆಯೆಂದರೆ ಹಿಂದೂತ್ವದ ಅರ್ಥಾತ್ ಬ್ರಾಹ್ಮಣ್ಯದ ರಕ್ಷಣೆಯಲ್ಲವೇ? ..ಸೈನ್ಯದಲ್ಲಿ ಮುಸ್ಲಿಮರ ಜನಗಣತಿಯಾದರೆ ದೇಶ ರಕ್ಷಣೆಗೆ ಆಪತ್ತೆಂದು ಅವರು ಎಬ್ಬಿಸುತ್ತಿರುವ ಹುಯಿಲಿನ ಹಿಂದೆ ಇರುವ ನಿಜವಾದ ಕೋಮುವಾದಿ ತಂತ್ರ ಇದೇ....

ರಾಹುಲ್ ಗಾಂಧಿಯೂ ಭಾಷಣ ಮಾಡಿದನಂತೆ... ಶಿಕ್ಷಣವನ್ನೂ ಕನಸು ಮಾಡಿ ಎಂದನಂತೆ...!

ರಾಹುಲ್ ಗಾಂಧಿಯೂ ಭಾಷಣ ಮಾಡಿದನಂತೆ.. ಎಂಟು ವರ್ಷಕ್ಕೆ ಮಗ ದಂಟು ಎಂದಂತೆ.. ಭಟ್ಟಂಗಿ ಕಾಂಗ್ರೆಸ್ಸಿಗರಿಗೆ ಇದೇ ಒಂದು ದೊಡ್ಡ ಸಾಧನೆ.. ಅದನ್ನೇ ವಾರಾದ್ಯಂತ ಪತ್ರಿಕೆಗಳಲ್ಲಿ , ಟಿ.ವಿ ಚಾನೆಲ್‌ಗಳಲ್ಲಿ ಹೆಗ್ಗಳಿಕೆ ಎಂಬಂತೆ ಕೊಚ್ಚಿಕೊಳ್ಳುತ್ತಿದ್ದಾರೆ. ಪತ್ರಿಕೆಗಳು ಸಹ ಭಾರತದಂತ ಒಂದು ದೊಡ್ಡ ದೇಶದಲ್ಲಿ ಈ ವಾರದಲ್ಲಿ ನಡೆದ ಅತಿ ದೊಡ್ಡ ವಿದ್ಯಮಾನವೆಂಬಂತೆ ವೈಭವೀಕರಿಸಿ ಬರೆಯುತ್ತಿದ್ದಾರೆ. 24 ಗಂಟೆ ನ್ಯೂಸ್ ಚಾನೆಲ್‌ಗಳ ಕರ್ಮವಂತೂ ಬಿಡಿ. ಇಡೀ ದಿನ ಅದೇ ದೊಡ್ಡ ಸುದ್ದಿ.



ಎಲ್ಲರೂ ರಾಹುಲ್ ಮಾತಾಡಿದ್ದನ್ನೂ , ಆಗ ಆತ ತೋರಿದ ಭಂಗಿಗಳನ್ನು, ಆತ ವಿದ್ಯಾರ್ಥಿಗಳಿಗೆ ಇಲ್ಲವಾಗುತ್ತಿರುವ ಕನಸುಗಳ ಬಗ್ಗೆ ತೋರಿದ ಕಾಳಜಿಗಳ ಕುರಿತು ಬರೆಯುತ್ತಿದ್ದಾರೆಯೇ ವಿನಹ ಆ ಕನಸುಗಳನ್ನು ವಾಸ್ತವಕ್ಕೆ ಇಳಿಸಲು ಆತ ಮಾಡಿರುವ ಸಲಹೆಗಳು ಹೇಗೆ ಬಡ ವಿದ್ಯಾರ್ಥಿಗಳ ಕನಸುಗಳಿಗೆ ಇರಲಿ ಬದುಕಿಗೇ ಸಂಚಕಾರ ತರುವಂತಿದೆ ಎಂಬುದರ ಬಗ್ಗೆ ಬರೆಯುತ್ತಿಲ್ಲ.

ಇಷ್ಟಾಗಿ ರಾಹುಲ್ ಕೊಟ್ಟ ದಿವ್ಯ ಸಲಹೆಗಳೇನು? ತಾನು ದೇಶದ ಹಲವಾರು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ *ಬೇಟ ತುಂ ಬಡೆ ಹೋ ಕರ್ ಕ್ಯಾ ಕರೋಗೆ* ಅಂತ ಕೇಳಿದೆ. ಆದರೆ ಯಾರಿಗೂ ಅದಕ್ಕೆ ಉತ್ತರವೇ ಇರಲಿಲ್ಲ. ಅವರಿಗೆ ಕನಸುಗಳೇ ಇಲ್ಲ. ಆದ್ದರಿಂದ ಅವರಿಗೆ ಕನಸುಗಳನ್ನಾದರೂ ಕಲಿಸಿಕೊಡುವ ಶಿಕ್ಷಣ ಕೊಡಬೇಕು ಎಂದಿದ್ದಾರೆ. ಆದರೆ ಎಂತಹ ಶಿಕ್ಷಣ? ನಮ್ಮ ಭಾರತ ಇಡೀ ವಿಶ್ವದ ಶಿಕ್ಷಣ ಕ್ಷೇತ್ರದ ಕೇಂದ್ರ ಸ್ಥಾನವಾಗುತ್ತಿರುವುದರಿಂದ ನಾವು ಜಾಗತಿಕ ಮಟ್ಟದ ಶಿಕ್ಷಣ ಕೊಡಬೇಕು.. ಅಂದರೆ ನಮ್ಮ ಶಿಕ್ಷಣ ಹೆಚ್ಚೆಚ್ಚು ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವಂತ ಸಂಸ್ಥೆಗಳನ್ನು ಪ್ರಾರಂಭಿಸಬೇಕು. ಶಿಕ್ಷಣ ಕ್ಷೇತ್ರದ ಸಂಪನ್ಮೂಲಗಳನ್ನು ಅದಕ್ಕಾಗಿ ವಿನಿಯೋಗಿಸಬೇಕು. ಎರಡನೆಯದಾಗಿ ನಮ್ಮ ಶಿಕ್ಷಣವನ್ನು ಮಾರುಕಟ್ಟೆ ಅಗತ್ಯಗಳಿಗೆ ತಕ್ಕನಾಗಿ ಪುನರ್ ರೂಪಿಸಬೇಕು. ಅರ್ಥಾತ್ ಇಂದು ನಮ್ಮ ದೇಶದ ಅಗತ್ಯಕ್ಕಾಗಿ ಎಂದು ಶಿಕ್ಷಣ ರೂಪಿಸಬಾರದು. ಇವೆರಡು ಸಲಹೆಗಳೂ ಈಗಾಗಲೇ ಜಾರಿಯಲ್ಲಿವೆ. ಹಾಗೂ ಆದ್ದರಿಂದಲೆ ದೇಶದ 20 ಕೋಟಿ ಬಡ ಮಕ್ಕಳು ಕನಸುಗಳನ್ನಿರಲಿ ಮುಂದೆ ಬದುಕನ್ನೇ ಕಳೆದುಕೊಳ್ಳಲಿದ್ದಾರೆ.

ಪ್ರಾಯಶಃ ರಾಹುಲ್ ಸಲಹೆಯ ತಾತ್ಪರ್ಯ ಮಕ್ಕಳಿಗೆ ಶಿಕ್ಷಣವನ್ನು ಕನಸಿನಲ್ಲೇ ಕೊಡಿ ಎಂದಿರಬಹುದೇ....!!

No Comments

ಭಾರತ ಭವಿಷ್ಯವಿಲ್ಲದ ದೇಶ.

-ಎಮ್.ಜಿ.ಕೆ.

ನಾವು ಸರಿಯಾದ ಸರ್ಕಾರ ಕೊಡದಿದ್ದರೆ ನಮ್ಮ ಪಕ್ಷಕ್ಕೇ ಆಪತ್ತೆಂದು ನಮ್ಮವರೇ ಅರ್ಥ ಮಾಡಿಕೊಳ್ಳಬೇಕಾಗಿದೆ.

-ಯಡಿಯೂರಪ್ಪ

ಹಳೇ ದೇವಸ್ಥಾನಗಳ ಜೀರ್ಣೋದ್ಧಾರವೇ ನನ್ನ ಪ್ರಮುಖ ಹವ್ಯಾಸ.

-ಮುಜರಾಯಿ ಸಚಿವ ನಾಗರಾಜ್ ಶೆಟ್ಟಿ



ಐ.ಟಿ.-ಬಿ.ಟಿ. ವಿರುದ್ಧ ನಾನು ಮಾತಾಡಿಲ್ಲ.

-ಎಚ್.ಡಿ.ಕುಮಾರಸ್ವಾಮಿ.

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

ಕರ್ನಾಟಕ ಅಭಿವೃದ್ಧಿ ರಂಗ

ಸಮ್ಮಿಶ್ರ ಸರ್ಕಾರದ ಹೊಸ ಹೆಸರು..!

ಅಭಿವೃದ್ಧಿಯ ಸಂಕಲ್ಪ-ಆಡಳಿತಕ್ಕೆ ಕಾಯಕಲ್ಪ

ಸಮ್ಮಿಶ್ರ ಸರ್ಕಾರ.

ಕ್ರಿ.ಶ.1013ರಿಂದಲೂ ವಾರಣಾಸಿಯ ಮೇಲೆ ಮುಸ್ಲಿಮರು ದಾಳಿ ಮಾಡುತ್ತಲೇ ಬಂದಿದ್ದಾರೆ.



-ಚಿದಾನಂದ ಮೂರ್ತಿ

ನಾನು ಫಾಸ್ಟ್-ಅಧಿಕಾರಿಗಳು ಸ್ಲೋ


-ಎಚ್.ಡಿ.ಕುಮಾರಸ್ವಾಮಿ

ಈ ಸರ್ಕಾರ ಪೂರ್ಣಾವಧಿ ಮುಗಿಸಲಿದೆ.


-ಹನುಮಂತಪ್ಪ ಆಲ್ಕೋಡ್

ಕಿಡಿ-ಕಿಂಡಿ

ರಷ್ಯಾ ಕ್ರಾಂತಿಯಾಗಿ ಅಲ್ಲಿ ಕಾರ್ಮಿಕ ವರ್ಗದ ಕಮ್ಯುನಿಸ್ಟ್ ಸರ್ಕಾರ ಸ್ಥಾಪನೆಯಾದ ನಂತರ ಅಮರಿಕ ಅದರ ವಿರುದ್ಧ ಹಲವಾರು ಸೈನಿಕ, ರಾಜಕೀಯ, ಸೈದ್ಧಾಂತಿಕ ದಾಳಿಗೆ ಇಳಿಯಿತು. ರಷ್ಯಾದ ವಿರುದ್ಧ ಅದು ಬಳಸಿದ ಸೈದ್ಧಾಂತಿಕ ಅಸ್ತ್ರ" ತಾನು ಪ್ರಜಾತಂತ್ರ. ಆದರೆ ರಷ್ಯಾ ಏಕ ಪಕ್ಷವಿರುವ ಸರ್ವಾಧಿಕಾರ" ಎಂಬುದು. ಅಮೆರಿಕದ ಈ ಸೈದ್ಧಾಂತಿಕ ಹಿಪಾಕ್ರಸಿಯನ್ನು ಬುದ್ಧಿಜೀವಿ ಬರ್ನಾಡ್ ಷಾ ಹೀಗೆ ಲೇವಡಿ ಮಾಡಿದ್ದಾರೆ:



"ವಾಸ್ತವವಾಗಿ ಅಮೆರಿಕ ಸಹ ಒಂದೇ ಪಕ್ಷವಿರುವ ಸರ್ವಾಧಿಕಾರವೇ..! ಆದರೆ ಟಿಪಿಕಲ್ ಅಮೆರಿಕನ್ ರೀತಿಯಲ್ಲಿ ಇನ್ನೊಂದು ಪಕ್ಷ ಎಕ್ಸ್‌ಟ್ರಾ ಇದೆಯಷ್ಟೆ...!"




ನಾವೆಲ್ಲ ಸಿಟ್ಟು ಬಂದಾಗ ಹೇಳಬಾರದ್ದನ್ನೆಲ್ಲ ಹೇಳಿರುತ್ತೇವೆ; ಅಥವಾ ಮಾಡಬಾರದ್ದನ್ನು ಮಾಡಿರುತ್ತೇವೆ. ಈ ಕಾರಣದಿಂದಾಗಿಯೇ ಖ್ಯಾತ ಲೇಖಕ ಓ ಹೆನ್ರಿಯವರು "ಸಿಟ್ಟು ಸಿಂಹಾಸನವನ್ನೇರಿದಾಗ ತರ್ಕ ಹಾಗೂ ನ್ಯಾಯ ಬುದ್ಧಿ ಹೊಸ್ತಿಲಿನ ಹೊರಗೆ ಇರುತ್ತವೆ," ಎಂದು ಹೇಳಿದ್ದಾರೆ. ಈ ಸಿಟ್ಟು ಅಥವಾ ಕೋಪ ಕುರಿತು 'ಲಂಕೇಶ್' ಮಿತ್ರ ಬಳ್ಳಾರಿ ಜಿಲ್ಲೆಯ ಬಸರಕೋಡುವಿನ ಮೇಟಿ ಕೊಟ್ರಪ್ಪ ಈ ವಾರದ ಸೂಕ್ತಿಗಳನ್ನು ಆಯ್ದು ಕಳುಹಿಸಿದ್ದಾರೆ.

-ಗೌರಿ


ಸಿಟ್ಟು ಎಂಬುದು ಸ್ವಲ್ಪ ಕಾಲ ಇರುವ ದೊಡ್ಡ ಹುಚ್ಚು -ಹೊರೆಸ್

'ಲಂಕೇಶ್' ಹುಟ್ಟಿದ ಗಳಿಗೆ....

...ಪ್ಪನ 71 ನೇ ಹುಟ್ಟುಹಬ್ಬದ ಸಮಾರಂಭ ಇದೇ ...ರ್ಚ್ 8 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ...ಾ ಚೆನ್ನಾಗಿ ನಡೆಯಿತು. ಅವತ್ತು ಬಂದ ಹಿರಿಯರಿಗೂ, ಸ್ನೇಹಿತರಿಗೂ, ...ಗರಿಗೂ ನನ್ನ ಮತ್ತು ಪತ್ರಿಕೆ ಬಳಗದ ...ಾದಗಳು. ಆ ಸಮಾರಂಭ ಕುರಿತು ...ಸಂಚಿಕೆಯಲ್ಲಿ ವರದಿ ಪ್ರಕಟವಾಗಿರು...ರಿಂದ ಅದರ ಬಗ್ಗೆ ಇಲ್ಲಿ ಹೆಚ್ಚು ...ಲಾರೆ. ಆದರೆ ಕಳೆದ ವರ್ಷ ಅಪ್ಪನ ...ಪತ್ರಿಕೆ ಮರುಹುಟ್ಟು ಪಡೆಯುವ ... ಇದ್ದ ಪರಿಸ್ಥಿತಿಯ ಬಗ್ಗೆ ಹಂಚಿಕೊಳ್ಳ... ಅನಿಸುತ್ತಿದೆ.



...ಅವತ್ತು ಫೆಬ್ರವರಿ 14, 2005. ... ಅಪ್ಪನ ನಂತರ ಅವರ ಪತ್ರಿಕೆಯನ್ನು ...ಕೊಂಡು ಬಂದಿದ್ದ ನಾನು ಹಿಂದಿನ ರಾತ್ರಿ ಆ ... ಕುತಂತ್ರಿಗಳಿಂದಾಗಿ ಪತ್ರಿಕೆಯಿಂದಲೇ ಹೊರದೂಡ...ದೆ. ಆದರೆ ನಾನು ಹಠಮಾರಿ. ಪತ್ರಿಕೆಯಲ್ಲಿ ...ಲ್ಲದಿದ್ದರೇನು, ನನ್ನ ಪತ್ರಿಕೆ ಕಚೇರಿಯಲ್ಲಂತೂ ಇರುತ್ತೇನೆ ... ಅವತ್ತೂ ಪತ್ರಿಕೆ ಕಚೇರಿಗೆ ...ರಾದೆ! ನಾನು ಬಂದಿ ದ್ದನ್ನು ...ತಿ, ಪತ್ರಿಕೆಯ ಸಾಮಾನು ಗಳನ್ನೇ ...ರಾತ್ರಿ ಇತರೆಡೆಗೆ ಸಾಗ...ದರು. ಅಷ್ಟೇ ಅಲ್ಲ, ತಾವೇ ... ಪತ್ರಿಕಾ ಕಚೇರಿಗೆ ಗುಡ್‌ಬೈ ...ದರು. ಆದರೆ ನಾನು ಮಾತ್ರ ... ಕ್ಯಾಬಿನ್ ಎದುರಿಗಿದ್ದ ನನ್ನ ...ನ್‌ನಲ್ಲಿ ಒಬ್ಬಳೇ ಕುಳಿತಿದ್ದೆ! ... ಫ್ಲೋರ್‌ನಲ್ಲಿ ಒಬ್ಬಳೇ ಕೂತಿದ್ದೆ! ...ಮರುದಿನ ಬೆಳಿದಾಳೆ ಈಶ ...ರಾದರು. "ಹೊಸ ಪತ್ರಿಕೆ ... ಮಾಡೋಣ" ಎಂದು ...ಲ ನೀಡುತ್ತಾ ಹತ್ತು ಸಾವಿರ ರೂಪಾಯಿಗಳನ್ನು ...ಗಿಟ್ಟರು. ಅದೇ ಸಂಜೆ ನಮ್ಮ ಮಿತ್ರ ಸಿ. ರಾಮಕೃಷ್ಣ ...ಯಾಸ್ ನಾಯಿರಾಜ) ಹಾಜರಾದ. "ನಾನೇನು ...ಯ ಮಾಡಬೇಕು, ಹೇಳಿ" ಎಂದು ಪಟ್ಟುಹಿಡಿದು



ಕೂತ. ನಮ್ಮ ಆಫೀಸಿಗೆ ಬಾಗಿಲೇ ಇಲ್ಲದಿದ್ದನ್ನು ಗಮನಿಸಿದ ರಾಜ ಅಲ್ಲಿಂದ ಹೊರಟು ಹೋದ. ಮರುದಿನ ರಾತ್ರಿ ಹತ್ತು ಗಂಟೆಯಲ್ಲಿ ನಾವು ಮೂರ್‍ನಾಲ್ಕು ಜನ ಹೊಸ ಪತ್ರಿಕೆಯ ಬಗ್ಗೆ ಚರ್ಚಿಸುತ್ತಾ ಕೂತಿದ್ದಾಗ ದಡ-ಬಡ ಶಬ್ದ ವಾಯಿತು. ಏನೆಂದು ನೋಡಿದರೆ, ಮುಸ್ಲಿಂ ಕಾರ್ಪೆಂಟರ್ ಒಬ್ಬನನ್ನು ಕರೆತಂದಿದ್ದ ರಾಜ ಆಫೀಸಿಗೆ ಬಾಗಿಲು ಹಾಕಿಸುವ ಕೆಲಸದಲ್ಲಿ ತೊಡಗಿದ್ದ. ಎರಡನೇ ರಾತ್ರಿ ಬಾಗಿಲು ತಯಾರಾಯಿತು. ಹೋಗಿ ನೋಡಿದರೆ ರಾಜ ಮತ್ತು ಆ ಹುಡುಗ ಸೇರಿಕೊಂಡು ಬಾಗಿಲು- ಫ್ರೇಂಗಳನ್ನೇನೋ ಹಾಕಿದ್ದರು. ಆದರೆ ಚಿಲಕವನ್ನೇ ಉಲ್ಟಾ ಮಾಡಿದ್ದರು! ಇವತ್ತಿಗೂ ಆ ಬಾಗಿಲನ್ನು ತೆಗೆಯುವಾಗ, ಮುಚ್ಚುವಾಗ ನನ್ನ ತಂಗಿ ಕವಿತಾ 'ಏನೇ ನಿನ್ನ ಕಸಿನ್ ಬ್ರದರ್ಸ್ (ಮುಸ್ಲಿಮರು) ಎಂತಾ ಕೆಲಸ ಮಾಡಿದ್ದಾರೆ ನೋಡು' ಎಂದು ತಮಾಷೆ ಮಾಡುತ್ತಿರುತ್ತಾಳೆ. ಆದರೆ ನನಗೆ ಈಗಲೂ ಕಚೇರಿಗೆ ಬಾಗಿಲು ಹಾಕಿಸಿಕೊಟ್ಟ ರಾಜನ ಉತ್ಸಾಹ ನೆನಪಾಗಿ ಸಂತೋಷವಾಗುತ್ತೆ.

ಆಗ ಪತ್ರಿಕೆಯ 'ತಂಡ'ದಲ್ಲಿ ನಾನು ಮತ್ತು ಈಶ ಇಬ್ಬರೇ ಇದ್ದದ್ದು. ಪ್ರತಿ ದಿನ ನನ್ನನ್ನು ಬಂಧಿಸಬೇಕೆಂದು ಸಂಘ ಪರಿವಾರದ ಹೇಳಿಕೆಗಳು ಪ್ರಕಟಗೊಳ್ಳುತ್ತಲೇ ಇದ್ದವು. ಇದಕ್ಕೆ ಸರಿಯಾಗಿ ನಮ್ಮ ಆಫೀಸಿನ ಮುಂದೆ ಸುಮಾರು ನಲವತ್ತು ಪೋಲೀಸರು ಹಗಲು ರಾತ್ರಿ ನಿಂತಿರುತ್ತಿದ್ದರು. ಇನ್ನು ನನ್ನನ್ನು ನೋಡಲು ಯಾರು ಬರುತ್ತಿದ್ದಾರೆ ಎಂದು ಗಮನಿಸಲು ಇನ್ನೆಷ್ಟು ಪೋಲೀಸರು ಮಫ್ತಿಯಲ್ಲಿದ್ದರೋ, ಗೊತ್ತಿಲ್ಲ.

ಅಷ್ಟೊತ್ತಿಗಾಗಲೇ ಮಂಡ್ಯದಿಂದ ಎಚ್.ಎಲ್. ಕೇಶವಮೂರ್ತಿಯವರು ಮತ್ತು ಶಿವಮೊಗ್ಗೆಯಿಂದ ಬಿ. ಚಂದ್ರೇಗೌಡರು ನನ್ನ ಪರವಾಗಿ ನಿಂತು ನೈತಿಕ ಧೈರ್ಯ ತುಂಬಿದ್ದರು. ಯಾರ್‍ಯಾರಿಂದಲೋ ನನ್ನ ಮೊಬೈಲ್ ಫೋನ್ ನಂಬರ್ ಪಡೆದ ಅಪರಿಚಿತರು ರಾಜ್ಯದೆಲ್ಲೆಡೆಯಿಂದ ಫೋನ್ ಮಾಡಿ ಹುರಿದುಂಬಿಸಿದರು.

ಅಪ್ಪ ಇದ್ದಾಗ ಪತ್ರಿಕೆಯ ಸರ್ಕ್ಯುಲೇಷನ್ ಮ್ಯಾನೇಜರ್ ಆಗಿದ್ದ ರಾಜುರವರಿಗೆ ಮೊದಲನೆ ದಿನವೇ ಫೋನ್ ಮಾಡಿ "ಮಾತಾಡಬೇಕಿದೆ, ಬನ್ನಿ" ಅಂದಿದ್ದೆ. ಹೊಸ

ಕಂಡಹಾಗೆ



ಪತ್ರಿಕೆಯ ಬಗ್ಗೆ ಅವರಿಗೆ ಗೊತ್ತಿರಲಿಲ್ಲವಾದ್ದರಿಂದ ಅವರು ಮೂರು ದಿನವಾದರೂ ಬರಲಿಲ್ಲ. ಮತ್ತೆ ಫೋನ್ ಮಾಡಿ "ಎಲ್ಲಿದ್ದೀರಿ ರಾಜು" ಎಂದೆ. ವಿಚಿತ್ರವೆಂದರೆ ನಾನು ಹಾಗೆ ಫೋನ್ ಮಾಡಿದಾಗ ಮತ್ತೊಂದು ಪತ್ರಿಕೆಯನ್ನು ಸೇರಲು ರಾಜು ಹೋಗುತ್ತಿದ್ದರು. ಆದರೆ ನಾನು ಕರೆದ ಕೂಡಲೇ ನಮ್ಮ ಆಫೀಸಿನತ್ತ ತಮ್ಮ ಸ್ಕೂಟರ್ ತಿರುಗಿಸಿದ ರಾಜು ಇಲ್ಲಿ ಹಾಜರಾದರು. ಆಫೀಸಿನಲ್ಲಿ ನಮ್ಮ ಸಂಖ್ಯೆ ಮೂರಕ್ಕೇರಿತ್ತು!


'ಲಂಕೇಶ್' ಕಛೇರಿ

ನಿಮ್ಮ ಈ ಪತ್ರಿಕೆ ಶುರುವಾಗದಂತೆ ತಡೆಯಾಜ್ಞೆ ತರುವ ಪ್ರಯತ್ನಗಳೂ ನಡೆದವು. ಆದರೆ ಅದಕ್ಕೂ ಮುನ್ನ ನನ್ನ ವಕೀಲರಾದ ಬಿ.ಟಿ. ವೆಂಕಟೇಶ್ ಕೇವಿಯಟ್ ಸಲ್ಲಿಸಿದ್ದರು. ಈ ಪ್ರಕ್ರಿಯೆ ನಡೆದ ನಂತರವೇ ಹೊಸ ಪತ್ರಿಕೆಯ ಬಗ್ಗೆ ಘೋಷಿಸಿದೆವು.

ಮರುದಿನದಿಂದ ಆಫೀಸು ಗಿಜುಗುಡಲಾರಂಭಿಸಿತು. ಎಲ್ಲೆಡೆಯಿಂದ ಏಜೆಂಟರು ರಾಜುಗೆ ಫೋನ್ ಮಾಡಲಾರಂಭಿಸಿದರು. ಅಪ್ಪನ 70ನೇ ಹುಟ್ಟುಹಬ್ಬದ ದಿನದಂದೇ ಪತ್ರಿಕೆಯನ್ನು ಬಿಡುಗಡೆ ಮಾಡುವುದಾಗಿ ನಿರ್ಧರಿಸಲಾಯಿತು. ಸಾಮಾನ್ಯವಾಗಿ ಒಂದು ಪತ್ರಿಕೆ ಪ್ರಾರಂಭಿಸುವುದಕ್ಕೆ ಕನಿಷ್ಠ ಆರು ತಿಂಗಳ ತಯಾರಿ ನಡೆಯುತ್ತದೆ. ಆದರೆ ನಾವು ಫೆ. 14ರಿಂದ ಮಾರ್ಚ್ 8ರ ನಡುವೆ ಇದ್ದ ಮೂರೇ ವಾರಗಳಲ್ಲಿ ಹೊಸ ಪತ್ರಿಕೆ ಪ್ರಾರಂಭಿಸುವ ಸಾಹಸಕ್ಕೆ ಕೈ ಹಾಕಿದ್ದೆವು!

ರಾಜ್‌ಹನ್ಸ್ ಪ್ರಿಂಟರ್ಸ್‌ನ ಬಾಲಿಯವರು ಪತ್ರಿಕೆಯನ್ನು ಮುದ್ರಿಸಿ ಕೊಡುವುದಕ್ಕೆ ಉದಾರ ಮನಸ್ಸಿನಿಂದ ಒಪ್ಪಿಕೊಂಡರು. ಅಪ್ಪನ ಅಭಿಮಾನಿಯಾದ ಶ್ರೀಧರಮೂರ್ತಿಯವರು ನನ್ನನ್ನು ಟೀಗೆಂದು ಮನೆಗೆ ಕರೆದು ನನಗೇ ಆಶ್ಚರ್ಯವಾಗುವಂತೆ ಐವತ್ತು ಸಾವಿರ ರೂಪಾಯಿಗಳನ್ನು ನೀಡಿ ಬೆನ್ನು ತಟ್ಟಿದರು. ಅವರಂತೆ ಹಲವು ಮಿತ್ರರೂ ಮುಂದೆ ಬಂದು ತಮ್ಮ ಕೈಲಾದಷ್ಟು ನೆರವು ನೀಡಿದರು. ಅವರುಗಳಲ್ಲಿ ಒಬ್ಬನೇ ಒಬ್ಬ ರಾಜಕಾರಣಿಯಾಗಲೀ, ಮಠಾಧೀಶನಾಗಲೀ, ಅಧಿಕಾರಿಯಾಗಲೀ ಇಲ್ಲದಿದ್ದದ್ದು ಮುಖ್ಯ. ಹಾಗೆ ಸಹಾಯ ಮಾಡಿದವರೆಲ್ಲಾ ನಮ್ಮಂತೆ ಸಾಮಾನ್ಯ ಮನುಷ್ಯರು!

ಆದರೆ ಪತ್ರಿಕೆ ಕಚೇರಿಗೆ ಕಂಪ್ಯೂಟರ್‌ನಿಂದ ಹಿಡಿದು ಹಲವಾರು ಸಲಕರಣೆಗಳು ಬೇಕೇ ಬೇಕಾಗುತ್ತದೆ. ಸ್ನೇಹಿತರು ನೀಡಿದ ಹಣ ಅದಕ್ಕೆ ಸಾಕಾಗುವಂತಿರಲಿಲ್ಲ. ಆಗ ಬಾಬಯ್ಯರವರು ತಮ್ಮ ಮನೆಯಲ್ಲಿದ್ದ ಕಂಪ್ಯೂಟರ್ ಅನ್ನು ತಂದಿಟ್ಟರು. ಅಲ್ಲಿಯವರೆಗೂ ನನಗೆ ಪರಿಚಯವೇ ಇಲ್ಲದಿದ್ದ ಹರಿ ಮತ್ತು ಸುಕನ್ಯ (ಇವರಿಬ್ಬರೂ ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸುತ್ತಾರೆ) ಎರಡು ಕಂಪ್ಯೂಟರ್‌ಗಳನ್ನು ಖರೀದಿಸಿ ಕೊಟ್ಟರು. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಯುವರಾಜ್ ತನ್ನಲ್ಲಿದ್ದ ಪ್ರಿಂಟರ್ ನೀಡಿದ. ಬೇಬಿ ತನ್ನ ಸ್ಕ್ಯಾನರ್ ಕೊಟ್ಟಳು. ಹೀಗೆ ಆಫೀಸಿಗೆ ಅಗತ್ಯವಿದ್ದದ್ದನ್ನೆಲ್ಲ ಸ್ನೇಹಿತರೇ ಒದಗಿಸಿದರು.

(5ನೇ ಪುಟಕ್ಕೆ...)

ದ್ರೌಪದಿಯಾಗಲೊಲ್ಲದವರು

ಪಾಂಚಾಲಿ

...ನಮ್ಮ ಪುರಾಣಗಳಲ್ಲಿನ ಮಹಿಳೆಯರಲ್ಲಿ ನನ್ನನ್ನು ...ಬಾ ಕಾಡುವವಳು ದ್ರೌಪದಿ. ಹಲವರ ಪ್ರಕಾರ ...ಪದಿ ಮಹಾಭಾರತದ ಯುದ್ಧಕ್ಕೆ ಕಾರಣವಾಗಿ...ಂದ ಆಕೆ ರಾಮಾಯಣದ ಸೀತೆಯಷ್ಟು ಅಸಹಾ...ಕಳಾಗಿರಲಿಲ್ಲ. ಆದರೆ ನನ್ನ ಪ್ರಕಾರ ದ್ರೌಪದಿ ...ಗಿಂತಲೂ ಅಸಹಾಯಕಳಾಗಿದ್ದಳು ಮಾತ್ರವಲ್ಲ, ...ರ್ಭದ ಬಲಿಪಶು ಕೂಡ ಆಗಿದ್ದಳು. ದ್ರೌಪದಿ...ಹವೇ ಇವತ್ತಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಬಲಿ...ವಾಗುತ್ತಿರುವವರ ಬಗ್ಗೆ, ಹಲವೊಮ್ಮೆ ಅದನ್ನು ...ರಿ ನಿಲ್ಲುತ್ತಿರುವವರ ಬಗ್ಗೆ ಈ ಅಂಕಣದಲ್ಲಿ ...ಯುತ್ತಿರುವುದರಿಂದ ಇದಕ್ಕೆ 'ಪಾಂಚಾಲಿ' ಎಂದು ...ರಿಟ್ಟಿದ್ದು.

ಇದನ್ನೆಲ್ಲ ಯಾಕೆ ಹೇಳಬೇಕಾಯಿತೆಂದರೆ ಇತ್ತೀಚೆಗೆ ನಡೆದ ಒಂದು ಘಟನೆ ಮಹಾಭಾರತದ ದ್ರೌಪದಿಯನ್ನು ನೆನಪಿಗೆ ತಂದಿತು.

ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ತ್ರಿಪಲಾ ಕುಮಾರಿ ಎಂಬ ಆದಿವಾಸಿ ಹುಡುಗಿಯ ಬಗೆಗಿನ ವರದಿ ಓದಿದ ನಾನು ಅಮ್ಮನಿಗೆ ಹೇಳಿದೆ: "ನೋಡಮ್ಮ, ನೀನು ಯಾವಾಗಲೂ ದ್ರೌಪದಿ ಸ್ವತಂತ್ರಳು, ಗಟ್ಟಿ ಹೆಣ್ಣು ಅನ್ನುತ್ತಿರುತ್ತೀಯಲ್ಲ? ಇವತ್ತು ದ್ರೌಪದಿ ತರಹ ಹಲವಾರು ಗಂಡಂದಿರನ್ನು ಕಟ್ಟಿಕೊಳ್ಳುವುದಕ್ಕೆ ನಿರಾಕರಿಸಿದ್ದರಿಂದ ತ್ರಿಪಲಾ ಕುಮಾರಿ ಎಂಬ ಹುಡುಗಿಯೊಬ್ಬಳ ಹೆಣ ಬಿದ್ದಿದೆ. ಅವಳು ತನ್ನ ಗಂಡ ಅಜ್ಮೆರ್ ಸಿಂಗ್‌ನ ಸಹೋದರರೊಂದಿಗೆ ಮಲಗುವುದಿಲ್ಲ ಎಂದಿದ್ದಕ್ಕೆ, ಗಂಡನೇ ಅವಳನ್ನು ಕೊಂದು ಹಾಕಿದ್ದಾನೆ. ಅವತ್ತು ಕೂಡ ದ್ರೌಪದಿ ತ್ರಿಪಲಾಳಂತೆ ನಿರಾಕರಿಸಿದ್ದರೆ ನಿನ್ನ ಪ್ರೀತಿಯ ಮಹಾಭಾರತವೇ ಇರುತ್ತಿರಲಿಲ್ಲ."

"ಹೌದು. ಈಗಿನ ಕಾಲದಲ್ಲಿ ನೀನೊಬ್ಬಳೇ 'ಪಾಂಚಾಲಿ' ನೋಡು" ಅಂದರು ಅಮ್ಮ ಹುಬ್ಬು ಗಂಟಿಕ್ಕುತ್ತಾ. ಅಮ್ಮನಿಗೆ ತಮ್ಮ ಮುದ್ದು ಶಾರದೆ 'ಪಾಂಚಾಲಿ' ಅಂತ ಅಂಕಣ ಬರೆಯುತ್ತಿರುವುದು ತುಂಬಾ ಮುಜುಗರದ ಸಬ್ಜೆಕ್ಟು! "ನೀನು ನನ್ನ ಜೊತೆ ಜಗಳ ಮಾಡಕ್ಕೆ ಹೀಗೆ ಮಾತಾಡ್ತೀಯ ಅಂತ ಗೊತ್ತು. ಹೋಗಲಿ ಹೇಳು ಏನು ಈ ತ್ರಿಪಲಾಳ ಕತೆ?" ಎಂದು ಕೇಳಿದರು.

"ತ್ರಿಪಲಾ ಕುಮಾರಿ ಛತ್ತೀಸ್‌ಗಡ್‌ದ ಆದಿವಾಸಿ ಹುಡುಗಿ. ಅವಳಿಗೆ ಕೆಲಸ ಕೊಡಿಸುವುದಾಗಿ ನಂಬಿಕೆ ಮೂಡಿಸಿದ ತಲೆಹಿಡುಕನೊಬ್ಬ ಅವಳನ್ನು ಹರಿಯಾಣ ರಾಜ್ಯಕ್ಕೆ ಕರೆತಂದ. ಆದರೆ ಅಲ್ಲಿ ಅವಳಿಗೆ ಕೆಲಸ ಕೊಡಿಸುವ ಬದಲಾಗಿ ಅಜ್ಮೆರ್ ಸಿಂಗ್ ಎಂಬಾತನೊಂದಿಗೆ ಮದುವೆ ಮಾಡಿಸಿದ. ಆದರೆ ಅದು ಸಮಾಜದ ಮನ್ನಣೆ ಪಡೆದಿರುವ ಮದುವೆ ಆಗಿರದೆ ಒಂದು ನಾಟಕವಾಗಿತ್ತಷ್ಟೇ. ಅವಳನ್ನು ತನ್ನ ಇಷ್ಟಾನುಸಾರ ಅನುಭವಿಸಿದ ಅಜ್ಮೆರ್ ಸಿಂಗ್ ಆನಂತರ ಆಕೆ ತನ್ನ ಸಹೋದರರೊಂದಿಗೂ ಮಲಗಬೇಕು ಎಂದು ಆದೇಶಿಸಿದ. ಇದಕ್ಕೆ ತ್ರಿಪಲಾ ಒಪ್ಪದಿದ್ದಾಗ ಅವಳನ್ನು ಆತ ಕೊಂದು ಹಾಕಿದ," ಎಂದು ...ಓದಿದ್ದರ ಸಾರಾಂಶವನ್ನು ಅಮ್ಮನಿಗೆ ಒಪ್ಪಿಸಿದೆ. "ಅಯ್ಯೋ ಪಾಪ. ಅವಳ ಗಂಡನಿಗೇನಾಗಿತ್ತು? ತನ್ನ ತಮ್ಮಂದರಿಗೆ ಹೆಣ್ಣು ನೋಡಿ ಮದುವೆ ಮಾಡಲಿಕ್ಕಾಗಲಿಲ್ಲವಾ?" ಎಂದು ಅಮ್ಮ ಬೇಸರಪಟ್ಟರು.

"ಅಲ್ಲ ಅಮ್ಮ, ಈಗ ಹೆಣ್ಣು ಭ್ರೂಣ ಹತ್ಯೆಯಿಂದಾಗಿ ಹರಿಯಾಣ ರಾಜ್ಯದಲ್ಲಿ ವಧುಗಳೇ ಇಲ್ಲದಂತಾಗಿದೆ. ಆ ಕಾರಣದಿಂದಲೇ ಅವಳು ಬಹುಪತಿತ್ವ ಪಾಲಿಸಬೇಕು ಅಂದಿದ್ದಾನೆ: ಅವತ್ತು ಕಾಡಿನಲ್ಲಿದ್ದ ಪಾಂಡವರೂ ಹೇಳಿದ್ದಂತೆ."

"ಏ ಶಾರು, ಆ ಪಾಂಡವರಿಗೂ ಈ ಖದೀಮ ಅಜ್ಮೆರ್‌ನಿಗೂ ಏನೇ ಸಂಬಂಧ?" ಎಂದು ಅಮ್ಮ ಕೋಪಗೊಂಡರು.

"ಸಂಬಂಧ ಇದೆ ಅಮ್ಮ. ಅವತ್ತು ಪಾಂಡವರು ದ್ರೌಪದಿಯ ಸ್ವಯಂವರಕ್ಕೆ ಹೋಗುತ್ತಿದ್ದಾರೆ ಅಂತ ಕುಂತಿಗೆ ಗೊತ್ತಿತ್ತು. ಆದರೆ ಅರ್ಜುನ ಮಾತ್ರ ದ್ರೌಪದಿಯೊಂದಿಗೆ ದಾಂಪತ್ಯ ಜೀವನ ಸಾಗಿಸುತ್ತಾ ಇತರರು ಬ್ರಹ್ಮಚಾರಿಗಳಾಗಿರುವುದು ಅಸಾಧ್ಯ ಅಂತಾನೂ ಆಕೆಗೆ ಗೊತ್ತಿತ್ತು. ಅದಕ್ಕೆ "ಎಂತಹ ಹಣ್ಣು ತಂದಿದ್ದೀವಿ ನೋಡು" ಎಂದು ಪಾಂಡವರು ಹೇಳಿದಾಗ ಆಕೆ ಬೇಕಂತಲೇ "ಹಣ್ಣು" ಅಂತ ಹೇಳುತ್ತಿದ್ದಾರೆ ಎಂದು ಭಾವಿಸಿ "ಎಲ್ಲರೂ ಹಂಚಿಕೊಳ್ಳಿ" ಅಂದಳು. ಆ ಸಂದರ್ಭದಲ್ಲಿ ದ್ರೌಪದಿ ಏನು ಮಾಡಕ್ಕಾಗುತ್ತಿತ್ತು? ಅವಳು ವಿಧಿ ಇಲ್ಲದೆ ಬಹುಪತಿತ್ವಕ್ಕೆ ಒಪ್ಪಬೇಕಾಯಿತು," ಅಂತ ನಾನು ಹೇಳಿದಾಗ ಗುಂಟು ಮುಖ ... ಅಮ್ಮ "ನಿನ್ನ ಬಾಯಲ್ಲಿ ಯಾವುದೂ ಪವಿತ್ರವಾಗಿ ಉಳಿಯಲ್ಲ ನೋಡು" ಎಂದು ಗದರಿದರು.



"ಅಲ್ಲಮ್ಮ, ಪಾಪ ದ್ರೌಪದಿಯ ತಪ್ಪಲ್ಲ ಅದು. ಆ ಪಾಂಡವರು ಇದ್ದರಲ್ಲ, ಅವರ ಸ್ವಾರ್ಥ ಅದು. ನೋಡು, ಕಾಡಿನಲ್ಲಿದ್ದಾಗ ತಾವೆಲ್ಲರೂ ಹೇಗೆ ದ್ರೌಪದಿಯನ್ನು ಹಂಚಿಕೊಂಡರು. ಆಕೆ ಸರದಿ ಮೇಲೆ ಆ ಐವರೊಂದಿಗೆ ಜೀವಿಸಬೇಕಿತ್ತು. ಆದರೆ ಪಾಂಡವರು ಮಾತ್ರ ತಾವು ಹೋದ ಜಾಗಗಳಲೆಲ್ಲ ಒಬ್ಬೊಬ್ಬರೂ ನಾಲ್ಕೈದು ಬಾರಿ ಬೇರೆ ಮಹಿಳೆಯರನ್ನು ಮದುವೆಯಾದರು," ಅಂತ ಹೇಳಿದಾಗ, ನನ್ನ ತರ್ಕದಲ್ಲಿ ತಪ್ಪು ಕಂಡುಹಿಡಿದವರಂತೆ ಖುಷಿಯಾದ ಅಮ್ಮ "ಆದರೆ ಧರ್ಮರಾಯ ಮಾತ್ರ ದ್ರೌಪದಿಯನ್ನು ಬಿಟ್ಟು ಬೇರೆಯವಳನ್ನು ಮದುವೆ ಆಗಲಿಲ್ಲ" ಅಂದರು.

ನನಗೆ ನಗೆ ಉಕ್ಕಿ ಬಂತು. "ಸದ್ಯ ಆ ಧರ್ಮರಾಯ ಹೆಚ್ಚು ಮಹಿಳೆಯರನ್ನು ಮದುವೆ ಆಗಿದ್ದರೆ ಅವರನ್ನೂ ತನ್ನ ಜೂಜಿನ ತೆವಲಿಗೆ ಹರಾಜು ಹಾಕುತ್ತಿದ್ದ!" ಎಂದಾಗ ಅಮ್ಮ ಸುಮ್ಮನಾದರು. ತ್ರಿಪಲಾಳ ಬಗ್ಗೆ ಚಿಂತಿಸುತ್ತಾ ಕೂತೆ. ಇನ್ನೂ ಹದಿನೆಂಟು ವರ್ಷ ವಯಸ್ಸು ಕೂಡ ಆಗಿರದಿದ್ದ ಆ ಅಮಾಯಕ ಹುಡುಗಿ ಗಂಡು ಮಕ್ಕಳಿಗಾಗಿ ತಹತಹಿಸುವ ಸಮಾಜದಲ್ಲಿ, ಮಹಿಳೆಯರನ್ನು ಕಾಮದ ಸರಕನ್ನಾಗಿ ಕಾಣುವ ಮನಸ್ಥಿತಿಯಲ್ಲಿ, ತನ್ನ ವ್ಯಕ್ತಿತ್ವದ ಘನತೆ, ಸ್ವಾಭಿಮಾನಕ್ಕಾಗಿ ದನಿ ಎತ್ತಿ ಬಲಿಯಾಗಿದ್ದು ಬರೀ ಆಕೆಯ ದುರಂತವಲ್ಲ, ನಮ್ಮ ಸಮಾ... ಅನ್ನಿಸಿ ಕಣ್ಣುತುಂಬಿ ಬಂದವು...

-ಶಾರದೆ

ಸಿಟ್ಟು ತನ್ನ ವೈರಿ, ಶಾಂತಿ ಪರರ ವೈರಿ -ಗಾದೆ

ಪೂರ್ಣಚಂದ್ರ ತೇಜಸ್ವಿ ಮತ್ತೊಮ್ಮೆ ಕನ್ನಡ ಓದುಗರನ್ನು ಭೇಟಿಯಾಗಿದ್ದಾರೆ!

ಅವರ ಹೊಸ ಕಾದಂಬರಿ 'ಮಾಯಾಲೋಕ' ಈಗ ತಾನೇ ಬಿಡುಗಡೆಯಾಗಿದೆ. ಪ್ರಿಂಟಾದ ಕೇವಲ ಐವತ್ತೇ ದಿನಗಳಲ್ಲಿ ಒಂಬತ್ತು ಸಾವಿರ ಪ್ರತಿಗಳು ಖರ್ಚಾಗಿದೆ. ಕನ್ನಡ ಸಾಹಿತ್ಯ ಲೋಕದಲ್ಲಿ ತೇಜಸ್ವಿಯವರ ಬರವಣಿಗೆ ಇಷ್ಟಪಡುವ ಓದುಗರಲ್ಲಿ ಈಗ 'ಮಾಯಾಲೋಕ'ದ್ದೇ ಚರ್ಚೆ.

ಇದೊಂತರಾ ವಿಶಿಷ್ಟ ಸಂಭ್ರಮದ ಗಳಿಗೆ. ಬರಹಗಾರನೊಬ್ಬನ ಹೊಸ ಪುಸ್ತಕ್ಕಾಗಿ ಜನ ಕಾಯುವುದು, ಹೀರೋ ಒಬ್ಬನ ಹೊಸ ಸಿನಿಮಾ ರಿಲೀಸ್ ಆಗುವಾಗ ಅಭಿಮಾನಿಗಳಿಗೆ ಅದೊಂತರಾ ಈವೆಂಟ್ ಅನ್ನಿಸೋ ಹಾಗೆ ಹೊಸ ಪುಸ್ತಕವೂ ಎಲ್ಲರ ಗಮನ ಸೆಳೆಯುವುದು ಏನು ಕಡಿಮೆ ವಿಚಾರವೇನಲ್ಲ.

ಹಾಗೆ ನೋಡಿದರೆ ತೇಜಸ್ವಿ ಕನ್ನಡದ ಸೆಲೆಬ್ರಿಟಿ ಬರಹಗಾರರೆ. ಅವರ ಪ್ರತಿ ಮಾತು, ಗ್ರಹಿಕೆ, ಚಿಂತನೆ, ಬರವಣಿಗೆ ಎಲ್ಲವನ್ನು ಕನ್ನಡಿಗರು ಅತೀ ಅಮೂಲ್ಯವೆಂಬಂತೆ ಪರಿಗಣಿಸಿದ್ದಾರೆ. ಓದಿ ಸಂತೋಷ ಪಟ್ಟಿದ್ದಾರೆ. ತೇಜಸ್ವಿಯವರಂತೆಯೇ ದುಗುಡಗೊಂಡಿದ್ದಾರೆ. ಈ ಗದ್ದಲದಲ್ಲಿ ತೇಜಸ್ವಿಯವರನ್ನು ನಿಷ್ಠುರವಾಗಿ ಟೀಕಿಸುವಷ್ಟು, ವಿಮರ್ಶಿಸುವಷ್ಟು ವಿವೇಚನೆಯನ್ನು ತೋರಿದವರು ಕಡಿಮೆ ಎಂದೇ ಹೇಳಬೇಕು.

ಅದಿರಲಿ, ತೇಜಸ್ವಿ ಒಬ್ಬ ಸೆಲೆಬ್ರಿಟಿ ರೈಟರ್ ಎಂಬ ವಿಚಾರಕ್ಕೆ ಮತ್ತೆ ಬರುವುದಾದರೆ ಅವರ ಮಾಯಾಲೋಕ ಪ್ರಿಂಟಾಗಿ ಬರುವ ಮೊದಲು ಮಯೂರ ಮಾಸಿಕದ ಡಿಸೆಂಬರ್-ಜನವರಿ ಸಂಚಿಕೆಯಲ್ಲಿ ಕಾದಂಬರಿಯಿಂದ ಅಲ್ಲಲ್ಲಿ ಆಯ್ದ ಹತ್ತಿಪ್ಪತ್ತು ಪುಟಗಳು ತುಣುಕುಗಳಂತೆ ಪ್ರಕಟವಾಗಿದ್ದವು. ತೇಜಸ್ವಿಯವರು ಹೊಸ ಧಾರಾವಾಹಿ ಬರೆಯುತ್ತಿದ್ದಾರೆಂದು ನಂಬಿ ಸಾವಿರಾರು ಜನ ಮಯೂರ ಓದಲು ಶುರು ಮಾಡಿದ್ದರೆಂಬುದೂ ನಿಜ. ಮಾಯಾಲೋಕವನ್ನು ಸೀರಿಯಲ್ ಆಗಿ ಪ್ರಕಟಿಸುತ್ತೇವೆಂದು ತರಂಗ ವಾರ ಪತ್ರಿಕೆ ಹಾಗೂ ವಿವೇಕ್ ಶಾನಭಾಗರ 'ದೇಶಕಾಲ' ಕೇಳಿದ್ದರಂತೆ. 'ಅದೆಲ್ಲಾ ನಿಮಗೆ ಸೂಟ್ ಆಗಲ್ಲ ಕಣ್ರಿ' ಎಂದು ತೇಜಸ್ವಿ ಬೇಡ ಎಂದಿದ್ದರಂತೆ. ಆದರೆ ಮಯೂರ ಸಂಪಾದಕ ಜಿ.ಪಿ. ಬಸವರಾಜು ಮಾತ್ರ ಹಠ ಮಾಡಿ ಕಾದಂಬರಿಯ ಒಂದು ಸಣ್ಣ ಚಾಪ್ಟರ್ ಮುದ್ರಿಸಿ ಮಾಯಾಲೋಕದ ಬಿಡುಗಡೆಗೆ ಒಂದು ತರದ ಕರ್ಟನ್ ರೈಸರ್ ಸಂದರ್ಭ ಸೃಷ್ಟಿಸಿಕೊಟ್ಟರು.

ಗೊಂದಲಗೇರಿ ಅರ್ಥಾತ್ ಮೂಡಿಗೆರೆ ಸುತ್ತಲಿನ ಕೆಲ ದಿನಗಳ ಜನಜೀವನವೆಂಬ 'ಮಾಯಾಲೋಕ' ಕನ್ನಡ ಓದುಗರ ವಾಸ್ತವ ಲೋಕವನ್ನು ಪ್ರವೇಶಿಸಿದ್ದು ಹೀಗೆ.

ಏನಿದು 'ಮಾಯಾಲೋಕ

1998-99 ರಲ್ಲಿ ಬಂದ ಮಿಲೇನಿಯಂ ಸೀರಿಸ್‌ನ 16 ಪುಸ್ತಕಗಳ ನಂತರ, ಆರು ವರ್ಷ ಆದ ಮೇಲೆ ತೇಜಸ್ವಿಯವರ ಹೊಸ ಕಾದಂಬರಿ ಬಂದಿದೆ. 247 ಪುಟ, 217 ಫೋಟೋ ಹಾಗೂ 222 ರೂಪಾಯಿಗಳ ಈ ಪುಸ್ತಕ ಎಂದಿನಂತೆ ಮೂಡಿಗೆರೆ ಸುತ್ತಲಿನ ಜನಜೀವನ, ಕಾಡು, ಕೃಷಿ, ಪ್ರಾಣಿ-ಪಕ್ಷಿಗಳ ವಾಸ್ತವ ಲೋಕಕ್ಕೆ ಓದುಗನನ್ನು ಕರೆದೊಯ್ಯುತ್ತದೆ. ಬರಹಗಾರನೊಬ್ಬನ ಕಲ್ಪನಾ ಲೋಕದ ಕನವರಿಕೆಗಳಿಗಿಂತಾ, ಭ್ರಮೆಯ ಬರವಣಿಗೆಗಳಿಗಿಂತಾ ನಮ್ಮ ಸುತ್ತಮುತ್ತಲಿನ ಜನಜೀವನವನ್ನೇ ಪರಿಶೋಧಿಸುತ್ತಾ ಅರ್ಥ ಮಾಡಿಕೊಳ್ಳಲು ಸರ್ಕಸ್ ನಡೆಸುತ್ತಾ, ದಕ್ಕಿದ್ದಷ್ಟನ್ನು ಸೃಜನಶೀಲರಾಗಿ ದಾಖಲಿಸುವ ತೇಜಸ್ವಿಯವರ ಬರವಣಿಗೆಗೆ ಈಗ ನಲವತ್ತು ವರ್ಷ. ಈಗ್ಗೆ ನಾಲ್ಕು ದಶಕಗಳ ಹಿಂದೆ ಮೈಸೂರಿನ ಸಾಹಿತಿ ಮಿತ್ರರಿಗೆ 'ನೀವು ಮುಟ್ಟು ಒಬ್ಬಟ್ಟು ಇತ್ಯಾದಿಗಳ ಬಗ್ಗೆನೇ ಬರಕೊಂಡಿರಿ, ನಾನು ಅನುಭವಗಳ ಬೆನ್ನು ಹತ್ತಿ ಹೋಗುತ್ತೇನೆ' ಎಂದು ಪೇಟೆ ಬಿಟ್ಟು ಕಾಡು ಸೇರಿಕೊಂಡಿದ್ದವರು ತೇಜಸ್ವಿ. ಅಲ್ಲಿಂದಾಚೆಗೆ ಅಬಚೂರಿನ ಪೋಸ್ಟಾಫೀಸು, ಕರ್ವಾಲೊ, ಚಿದಂಬರ ರಹಸ್ಯ ಪರಿಸರದ ಕತೆಗಳು, ಕಿರಗೂರಿನ ಗಯ್ಯಾಳಿಗಳು, ಜುಗಾರಿ ಕ್ರಾಸ್, ಮಿಲೇನಿಯಂ ಸೀರಿಸ್‌ಗಳ ಮೂಲಕ ಕನ್ನಡ ಓದುಗನ ಪ್ರಜ್ಞೆಯನ್ನು ತೇಜಸ್ವಿ ಇನ್ನಷ್ಟು ಶ್ರೀಮಂತ ಗೊಳಿಸಿದ್ದಾರೆ. ಪ್ರಬುದ್ಧ ಗೊಳಿಸಿದ್ದಾರೆ.

'ಮಾಯಾಲೋಕ' ಅದರ ಮುಂದುವರೆದ ಭಾಗದಂತಿದೆ.

ಅಮೆರಿಕಾ-ಯೂರೋಪ್‌ಗಳಲ್ಲಿ ಜೆ.ಕೆ. ರೌಲಿಂಗ್‌ಳ 'ಹ್ಯಾರಿ ಪಾಟರ್' ಎಂಬ ಮಕ್ಕಳ ಭ್ರಮಾತ್ಮಕ ಮಾಟಮಂತ್ರದ ಪುಸ್ತಕದ ಕೋಟ್ಯಂತರ ಪ್ರತಿಗಳು ಮಾರಾಟವಾಗುತ್ತಿವೆ. ಹಾಲಿವುಡ್ ಸಿನಿಮಾಗಳೀಗ ಮನುಷ್ಯ ಜಗತ್ತಿನ ಚಿತ್ರಣ ತ್ಯಜಿಸಿ ಪರಲೋಕ ಜೀವಿಗಳ ಸಿನಿಮಾ ತೆಗೆಯುತ್ತಾ ತಬ್ಬಲಿಗಳಾಗಿದ್ದಾರೆ. ಇಂಥ ಟ್ರೆಂಡ್‌ಗಳ ನಡುವೆ ನಮ್ಮ ಸುತ್ತಲಿನ ಜನರ ಬದುಕನ್ನೇ ಕತೆಯಾಗಿಸುವ ತೇಜಸ್ವಿ ಸೂಕ್ಷ್ಮ, ಜೀವಂತ ಓದುಗನಿಗೆ ಆಪ್ತರೆನಿಸುವುದು ಸಹಜ.

'ಮಾಯಾಲೋಕ'ದಲ್ಲಿ ಬರುವ ಕರಾಟೆ ಮಂಜ ಎಂಬಾತ ಪಾನಿಪೂರಿ, ಎಳನೀರು ವ್ಯಾಪಾರ ಮಾಡಿ ನಂತರ ಫೋಟೋ ಸ್ಟುಡಿಯೋದಲ್ಲಿ ಕೆಲಸಕ್ಕೆ ಸೇರಿ ಕೊನೆಗೆ 'ಪ್ರಕಾಶವಾಣಿ' ಪತ್ರಿಕೆಗೆ ರಿಪೋರ್ಟರ್ ಆಗಿಬಿಡುತ್ತಾನೆ. ಆದರೆ ಇವೆಲ್ಲಾ ಅವನ ತಿಳುವಳಿಕೆ ಹೆಚ್ಚಿಸುತ್ತವೆಯೇ ವಿನಃ ಅವನ ಸ್ಥಿತಿಗತಿಗಳಲ್ಲಿ ಯಾವ ಏಳಿಗೆಯೂ ಬರುವುದಿಲ್ಲ.

ಈ ಕರಾಟೆ ಮಂಜ ಕಾಲೇಜು ಹುಡುಗಿಯರನ್ನು ಚುಡಾಯಿಸುತ್ತಿದ್ದ ನಾಲ್ವರು ಸಾಹುಕಾರ ಯುವಕರಿಗೆ ಕರಾಟೆ ಏಟು ಕೊಟ್ಟು ಬೀಳಿಸಿ ರಾತ್ರೋರಾತ್ರಿ ಹೋಬಳಿಗೇ ಪ್ರಖ್ಯಾತನಾಗಿರುತ್ತಾನೆ. ಈ ಸುದ್ದಿ ಕೇಳಿದ ತೇಜಸ್ವಿ ಸುಮ್ಮನಿರಲಾಗದೆ ಮಂಜನನ್ನು ಹುಡುಕಿಕೊಂಡು ಹೋಗಿ ಕರಾಟೆ ವಿದ್ಯೆಯ ಬಗ್ಗೆ ವಿಚಾರಣೆ ಮಾಡುತ್ತಾರೆ. ಆ ಮಂಜ 'ನೀವು ಕರಾಟೆ ಕಲೀರಿ ಸಾರ್' ಎಂದರೆ 'ಬೇಡಾ ಮಾರಾಯ, ನನಗೆ ಇರೋ ಚಾಳಿಗಳೇ ಸಾಕಾಗಿದೆ. ಕೂದಲು ಬೆಳ್ಳಗಾಗಿ ಹಲ್ಲೆಲ್ಲಾ ಅಲ್ಲಾಡುತ್ತಿದೆ. ಈ ವಯಸ್ಸಲ್ಲಿ ಕರಾಟೆ ಕಲಿಅಂತಿಯಲ್ಲೊ' ಎಂದು ತೇಜಸ್ವಿ ತಪ್ಪಿಸಿಕೊಳ್ಳುತ್ತಾರೆ.

ಬಿಳಿದಾಳೆ ಈಶ

ಇದೇ ರೀತಿ ಮೆಣಸಿನಕಾಯಿ ಬೆಳೆಯಲು ಹೊರಡುವ ರೈತ ಅಣ್ಣಪ್ಪಣ್ಣ, ಕರಿಮೀನು ವ್ಯಾಪಾರಿ ಅಬ್ಲೂಸ್ ಬ್ಯಾರಿ, ಹಜಾಮರ ಬಾಬು, ಪ್ರಕಾಶವಾಣಿ ಪತ್ರಿಕೆ ಸಂಪಾದಕ ಪ್ರಕಾಶ್, ರೈತ ಸಂಘದ ಶೇಖರ ಮುಂತಾದವರೆಲ್ಲಾ ಅವರವರದೇ ನಾನಾ ತಾಪತ್ರಯಗಳಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿರುತ್ತಾರೆ. ಈ ಸಮಸ್ಯೆಗಳಿಗೆ ಹೊಸ ಹೊಸಬರನ್ನು ಭಾಗಿಯಾಗಿಸುತ್ತಾ ಜೀವನವನ್ನು ಇನ್ನಷ್ಟು ಸಂಕೀರ್ಣಗೊಳಿಸಿಕೊಂಡು ಅರಾಜಕ ಸ್ಥಿತಿ ಸೃಷ್ಟಿಸುತ್ತಿರುತ್ತಾರೆ.


ಭೂತ-ಭವಿಷ್ಯತ್ತುಗಳ ಚಿಂತೆಯಲ್ಲಿ ಸಿಕ್ಕಿಕೊಂ[...] ವರ್ತಮಾನವನ್ನು ಬಲಿಕೊಡದೆ ತಮ್ಮ ಕಣ್ಣೆದುರಿನ ತತ್‌[...] ವಾಸ್ತವದಲ್ಲೇ ಬದುಕುವುದು ಅವರ ಜಾಯಮಾ[...] ತೇಜಸ್ವಿಯವರು ಯಥಾಶಕ್ತಿ ಇವರ ಸಂಕೀ[...] ಜೀವನದೊಳಗೆ ಪ್ರವೇಶಿಸುತ್ತಾ ಹೊರಬರುತ್ತಾ ಅದ[...] ಕತೆಯಾಗಿ ಬೆಳೆಸುತ್ತಾರೆ.

ಮೂರು ವರ್ಷ ಕಾಲ ನೆಟ್ಟಗೆ ಮಳೆಯಾಗದಿರುವು[...] ಊರಲ್ಲಿ, ಮಕ್ಕಿಗದ್ದೆ, ಗೊಂದಲಗೇರಿಗಳ ನೂರಾರು ಜ[...] ಬದುಕಿನಲ್ಲಿ ಹೇಗೆ ಪ್ರಕ್ಷುಬ್ಧತೆ ಸೃಷ್ಟಿಸುತ್ತಾ ಹೋಯಿ[...]ತೆಂಬುದು ಒಟ್ಟಾರೆ ಮಾಯಾಲೋಕದ ಕಥಾ ಸಾರಾಂ[...]

ನಮ್ಮ ಶಕ್ತಿಗೆ ನಿಲುಕದ, ನಿಯಂತ್ರಿಸಲಾಗದ ಒತ್ತಡಗ[...] ನಿರ್ಮಿಸುತ್ತಿರುವ ಬೆಂತರಲೋಕವೊಂದರಲ್ಲಿ ಎಲ್ಲರ[...] ಬಂಧಿಗಳೇ ಎಂಬುದು ಅವರ ಗ್ರಹಿಕೆ.

ಇವೆಲ್ಲಾ ಪರಾಕಾಷ್ಠೆ ತಲುಪಿ ಇನ್ನೇನು ಸ್ಫೋಟಗೊ[...]ಲಿದೆ ಎನ್ನುವಷ್ಟರಲ್ಲಿ 'ಧೋ' ಎಂದು ಮಳೆ ಶುರುವಾಗುತ್ತ[...] ಎಲ್ಲಾ ಪಾತ್ರಧಾರಿಗಳ ಮನದೊಳಗೆ ಬೆಳೆಯುತ್ತಿರು[...] ಪ್ರಕ್ಷುಬ್ಧತೆ ತಂತಾನೆ ಕರಗಿ ಎಲ್ಲರೂ ಸಹ[...] ಸ್ಥಿತಿಗೆ ಮರಳುತ್ತಾರೆ-ಇದೂ ಸಹ ತೇಜ[...]ಯವರ ಅನಿಸಿಕೆ.






ಮಾಯಾಲೋಕದಲ್ಲಿ ತೇಜಸ್ವಿ

ಮೂರು ವರ್ಷ ಕಾಲ ನೆಟ್ಟಗೆ ಮಳೆಯಾಗದಿರುವುದೇ ಊರಲ್ಲಿ, ಮಕ್ಕಿಗದ್ದೆ, ಗೊಂದಲಗೇರಿಗಳ ನೂರಾರು ಜನರ ಬದುಕಿನಲ್ಲಿ ಹೇಗೆ ಪ್ರಕ್ಷುಬ್ಧತೆ ಸೃಷ್ಟಿಸುತ್ತಾ ಹೋಯಿತೆಂಬುದು ಒಟ್ಟಾರೆ ಮಾಯಾಲೋಕದ ಕಥಾ ಸಾರಾಂಶ.





ಭ್ರಮಾಲೋಕ

'ಮುಂದುವರೆದ ರಾಷ್ಟ್ರವಾಗಬೇಕೆಂಬ ನಾಗಾಲೋಟ[...] ಸ್ಪರ್ಧೆಗಿಳಿದಿರುವ ಭಾರತದಲ್ಲಿ ಹಳ್ಳಿಗಳು ನೋಡಲ[...] ತಣ್ಣಗೆ ನಿದ್ರಿಸುತ್ತಿರುವಂತೆ ಕಂಡರೂ ಒಳಹೊಕ್ಕು ನೋಡಿದ[...] ಭಯಂಕರ ಅಲ್ಲೋಲಕಲ್ಲೋಲದ [...] ಹೆದ್ದರೆಗಳ ಮೇಲೆ ತುಯ್ದಾಡುತ್ತಿರುವುದು[...] ಕಾಣುತ್ತದೆ. ಮುಂದುವರೆಯುವುದಕ[...] ಹಳ್ಳಿಗಳ ದಿನನಿತ್ಯದ ಘಟನಾವಳಿಗಳ ಮಹಾಪೂರಕ್ಕೂ ನೇ[...] ಸಂಬಂಧ ಕಾಣದಿದ್ದರ[...] ಈ ಬಗೆಯ ಅಗಾಧ[...] ಚಟಪಟಿಕೆಗಳಿಗೆ ಪರಂಪರಾಗತ ಜೀವ[...] ಶೈಲಿಯಿಂದ ವೇಗವಾಗಿ ಬದಲಾಗಲು ಹವಣಿಸುತ್ತಿರುವ ದೇಶವೇ ಪರೋಕ್ಷವಾಗಿ ಮತ್ತು ಅಂತರ್ಗಾಮಿಯಾಗಿ ಪ್ರೇರಣೆ ಎನಿಸುತ್ತದೆ. ಇಲ್ಲದಿದ್ದ[...] ನಿಮ್ಮೊಂದು ವಾರದ ದಿನಚರಿಯಲ್ಲಿ ಒಂದು ಬೃಹ[...] ಕಾದಂಬರಿಗಾಗುವಷ್ಟು ಘಟನಾವಳಿಗಳಿಗೂ

ಕೆಲ ಕಾಮಿಡಿ ಸೀನ್‌ಗಳು

ಹಾವು ಕೊಂದು ಏಡಿಗೆ ಹಾಕು

ಮನೆ ಹೊಕ್ಕಿದ್ದ ಹಾವನ್ನು ತೇಜಸ್ವಿ ಹಾಗೂ ಮಗಳು ಸುಸ್ಮಿತ ಹೊಡೆದು ಕೊಂದು ತೋಟದಲ್ಲಿ ಎಸೆದಿರುತ್ತಾರೆ. ಮಾರನೆ ಬೆಳಗ್ಗೆ ಹೋಗಿ ನೋಡಿದರೆ ಹಾವಿನ ಹೆಣ ನಾಪತ್ತೆ!

ಅದೇ ವೇಳೆಗೆ ಪಕ್ಕದ ಜವುಗು ನೀರಿನಲ್ಲಿ ಏಡಿಗಳು ಯಾವುದಕ್ಕೊ ಗುಪ್ಪೆಯಂತೆ ಮುತ್ತಿರುವುದನ್ನು ನೋಡಿ ಅಣ್ಣಪ್ಪಣ್ಣ ಅವನ್ನು ಶಿಕಾರಿ ಮಾಡಿ ಮೂರು ಬಕೆಟ್ ತುಂಬಾ ತುಂಬಿಸಿಕೊಂಡು ತೇಜಸ್ವಿಗೂ ಸ್ವಲ್ಪ ಕೊಡುತ್ತಾನೆ. ಎಲ್ಲರಿಗೂ ಏಡಿ ಸಾರು ನೆನೆದು ಬಾಲಿಗೆ ತೇವ!

ಆಗ ಏಡಿಗಳು ಯಾವುದಕ್ಕೆ ಮುತ್ತಿಗೆ ಹಾಕಿ ಗುಪ್ಪೆಯಂತೆ ಬಿದ್ದಿದ್ದವು ಎಂದು ನೋಡಲೋದರೆ ಅಲ್ಲಿ ತೇಜಸ್ವಿ ಕೊಂದಿದ್ದ ಹಾವಿನ ಅವಶೇಷಗಳು ಸಿಗಬೇಕೆ?

ವಿಷದ ಹಾವನ್ನೇ ತಿಂದಿರುವ ಏಡಿಗಳನ್ನು ತಾವು ಯಾವ ಧೈರ್ಯದ ಮೇಲೆ ತಿನ್ನುವುದೆಂದು ಹೆದರಿ ಏಡಿ ಎಸೆದು ಎಲ್ಲಾ ಪರಾರಿ!

ಸತ್ತ ಹಂದಿ ಬಾಯಮ್ಮನ ಲಂಗ ಉದುರಿಸಿದ್ದು

ಶಿಕಾರಿ ತೇಪಲಿನ ಆನ[...] [...]ಣಸಿನಕಾಯಿ ತೋಟವನ್ನು ಹ[...] [...]ತಿವೆ. [...] ಅವನ್ನು ಕೊಂ(ಲ್ಲಿಂ)ದು ಹಾಕಬೇಕೆನ್ನಿಸು[...] ಕೋಪ ಬಂದಿದೆ. ಹಂದಿ ಜಾಡು ಹಿಡಿದು ಸಾಗುವಾಗ ಶಿಕಾರಿಯವನೊಬ್ಬ ಬಂದೂಕಿನ ಸಮೇತ ಎದುರಾಗುತ್ತಾನೆ. ಅಲ್ಲೇ ಹಂದಿಯೊಂದು ಕಾಣಸಿಗುತ್ತದೆ. ಅಪರಿಚಿತನ ಬಂದೂಕು ಕಿತ್ತುಕೊಂಡು ಅಣ್ಣಪ್ಪಣ್ಣ ಗುಂಡು ಹಾರಿಸುತ್ತಾನೆ. ಆದರೂ ಹಂದಿ ಪರಾರಿ. ಹುಡುಕಿ ಹೋದಾಗ ಪೊದೆಯೊಂದರೊಳಗೆ ಹಂದಿ ಸತ್ತು ಬಿದ್ದಿರುವುದು ಕಾಣಬೇಕೆ. ಅಷ್ಟರಲ್ಲಿ ನೆರೆಯೂರಿನ ಬಾಯಮ್ಮನ ಪ್ರವೇಶ!

ಆ ಹಂದಿ ತಾನು ಸಾಕಿದ್ದು ಕಾಡು ಹಂದಿ ಅಲ್ಲ ಅಂತಾ ಅವಳ ಗಲಾಟೆ. ಸರಿ ಹತ್ತಿರದಿಂದ ಹಂದಿ ನೋಡಿದರೆ ನಾಡಿನದ್ದೋ ಕಾಡಿನದ್ದೋ ಗೊತ್ತಾಗುತ್ತೆ ಎಂಬ ಚರ್ಚೆ ನಡೆದು ಬಾಯಮ್ಮನೇ ಎಲ್ಲರಿಗಿಂತ ಮೊದಲು ಪೊದೆಯೊಳಗೆ ನುಸುಳಿ ಸಾಗುವಾಗ ಸತ್ತಂತೆ ಬಿದ್ದಿದ್ದ ಹಂದಿ ತಟಕನೆದ್ದು ಬಾಯಮ್ಮನ ಕಾಲ ಸಂದೀಲೇ ತೂರಿ ಓಡಬೇಕೆ. ಹಾಗೆ ಪರಾರಿಯಾಗುವಾಗ ಬಾಯಮ್ಮನ ತುಂಡು ಸೀರೆ ಗಢವ ಹಂದಿಯ ಕೋರೆಗೆ ಸಿಕ್ಕು ಗಾಳಿಪಟದಂತೆ ಹಾರಿ ಹೋಗಿ ಅವಳ ಒಳಲಂಗವು ಉದುರಿ ಬಿದ್ದು...



ಜಗಳನಿರತ ಶಿಕಾರಿವೀರರೂ ಪರಾರಿಯಾಗುವ ಸನ್ನಿವೇಶ...

.... ಹೀಗೆ ಇಂಥವು ಹಲವಷ್ಟಿವೆ ಮಾಯಾಲೋಕದಲ್ಲಿ...

ಕಿವಿ-ಮರಿ



ಇದೊಂದು ನಾಯಿ ಮರಿ. ಸದ್ಯಕ್ಕೆ ತೇಜಸ್ವಿಯವರ ಸುತ್ತಾಟದ ಜೊತೆಗಾರ. ಮಾಯಾಲೋಕ ಕಾದಂಬರಿಯಲ್ಲಿ ಇದೇ ಮೊದಲ ಬಾರಿಗೆ ಕಾಣಿಸಿಕೊಂಡಿರುವ ನಾಯಿ 'ಮರಿ' ಗೊಂದಲಗೇರಿಯ ಜನರಿಗೆ, ಅವರ ಸ್ವಭಾವ ಚಟುವಟಿಕೆಗಳ ಜೀವನ ನಾಟಕಕ್ಕೆ ಹೇಳಿ ಮಾಡಿಸಿದಂತೆ ಸಹ ಪಾತ್ರಧಾರಿಯಂತಿದೆ. ಅಷ್ಟೇ ಅಲ್ಲ ಈ ಮೊದಲಿದ್ದ ನಾಯಿ 'ಕಿವಿ'ಯ ಸಹಜ ಉತ್ತ[...]ಧಿಕಾರಿಯಂತಿದೆ.

ತೇಜಸ್ವಿಯವರ ಕರ್ವಾಲೋದಲ್ಲಿ, ಪರಿಸರದ ಕತೆಗಳು ಇನ್ನಿತರ ಬರಹಗಳಲ್ಲಿ ಬರುವ ಕಿ[...] ಕನ್ನಡ ಸಾಹಿತ್ಯದ ಓದುಗರ ಮನಸ್ಸಿನಲ್ಲಿ ನಿಂತಿರು[...] ಒಂದು ಸಜೀವ ಕ್ಯಾರೆಕ್ಟರ್.

ಆ ಕಿವಿ ಹರಕಲು ಬಟ್ಟೆ ಹಾಕಿಕೊಂಡವರು, ಚಪ್ಪಲಿ ಇರದೆ ಓಡಾಡುವವರು, ಭಿಕ್ಷುಕರು ತೇಜಸ್ವಿ ಮನೆ ಹತ್ತಿರ ಕಾಣಿಸಿಕೊಂಡರೆ ಮೂರು ಲೋಕ[...] ಅಲ್ಲಾಡುವಂತೆ ಬೊಗಳಿ ಗಲಾಟೆ ಮಾಡುತ್ತಿತ್ತಂತೆ. ತೇಜಸ್ವಿ ಒಮ್ಮೆ "ನನ್ನಂತ ಸಮಾಜವಾದಿಯ ನಾಯಿಯೇ ಈ ತರ ವರ್ತಿಸಿದರೆ ಇನ್ನು ಬಂಡವಾ[...] ಶಾಹಿಗಳು ಸಾಕುವ ನಾಯಿಗಳು ಹೇಗಿರಬೇಡ[...] ಎಂದು ಕಿವಿಯನ್ನು ಗೇಲಿ ಮಾಡಿದ್ದರು.

ಆದರೆ ಈಗ 'ಮರಿ' ನಾಯಿ ಮಾತ್ರ ಗೊಂದಲಗೇ[...] ಊರಿನಲ್ಲಿ ಸಮಾಜವಾದ, ಬಂಡವಾಳಶಾಹಿಯ ಗೊಡವೆಗೆ ಹೋದಂತೆ ಕಾಣುತ್ತಿಲ್ಲ... ಪಾಪ ಅದಕ್ಕೂ ಗೊಂದಲ[...]ವಾಗಿರಬೇಕು!

ಂದಲಗಳು ಚಿಕ್ಕಿರಿದಿರುವುದಕ್ಕೆ ನೀವು ಇನ್ನೇನು ತಾನೇ ರಣೆ ನೀಡಬಲ್ಲಿರಿ!" ಎಂದು ಪ್ರಶ್ನಿಸುವ ತೇಜಸ್ವಿಯವರ ಈ ಮಾಯಾಲೋಕ ಕಾದಂಬರಿಯ ಒಟ್ಟಾರೆ ಕಥಾ ವರ ಈ ನೆಲೆಯಲ್ಲೇ ಬೆಳೆದಿದೆ. ಉಳಿದಂತೆ ರೈತ ಹೋರಾಟದ, ಕಾರ್ಮಿಕರ ಪ್ರತಿಭಟನೆಗಳು, ರಾಜಕಾರಣಿ, ಪೊಲೀಸರು ಎಲ್ಲರನ್ನು ತೇಜಸ್ವಿ ತಮ್ಮ ಎಂದಿನ ಸಿನಿಕ ರೀತಿಯಲ್ಲಿ ನಿರೂಪಿಸುತ್ತಾರೆ.

ಮನುಷ್ಯ ಜೀವನದ ಪ್ರಶ್ನೆಯನ್ನು ನಿಯಂತ್ರಿಸುತ್ತಿರು ರು ಅಗೋಚರ ಶಕ್ತಿಗಳೆಂಬ ತಮ್ಮ ಹಳೆಯ ನಂಬಿಕೆಗೇ ಹೇತು ಬದ್ಧರುವ ತೇಜಸ್ವಿಯವರ 'ಮಾಯಾಲೋಕ' ತ್ತು ನಮ್ಮ ಕಣ್ಣೆದುರಿನಲ್ಲೇ ಮಾರ್ಕೆಟ್ ಶಕ್ತಿಗಳು ರ್ಸುತ್ತಿರುವ ಅಲ್ಲೋಲ ಕಲ್ಲೋಲಗಳ ಕತೆ ಅಪ್ಪಿ ಯೂ ಪ್ರವೇಶಿಸುವುದಿಲ್ಲ.

ಇದೇ ಇವತ್ತಿನ ವಾಸ್ತವವಾಗಿದ್ದಾಗಲೂ ಕೂಡ?

ಮಾಯಾಲೋಕ ಇವೆಲ್ಲಾ ಚರ್ಚೆಗಳಿಗೂ ಆಹ್ವಾನ ಡುವಂತಾ, ಎಲ್ಲರನ್ನು ಕೆಣಕುವಂತಾ ಗ್ರಹಿಕೆಗಳನ್ನು ರೂಪಿಸುವ ಕಾದಂಬರಿ ಎಂಬುದಂತೂ ನಿಜ.

ಈ ಪುಸ್ತಕ ಪ್ರಿಂಟಾಗಿರುವ ಶೈಲಿಯೇ ಖುಷಿ ಡುವಂತಿದೆ. ಅಡ್ಡಡ್ಡಲಾಗಿ ಮೂರು ಕಾಲಂಗಳಲ್ಲಿ ಂದ್ರಿಸಿ ಪ್ರತಿ ಪುಟದಲ್ಲೂ ಒಂದಲ್ಲಾ ಒಂದು ಚಿತ್ರವಾಗಿ ಮಾರ್ಪಡಿಸಿರುವ ಫೋಟೋಗಳನ್ನು ಕಿರುವುದು ಇಡೀ ಪುಸ್ತಕಕ್ಕೆ ಜೀವ ತಂದುಕೊಟ್ಟಿದೆ. ನೀವೊಮ್ಮೆ ಮಾಯಾಲೋಕದೊಳಕ್ಕೆ ಹೋಗಿಬನ್ನಿ.. ರೆ ಮೈಮರೆಯಬೇಡಿ ಅಷ್ಟೆ.

ಪುಸ್ತಕ ಪ್ರಕಾಶನ ಓದುಗರನ್ನು ತಲುಪಿದ್ದು

ಚೆಡ್ಡಿ ದೋಸ್ತ್‌ಗಳ ತರ ಇರುವ ಮೈಸೂರಿನ ರಾಮ್ ಹಾಗೂ ತೇಜಸ್ವಿ ಪುಸ್ತಕ ಪ್ರಕಾಶನ ಎಂಬ ಸ್ಥೆಯನ್ನು ಶುರು ಮಾಡಿದ್ದು 1991 ರಲ್ಲಿ, ವಿಸ್ಮಯ 2,3 ಎಂಬ ವಿಜ್ಞಾನ, ನಿಸರ್ಗ ಕುರಿತಾದ ಮೊದಲ ಣಿ ಪುಸ್ತಕಗಳನ್ನು ಪ್ರಕಟಿಸಿದ ಪುಸ್ತಕ ಪ್ರಕಾಶನವು ವಲ ನವ ಕರ್ನಾಟಕ, ಸ್ವಪ್ನ, ಅಂಕಿತದಂತಹ ಸ್ತಕದಂಗಡಿಗಳನ್ನು ಮಾತ್ರ ನಂಬಿ ಕೂರದೆ ಓದುಗರನ್ನು ಪಲು ಹೊಸ ದಾರಿಗಳನ್ನು ಹುಡುಕಿತು.

ಎಂಎಲ್‌ಸಿ ಎಲೆಕ್ಷನ್‌ಗಳಿಗೆ ವಿಂಗಡಿಸಿರುವ ಶಿಕ್ಷಕರ ತ್ರ, ಪದವೀಧರ ಕ್ಷೇತ್ರಗಳ ಮತದಾರರ ವಿಳಾಸ ಡುಕಿ "ನೀವೂ ಕತ್ತಲಲ್ಲಿರಬೇಡಿ, ನಿಮ್ಮ ಮಕ್ಕಳನ್ನು ಲಲ್ಲಿಡಬೇಡಿ" ಎಂದು ಹೇಳುತ್ತಾ ಅರಿವು, ತಿಳುವಳಿಕೆ ಸುವ ತಮ್ಮ ಪುಸ್ತಕಗಳ ಬಗ್ಗೆ ಪರಿಚಯದ ನಾಲ್ಕು ತು ಬರೆದು ಪತ್ರ ಹಾಕಿದರಂತೆ. ಅದೊಂದು ಸ ಪ್ರಯೋಗವಾಗಿತ್ತು. ಸುಶಿಕ್ಷಿತರಿಂದ ಉತ್ತಮ ಕ್ರಿಯೆಯೂ ಬಂತು. ಅದುವರೆಗೂ ಗೋಚರವಾಗಿದ್ದ ಓದುಗ ಸಮೂಹವೊಂದರ ಜೊತೆ ಸ್ತಕ ಪ್ರಕಾಶನಕ್ಕೆ ಜ್ಞಾನ ವಿನಿಮಯದ ನಂಟು ಯಿತು.

ಈ ಹದಿನೈದು ವರ್ಷದಲ್ಲಿ ತೇಜಸ್ವಿಯವರ 42 ಸ್ತಕ ಸೇರಿದಂತೆ ಒಟ್ಟು 66 ಪುಸ್ತಕಗಳನ್ನು ಇವರು ಟಿಸಿದ್ದಾರೆ. ಬಿಡುಗಡೆಯಾದ ಒಂದೂವರೆ ತಿಂಗಳಲ್ಲೇ ಯಾಲೋಕದ ಒಂದೂವರೆ ಸಾವಿರ ಕಾಪಿಗಳನ್ನು ಕೊಂಡಿದ್ದಾರೆ.

ಕನ್ನಡದ ಮಟ್ಟಿಗೆ ಇದೊಂದು ಹೆಮ್ಮೆಯ ಸಂಗತಿ. ಡದ ಕೆಲ ಸಾಹಿತಿಗಳಿಗೆ ಇತ್ತೀಚೆಗೆ ಓದುಗನ ನಂಬಿಕೆಯೇ ಹೊರಟುಹೋಗಿದೆ. 'ಜನ ಪುಸ್ತಕ ಂದು ಓದಲ್ಲ, ಟಿವಿ-ಸಿನಿಮಾ ನೋಡಿ ಹಾಳಾಗಿದ್ದಾರೆ' ಬುದು ಅವರು ಮಾಡುವ ಒಂದು ಮಾಮೂಲಿ ಆಪ. ಆದರೆ ವಾಸ್ತವ ಸಂಗತಿ ಏನೆಂದರೆ ಓದುಗ ರೆ ಎಲ್ಲಾ ಕಡೆ ಇದ್ದೇ ಇದ್ದಾನೆ. ಬಹುಶಃ ಓದುಗನಿಗೆ ಬಹುತೇಕ ಸಾಹಿತಿಗಳ ಬಗ್ಗೆಯೇ ನಂಬಿಕೆ ರಟು ಹೋಗಿರುವ ಕಾರಣ ಅಂತಹವರ ಪುಸ್ತಕ ಬತ್ತಿಲ್ಲ ಅಂತಾ ಕಾಣುತ್ತೆ.

ಏಕೆಂದರೆ ಇತ್ತೀಚೆಗೆ ಜನ ಚಕಚಕನೆ ಸ್ತಿರುವುದು ಕೇವಲ ತೇಜಸ್ವಿಯವರ ಪುಸ್ತಕಗಳನ್ನು ತ್ರವಲ್ಲ, ಸಾಂಸ್ಕೃತಿಕ ಸಂಶೋಧನೆ, ಸಾಮಾಜಿಕ- ಕ ಹಾಗೂ ಪರಿಸರ ಕುರಿತಾದ ವೈಚಾರಿಕ ಹಗಳಿಗೂ ಈಗ ಬೇಡಿಕೆ ಇದೆ. ರಹಮತ್ ಕೆರೆಯವರ 'ಮರದೊಳಗಣ ಕಿಚ್ಚು' ಮೂರು ಮುದ್ರಣ ಕಂಡಿದ್ದರೆ, ಬಾಬಾದತ್ತ ವಿವಾದದ ಎಂಬ ಕಿರು ಪುಸ್ತಕದ 10 ಸಾವಿರ ಪ್ರತಿಗಳು ರಾಟವಾಗಿವೆ. ಇವೆಲ್ಲಾ ಒಂದೆರಡು ಉದಾಹರಣೆ ಮಾತ್ರ. ಇಂತಹ ಇನ್ನಷ್ಟು ಸಕ್ಸಸ್ ಸ್ಟೋರಿಗಳು ಪುಸ್ತಕ ಪ್ರಪಂಚದೊಳಗಿದೆ.

ಶ್ರೀರಾಮ್ ಹಾಗೂ ತೇಜಸ್ವಿಯವರ ಪುಸ್ತಕ ಶನವೂ ಅದರಲ್ಲೊಂದು.

CET: ಮೆರಿಟ್ಟಿಗೆ ಮರಣಶಾಸನ

ಮತ್ತದೇ ಗೊಂದಲ...ಅದೇ ಒಳ ಸಂಧಾನ... ಮತ್ತೊಂದು ಅವಸರದ ಶಾಸನ ಮಂಡನೆ....

2004 ರ ಜೂನ್‌ನಿಂದ ಅಕ್ಟೋಬರ್ ವರೆಗೂ ಜರುಗಿದ ನಿರರ್ಥಕ ಸಿಇಟಿ ಸೀಟು ಹಂಚಿಕೆ ಮತ್ತು ಶುಲ್ಕನಿಗದಿಯ ಸಾರ್ವತ್ರಿಕ ವಂಚನೆಯ ನಾಟಕ ಮತ್ತೀಗ 2006 ರಲ್ಲಿ ಪುನಾರಾವರ್ತನೆಯಾಗುವಂತಿದೆ.....

ಅಂದು ಜುಲೈ 28, 2004 ರಲ್ಲಿ ಪಾಸು ಮಾಡಿಸಲಾದ ಎಡಬಿಡಂಗಿ ಶಾಸನದಂತೆಯೆ ಮತ್ತೊಂದು ತುರ್ತು ಮಸೂದೆಯನ್ನು ಜಾರಿಗೊಳಿಸಿ ಮೆಡಿಕಲ್-ಇಂಜಿನಿಯರಿಂಗ್ ಕ್ಯಾಪಿಟೇಶನ್ ಲಾಬಿಯ ಋಣ ತೀರಿಸುವ ಹುನ್ನಾರ ಅಧಿಕಾರಾರೂಢ ಮೈತ್ರಿ ಕೂಟದಲ್ಲೂ ಪ್ರತಿಪಕ್ಷವಾದ ಕಾಂಗ್ರೆಸಲ್ಲೂ ಭಾರದಿಂದ ಚಾಲನೆ ಪಡೆದುಕೊಂಡಿದೆ....



ಕರ್ನಾಟಕ ಸೀಟು ವಿತರಣೆ ಹಾಗೂ ಶುಲ್ಕನಿಗದೀಕರಣ ಮಸೂದೆ 2006 ಎಂಬ ಕರಡು ಮಸೂದೆ ಮಂಡಿಸಿ ಕೈತೊಳೆದುಕೊಳ್ಳಲು ಸಿದ್ಧರಾಗಿರುವ ಉನ್ನತ ಶಿಕ್ಷಣ ಸಚಿವ ಡಿ.ಎಚ್. ಶಂಕರಮೂರ್ತಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ವಿ.ಎಸ್. ಆಚಾರ್ಯರುಗಳಿಗೆ ವೃತ್ತಿ ಶಿಕ್ಷಣ ಪ್ರವೇಶಕ್ಕೆ ಸಂಬಂಧಿಸಿದಂತೆ ಇದುವರೆಗಿನ ರಾಜಕೀಯ, ನ್ಯಾಯಾಂಗೀಯ ವಿದ್ಯಮಾನಗಳನ್ನು ಅಧ್ಯಯನ ಮಾಡುವ ವ್ಯವಧಾನವೂ ಇಲ್ಲವಾಗಿರುವಂತಿದೆ.... ಅವರಿಬ್ಬರೂ ತಮ್ಮ ತಮ್ಮ ಹಿತೈಷಿಗಳ ನಡುವೆ ಸನ್ಮಾನ ಮಾಡಿಸಿಕೊಳ್ಳುವ ಸಡಗರದಲ್ಲಿ ಮುಳುಗಿದ್ದಾರೆ, ಹೊಸ ಮದುವಣಿಗರಂತೆ!

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಆದೇಶಿಸಿರುವ "ಏಕರೂಪ ಶುಲ್ಕ ನೀತಿ" ಹಾಗೂ "ಅನುದಾನರಹಿತ ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸ್ವಾಯತ್ತತೆ" ಇವೆರಡೂ ಅಂಶಗಳನ್ನು ರಾಜ್ಯದ ಪ್ರತಿಭಾವಂತ, ಬಡ ವಿದ್ಯಾರ್ಥಿಗಳ ವಿರುದ್ಧವೇ ಅರ್ಥೈಸುತ್ತ ಬಂದಿರುವ ಶಿಕ್ಷಣ ಇಲಾಖೆಯ IAS ಅಧಿಕಾರಿಗೂ ಮತ್ತು ಸ್ವತಃ ಖಾಸಗಿ ಮ್ಯಾನೇಜ್‌ಮೆಂಟ್ ವಕ್ತಾರರೂ, ಮಾಲೀಕರೂ ಆದ ಅಧಿಕಾರಸ್ಥ ರಾಜಕಾರಣಿಗಳು ಪ್ರಸಕ್ತ ವರ್ಷದಲ್ಲೂ ದುಬಾರಿ ಶುಲ್ಕ ಹೇರುವ ಸಂಚನ್ನಾರಂಭಿಸಿದ್ದಾರೆ.

ಏಕರೂಪ ಶುಲ್ಕ ನೀತಿ ಎಂದು ಸುಪ್ರೀಂಕೋರ್ಟು ಹೇಳಿದಾಕ್ಷಣವೇ ಅದು ಬಡವರ ವಿರುದ್ಧವಾದ ಹಾಗೂ ಶ್ರೀಮಂತರ ಪರವಾದ ದುಬಾರಿ ಶುಲ್ಕ ನೀತಿ ಎಂದೇ ಅರ್ಥೈಸುತ್ತ ಬಂದ ಈ ಮ್ಯಾನೇಜ್‌ಮೆಂಟ್ ಲಾಬಿಯ ವಿರುದ್ಧ ದನಿಯೆತ್ತಬಲ್ಲ ರಾಜಕಾರಣಿಗಳಾಗಲಿ, ಬುದ್ಧಿಜೀವಿ ಚಿಂತಕರಾಗಲಿ ಅಥವಾ ನ್ಯಾಯಾಲಯದಲ್ಲಿ ಈ ಕುತ್ಸಿತ ಚಿಂತನೆಯ ವಿರುದ್ಧ ಸಮರ್ಥವಾಗಿ ವಾದಿಸಬಲ್ಲ ವಕೀಲರಾಗಲಿ ಎಲ್ಲೂ ಕಂಡು ಬರುತ್ತಿಲ್ಲ....

ಏಕರೂಪತೆ ಎಂದರೆ ಜನಸಾಮಾನ್ಯ ಕುಟುಂಬಗಳ ಕೈಗೆಟುಕದ 1 ಲಕ್ಷ 72 ಸಾವಿರದಿಂದ ಹಿಡಿದು 4 ಲಕ್ಷ ರೂಪಾಯಿಗಳವರೆಗಿನ ಐಎಎಸ್ ಅಧಿಕಾರಿಗಳೂ, ಶಿಕ್ಷಣ ತಜ್ಞರುಗಳೂ "ಬಡವರಿಗೆ, ಹಿಂದುಳಿದವರಿಗೆ ಬೇಕಾದ್ರೆ ಶೇ. 50 ಪರ್ಸೆಂಟು ಸೀಟುಗಳನ್ನು ರಿಯಾಯ್ತಿ ದರದಲ್ಲಿ ಕೊಡ್ತೇವೆ.... ಆದರೆ ಆ ರಿಯಾಯ್ತಿ ದರದ ವ್ಯತ್ಯಾಸ ಮೊತ್ತವನ್ನು ಸರ್ಕಾರವೇ ತುಂಬಿಕೊಡಬೇಕು" ಎಂದೆನ್ನುತ್ತ ಭಾರೀ ಸಾಮಾಜಿಕ ಕಾಳಜಿಯನ್ನೇ ಪ್ರದರ್ಶಿಸುತ್ತಾರೆ....

ಇದುವರೆಗಿನ ಈ ಸೀಟು ಹಂಚಿಕೆ ಪ್ರಮಾಣ (seat matrix) ಹಾಗೂ ಏಕರೂಪ ಶುಲ್ಕನೀತಿ (uniform fee structure) ಸಂಬಂಧಿಸಿದ ವಾದ, ವಿವಾದ, ಚರ್ಚೆಗಳೆಲ್ಲವೂ ಜಾಸ್ತಿ ಡಿಮ್ಯಾಂಡ್-ಕಮ್ಮಿ ಸೀಟುಗಳಿರುವ ಮೆಡಿಕಲ್ ಕಾಲೇಜುಗಳ ಪ್ರವೇಶಕ್ಕಷ್ಟೇ ಸೀಮಿತವಾಗಿವೆ....

ಇಂತಹ ಎಲ್ಲ ಚರ್ಚಾಕೂಟಗಳಲ್ಲೂ ಅಲಕ್ಷ್ಯಕ್ಕೊಳಗಾಗುತ್ತಿರುವುದು ಎಲ್ಲ ಜಾತಿ, ಜನಾಂಗಗಳ ಅತ್ಯುತ್ತಮ ವಿದ್ಯಾರ್ಥಿಗಳನ್ನೊಳಗೊಂಡ ಜನರಲ್ ಮೆರಿಟ್ ಕೋಟಾದ ಪ್ರತಿಭಾವಲಯ....

2004 ರ ಸಿಇಟಿಯಲ್ಲಿ ಮೆಡಿಕಲ್‌ನಲ್ಲಿ ಮೊದಲ ರ್‍ಯಾಂಕು ಹಾಗೂ ಇಂಜಿನಿಯರಿಂಗ್‌ನಲ್ಲಿ ನಾಲ್ಕನೇ ರ್‍ಯಾಂಕು ಗಿಟ್ಟಿಸಿದ್ದ ಬಿಜಾಪುರದ ಶರಣಪ್ಪ ಇಜೇರಿ ಎಂಬ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿ ಒಬ್ಬ ಬಡ ರೈತನ ಮಗನಾಗಿದ್ದ....

ಈಗ್ಗೆ 12 ವರ್ಷಗಳ ಹಿಂದೆ ಅಂದರೆ 1992-93 ರ ಸುಮಾರಿನಲ್ಲಿ ಉತ್ಕೃಷ್ಟ ರ್‍ಯಾಂಕು ಪಡೆದು ಬೆಂಗಳೂರಿನ ಯುವಿಸಿಇ ಇಂಜಿನಿಯರಿಂಗ್ ಕಾಲೇಜು ಸೇರಿದ ರಾಹುಲ್ ಎಂಬ ದಲಿತ ಹುಡುಗ ಅಂದಿನ ಮಲ್ಲಿಕಾರ್ಜುನ ಖರ್ಗೆಯವರ ಪುತ್ರನಾಗಿದ್ದ..

ಹಾಗೆಯೇ ಸುಮಾರು 7 ವರ್ಷಗಳ ಹಿಂದೆ ಉನ್ನತ ರ್‍ಯಾಂಕಿನೊಂದಿಗೆ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್‌ಗೆ ಪ್ರವೇಶ ಪಡೆದ ಜಿತೇಂದ್ರ ಯಾರು ಗೊತ್ತೆ? ಸುಪ್ರಸಿದ್ಧ ಹಿಂದುಳಿದ ವರ್ಗಗಳ ನಾಯಕ, 'ಅಹಿಂದ'ದ ರೂವಾರಿ ಸಿದ್ದರಾಮಯ್ಯನವರ ಕಿರಿಯ ಮಗ!

ವಿಭಿನ್ನ ಹಿನ್ನೆಲೆಯ ಶರಣಪ್ಪ ಇಜೇರಿ, ರಾಹುಲ್ ಖರ್ಗೆ ಹಾಗೂ ಜೀತೇಂದ್ರ ಸಿದ್ಧರಾಮಯ್ಯನವರಂತಹ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಎಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ಹಿನ್ನೆಲೆ-ಅಂತಸ್ತುಗಳನ್ನು ಮೆಟ್ಟಿ ನಿಂತು ಕೇವಲ ತಮ್ಮ ಶೈಕ್ಷಣಿಕ ಪರಿಶ್ರಮ, ಶ್ರದ್ಧೆಗಳಿಂದಲೇ ಅರಳುವಂತಹ ಅಪರೂಪದ ಕುಸುಮಗಳು....

ಅದೇ ರೀತಿ ವಿವಿಧ ಮೀಸಲಾತಿ ಕೋಟಾಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳು ಸಹ ಮೇಲಿನವರಿಗಿಂತ ಕೊಂಚವೇ ಕಮ್ಮಿ ಅಂಕ ಪಡೆದರೂ ಅವರಷ್ಟೇ ಸಮರ್ಥರಾದ ಮೇಧಾವಿಗಳೇ.

ಅಂದರೆ ಸರ್ಕಾರಿ ಕೋಟಾ-ಮೆರಿಟ್ಟು ಮತ್ತು ಮೀಸಲಾತಿ ಕೋಟಾವನ್ನು ಪ್ರತಿನಿಧಿಸುವ ಪ್ರತಿಭಾವಂತರೆಲ್ಲರೂ ನಾಡಿದ ಬೌದ್ಧಿಕ ಸಂಪತ್ತನ್ನು ಶ್ರೀಮಂತಗೊಳಿಸಬಲ್ಲ ಹೆಮ್ಮೆಯ ಯುವ ಜನರು.... ಇವರಿಗೆ ಕೈಗೆಟುಕುವ, ನ್ಯಾಯವಾದ ದರದಲ್ಲಿ ಶುಲ್ಕ ನೀತಿ ರೂಪಿಸಿ ಪ್ರವೇಶ ಕಲ್ಪಿಸಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಯಾವುದೇ ನಾಗರಿಕ ಸರ್ಕಾರದ, ಆಧುನಿಕ ಸಮಾಜದ ಆದ್ಯಕರ್ತವ್ಯವಲ್ಲವೆ? ನೈತಿಕ ಹೊಣೆಗಾರಿಕೆ ಅಲ್ಲವೆ?

ಅಂದಹಾಗೆ ಜಾಲಪ್ಪ, ಶಾಮನೂರು, ಪ್ರಭಾಕರ್ ಕೋರೆ, ಜಿ. ಪರಮೇಶ್ವರ್‌ಗಳಂತವರು ಕಟ್ಟಿದ ಖಾಸಗಿ ಕಾಲೇಜುಗಳ ಪ್ರತಿಷ್ಠೆ ಹೆಚ್ಚಿಸುವ ಫಲಿತಾಂಶ ತರಬಲ್ಲವರೂ ಸಹ ಈ ಸರ್ಕಾರಿ ಕೋಟಾದ ಪ್ರತಿಭಾವಂತರೇ ಅಲ್ಲವೆ?


2005 ರ ಮೆಡಿಕಲ್ ಕೌನ್ಸೆಲಿಂಗ್ ಜರುಗಿದಾಗ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಪಡೆದ ಅತ್ಯುತ್ತಮ ಮೆರಿಟ್ಟಿನ ವಿದ್ಯಾರ್ಥಿಗಳಿಗೆ ಮಾತ್ರ ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣ ಸೇವೆ ಸಲ್ಲಿಸಬೇಕೆಂಬ ಮುಚ್ಚಳಿಕೆ ಬರೆಸಿಕೊಂಡದ್ದು ನೆನಪಿದೆಯೆ? ಇವರೆಲ್ಲ ಮೆರಿಟ್ಟು ಮತ್ತು ಮೀಸಲಾತಿ ಕೋಟಾದ ಅತ್ಯುನ್ನತ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಾಗಿದ್ದವರು.

ಆದರೆ ಖಾಸಗಿ ಕಾಲೇಜುಗಳ ಸರ್ಕಾರಿ ಕೋಟಾ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ಅನುಕೂಲಸ್ಥ ಕುಟುಂಬಗಳ ಮಕ್ಕಳಿಗೆ ಮಾತ್ರ ಯಾವುದೇ ಸಮಾಜ ಸೇವೆ ಅಥವಾ ಗ್ರಾಮೀಣ ಸೇವೆಯ ಕಡಿವಾಣವೂ ಇಲ್ಲ, ಮುಚ್ಚಳಿಕೆಯ ಮುಜುಗರವೂ ಇಲ್ಲ... ನಮ್ಮಲ್ಲೇನಿದ್ದರೂ ಮೆರಿಟ್ಟಿಗೇ ಮುಚ್ಚಳಿಕೆ ಶಿಕ್ಷೆ, ಅಲ್ಲವೆ?!


-ರೇಶ್ಮೆ

'ಲಂಕೇಶ್' ಹುಟ್ಟಿದ ಗಳಿಗೆ....

ಪತ್ರಿಕೆಯ ಕೆಲಸ ಒಂದೆಡೆ ನಡೆಯುತ್ತಿದ್ದರೆ, ಅಪ್ಪನ ಹುಟ್ಟುಹಬ್ಬ ಮತ್ತು ಪತ್ರಿಕೆ ಬಿಡುಗಡೆ ಕಾರ್ಯಕ್ರಮ ತಯಾರಿ ಮತ್ತೊಂದೆಡೆ. ಆಗ ಸ್ನೇಹಿತರು ಬಂದರಲ್ಲದೆ, ತಮ್ಮ ಸ್ನೇಹಿತರನ್ನೂ ಕರೆತಂದರು. ಪ್ರೊಫೆಸರ್ ವಿ.ಎಸ್. ಶ್ರೀಧರ್‌ವರ ಶಿಷ್ಯರು, ಗೋಪಿ, ರೀಟಾ ರೀನಿಯ ಸ್ನೇಹಿತರು, ಡಾ. ವಾಸು, ಮಲ್ಲಿಗೆ, ಬಳಿದಾಳೆ ವಿಜೆ, ಪುಷ್ಪ ಹೀಗೆ ಎಲ್ಲರೂ ಬಂದು ತಾವೇ ಯಾವುದಾದರೊಂದು ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಿದರು. ಬಳಿದಾಳೆಯಿಂದ ಬಂದಿದ್ದ ಕುಮಾರಸ್ವಾಮಿ ಕೂಡ ಅವರಲ್ಲಿ ಒಬ್ಬ



ಒಂದು ದಿನ ನಮ್ಮ ಕಚೇರಿಗೆ ಬಂದು ಸಹಾಯ ಮಾಡಿದ ಕುಮಾರಸ್ವಾಮಿ ತನ್ನ ಅಣ್ಣನ ಮನೆಯಲ್ಲಿ ರಾತ್ರಿ ತಂಗಲು ಹೋದ. ಆನಂತರ ಎರಡು ದಿನ ಆತ ನಾಪತ್ತೆ. ವಿನಾಗಿತ್ತೆಂದರೆ ತಾನು ಗೌರಿ ಲಂಕೇಶ್‌ಗೆ ಸಹಾಯ ಮಾಡಲು ಬಂದಿರುವುದಾಗಿ ಆತ ತನ್ನ ಅಣ್ಣನಿಗೆ ಹೇಳಿದ್ದ. ಅದರಿಂದ ಗಾಬರಿಗೊಂಡ ಅಣ್ಣ "ಅವರು ನಿನ್ನನ್ನು ನಕ್ಸಲೈಟ್ ಮಾಡಿಬಿಡುತ್ತಾರೆ. ನೀನು ಅಲ್ಲಿಗೆ ಹೋಗಬೇಡ" ಎಂದು ಹೇಳಿ ಕುಮಾರಸ್ವಾಮಿಯನ್ನು ತನ್ನ ಮನೆಯಲ್ಲಿ ಕೂಡಿ ಹಾಕಿದ್ದ!



ಪತ್ರಿಕೆಯ ಕಾರ್ಯಕ್ರಮಕ್ಕೆ ಅದು ಹೇಗೋ ಬಿಡುಗಡೆ ಪಡೆದು ಬಂದ ಕುಮಾರಸ್ವಾಮಿ ತನಗಾಗಿದ್ದನ್ನು ಹೇಳಿದಾಗ ನಾವೆಲ್ಲ ಜೋರಾಗಿ ನಕ್ಕಿದ್ದೆವು.

ಆಫೀಸು ಅದೆಷ್ಟು ಚಟುವಟಿಕೆಯಿಂದ ಕೂಡಿತ್ತೆಂದರೆ, ನಮ್ಮೆಲ್ಲರಲ್ಲಿ ಅದೆಂತದೋ ಉತ್ಸಾಹ, ಹೆಮ್ಮೆ! ಹೊಸದೊಂದನ್ನು ಸಾಧಿಸುತ್ತೇವೆ ಎಂಬ ಭರವಸೆ. ಇದೆಲ್ಲದರ ಮಧ್ಯೆ ನನ್ನ ಮುಂದೆ ಒಂದು ಚಾಲೆಂಜ್ ಎದ್ದಿತು. ನನ್ನ ವೃತ್ತಿ ಜೀವನದ ಉದ್ದಕ್ಕೂ ಸಂಬಳ ಪಡೆಯುತ್ತಿದ್ದ ನಾನು ಈಗ ಹಲವು ಜನರ ಸಂಬಳದ ಜವಾಬ್ದಾರಿ ಹೊರುವಂತಾಗಿತ್ತು.

ಆದರೆ ಪತ್ರಿಕೆ ಪ್ರಾರಂಭವಾದಾಗಿನಿಂದ ಆ ಜವಾಬ್ದಾರಿಯನ್ನು ನಿಮಗೆ ಹಸ್ತಾಂತರಿಸಿದ್ದೇನೆ. ನಮ್ಮೆಲ್ಲರ ಸಂಬಳ ನೀಡುತ್ತಿರುವವರು, ನಮಗೆ ಪ್ರೋತಾಹ ನೀಡುತ್ತಿರುವವರು, ಪ್ರತಿವಾರ ಈ ಪತ್ರಿಕೆಯನ್ನು ಖರೀದಿಸಿ ಓದುತ್ತಿರುವ ನಮ್ಮ ಆಪತ್ಬಾಂಧವರಾದ ನೀವು!

ಈಗ ನೀವು ಈ ಪತ್ರಿಕೆಯನ್ನು ಗಟ್ಟಿಯಾಗಿ ನಿಲ್ಲಿಸಿದ್ದೀರಲ್ಲದೆ, ಇದರೊಂದಿಗೆ 'ಗ್ರೇಸ್' ಮಾಸ ಪತ್ರಿಕೆ ತರುವುದಕ್ಕೂ ಸಹಾಯ ಮಾಡಿದ್ದೀರಿ. ಒಂದು ವರ್ಷದ ಹಿಂದೆ ಕಂಡಿದ್ದ ಏಕಾಂಗಿತನ ಮತ್ತು ಆತಂಕವನ್ನು ನಿವಾರಿಸಿದ್ದೀರಿ. ಪ್ರಜಾಪ್ರಭುತ್ವ, ಭಿನ್ನಮತ, ಸೌಹಾರ್ದತೆ- ಸಾಮರಸ್ಯ ಹಾಗೂ ಪ್ರಗತಿಪರ ಚಿಂತನೆಗಳ ಪರವಾಗಿ ಅಂದು ದನಿಯೆತ್ತಿದ್ದ ನಮ್ಮನ್ನೆಲ್ಲಾ ಹೊಸಕಿ ಹಾಕಿಬಿಡಲು ಬಹಳ ಜನ ಬಯಸಿದ್ದರು. ಆದರೆ ನಾವು ಸದಾಗಲು ತಯಾರಿರಲಿಲ್ಲ, ನೀವದಕ್ಕೆ ಅವಕಾಶವನ್ನೂ ಕೊಡಲಿಲ್ಲ.

'ಲಂಕೇಶ್' ಹುಟ್ಟಿದ್ದು ಹೀಗೆ... ಇದನ್ನೆಲ್ಲ ನಿಮ್ಮೊಂದಿಗೆ ಹಂಚಿಕೊಂಡು, ನಿಮಗೆಲ್ಲ ಧನ್ಯವಾದಗಳನ್ನು ಹೇಳುತ್ತಾ...

-ಗೌರಿ ಲಂಕೇಶ್

ಕೋಪದಿಂದಿರುವ ಸಮಯದಲ್ಲಿ ಮಾತನಾಡಿದರೆ ಅದು ನಿಮ್ಮ ಜೀವನದಲ್ಲಿ ಎಂದೆಂದಿಗೂ ವಿಷಾದಿಸುವಂತಹ ಭಾಷಣವಾಗಿರುತ್ತದೆ -ಅಂಬ್ರೋಸ್ ಬಿಯರ್ಸ್

ದ್ಯಾವೇಗೌಡನೂ ಕುಮಾರಸ್ವಾಮಿನೂ ಕದ್ದು ಬೇಟಿಯಾದರಂತೆ!

ಆಕಾಲಿಕವಾಗಿ ಸುರಿದ ಮಳೆಯಿಂದ ಕಾಳಮಾವನ ಮನಸ್ಸು ರೇಜಿಗೆಯಾಗಿತ್ತು. ಅವನ ಪ್ರಕಾರ ಶಿವರಾತ್ರಿ ವರೆಗೂ ಚಳಿಯಿರಬೇಕು. ಯುಗಾದಿವರೆಗಾದರೂ ರಣಬಿಸಿಲಿರಬೇಕು. ಹೊನ್ನಾರು ಕಟ್ಟಿದ ನಂತರ ಮಳೆಯಾಗಬೇಕು. ನಂತರ ಹೊಸಗಂದು ಸೋಬನಕ್ಕೆ ಹೋದಂತೆ ಮುಂಗಾರುಕ್ಕೆ ಕರೆಯಲು ನೇಗಿಲು ಹೊತ್ತು ಹೊಲದ ಕಡೆ ಹೋಗಬೇಕು. ಈ ಕ್ರಮವೇ ಅವನ ಬದುಕಿನಲ್ಲಿ ಹಾಸು ಹೊಕ್ಕಾಗಿತ್ತು. ಆದರೆ ಯುಗಾದಿ ತಿಂಗಳಿರುವಂತೆ ತರಿದುಹೋದ ಮಳೆಯಿಂದ ಸಿಟ್ಟಾದ ಕಾಳಮಾವ.

"ಥೂ ಇವರವ್ವುನ್ ಜಾತಿನ್ಯಾಡ ಹೋಗತ್ತಗೆ. ಕೇಡುಗಾಲಕೆ ನಾಯಿ ಮಟ್ಟೆ ಹಿಕ್ಕದಂಗಾಯ್ತು" ಎಂದ.

"ಇದೇನು ಮಾವ ಹಿಂಗಂತಿ. ನಾಯಿ ಮಟ್ಟೆ ಹಿಕ್ಕತೆ" ಎಂದಳು ಜುಮ್ಮಿ.

"ಹಿಕ್ಕದಿಲ್ಲ, ಸರಿಯವ್ವ ಹಿಕ್ಕಬುಟ್ಟದಲ್ಲಾ?"

"ಬ್ಯಾಸಗೆಲೂ ಮಳೆ ಹುಯ್ಯಬವುದು ಕಣಮಾವ. ಆದ್ರೆ ನಾಯಿ ಯಾವತ್ತಿಗೂ ಮಟ್ಟೆ ಹಿಕ್ಕದಿಲ್ಲ, ಮರಿನೇ ಇಯ್ಯದು."

"ಅಂಗರೀಗ್ಯಾಕೆ ಮಳೆ ಮಕ್ಕಡೆ ಹಾಯ್ಕಂದು ನೇದುಬುಟ್ಟೋಯ್ತು?" ಎಂದ ಸೀರ.

"ಅದೂ ಕುಮಾರಸ್ವಾಮಿ ಮುಖ್ಯಮಂತ್ರಿಯಾದನಲ್ಲ ಅದ್ಕೆ."

"ನಿಜವೇನ್ಲ ನೀನೇಳದು?" ಎಂದಳು ಜುಮ್ಮಿ.

"ಊ ಕಣೆ. ಅಂಗೇ ನೋಡು. ಆ ಯಸ್ಸೆಂಕಿಸ್ನ ಇದ್ದಾಗ ಮಳೆಗಾಲ ದಲ್ಲೂ ಮಳೆಯಾಗಲಿಲ್ಲ. ಧರಮ ಸಿಂಗಾದಾಗ ಮಳೆಗಾಲ್ದಲ್ಲಿ ಸರಿಯಾಗಿ ಮಳೆ ಬೆಳೆ ಚನ್ನಾಗೇ ನ್ಯಡುಸ್ತು. ಈಗ ಕುಮಾರಸ್ವಾಮಿ ಆಗ್ಯವುನೆ ಅದ್ಕೆ ಮಳೆಗಾಲಲ್ದೆಯಿದ್ರೂ ಬಂದು ಚಚ್ಚಬುಟ್ಟೊಯ್ತಾ ಆದೆ. ಅಂದ್ರೆ ನಮಿಗೆ ಮಳೆ ಬೇಕಿಲ್ಲದೇ ಯಿದ್ರು ಮಳೆ ಬಂದು ಹುಯ್ತಾ ಅದೆ ಅಂದ್ರೆ ಏನರ್ಥ?"

"ಕುಮಾರಸ್ವಾಮಿ ನಮಿಗೆ ಬೇಕಿರಲಿಲ್ಲ ಅಂತ್ಲೆ ನೀನೇಳದು?"

"ಊ ಮತ್ತೆ. ಲ್ಯಕ್ಕದ ಪ್ರಕಾರ ಆ ರಾಜಶೇಖರ ಮೂತ್ರಿ ಅನ್ನೋನು ಒಂದಾರು ತಿಂಗಳು ಮುಖ್ಯಮಂತ್ರಿಯಾಗಬೇಕಾಗಿತ್ತು. ಆಮ್ಯಾಲೆ ಎಂ.ಪಿ.ಪ್ರಕಾಶ ಆಗಬೇಕಾಗಿತ್ತು. ಅವುನಾದ ಮೇಲೆ ರೇವಣ್ಣ, ಅವುನಾದ ಮ್ಯಾಲೆ ಈ ಕುಮಾರಸ್ವಾಮಿ ಆಗಿದ್ರೆ ಮಳೆಗಾಲ ಸರಿಯಾಗಿರದು."

"ಆ ಪ್ರಕಾಶ ಏನಾದ?" ಎಂದ ಕಾಳಮಾವ.

"ಅಯ್ಯೋ ಅವುನ ಮಕ ನೋಡಕ್ಯಾಗದಿಲ್ಲ ಕಣಮಾವ. ಈ ಸಿಂದ್ಯನ್ನಾರ ನೋಡಬವುದು. ಆ ಪ್ರಕಾಸುನ ಮಕದಲ್ಲಿ ಪ್ರೇತಕಳೆ ನಿಂತುಬುಟ್ಟದೆ."

"ಆದ್ಯಾಕಂಗಾಗಿದ್ದನ್ಲ?" ಎಂದಳು ಜುಮ್ಮಿ.

"ಅದು ಅವುನಾಗೇ ಅವುನು ಮಾಡಿಕಂಡಿದ್ದು ಕಣೆ. ಇದೇ ದ್ಯಾವೇಗೌಡ ಸಿದರಾಮಯ್ಯನ್ನ ತಗುದು ನೀನೇ ಉಪಮುಖ್ಯಮಂತ್ರಿ ಅಂದಾಗ ನೋಡೋ ಗೌಡಪ್ಪ ನಾನು ಇಂತ ರಾಜಕಾರಣ ಒಪ್ಪದಿಲ್ಲ, ನಾನು ಕಾಲಾದಿಂದ ನಿನ್ನ ರಾಜಕಾರಣ ಒಪ್ಪದೆ ಯಗಡೆ, ಪಟೇಲ್ರ ಜ್ವತೆ ಇದ್ದೋನು. ಇವತ್ತು ಸಿದರಾಮಯ್ಯನಿಗಾದುದ್ದು ನಾಳೆ ನನಿಗಾಗದಿಲ್ಲ ಅನ್ನದ್ಯಾವ ಗ್ಯಾರಂಟಿ ಅನ್ನಬೇಕಾಗಿತ್ತು."

"ಅಂಗಂತಿಯಾ?"

"ಊ. ಹೇಳಬೇಕಾದ ಮಾತ ಅಂತ ಟೇಮಲ್ಲಿ ಹೇಳದೆಯಿದ್ರೆ ಮಕದ ಮ್ಯಾಲೇ ಪ್ರೇತಕಳೆ ಗ್ಯಾರಂಟಿ. ಅದೂ ಹೋಗ್ಲಿ ದ್ಯಾವೇಗೌಡುನ ಮಗ ಯೆಮ್ಮೆಲ್ಲೇಗಳನ್ನೆಲ್ಲ ಜಮೀರಮದ್ ಬಸ್ಸಿಗೆ ತುಂಬಿಕಂಡು ಹೋದನಲ್ಲಾ, ಆಗ ದ್ಯಾವೇಗೌಡನೆದ್ರಿಗೆ ಕೂತಗಂಡು



ಸಮಾಧಾನ ಮಾಡದಕ್ಕಿಂತ ಗೌಡ್ರೆ ಇಂತ ನಾಟಗ ಮದ್ಲು ನಿಲ್ಸಿಸಿ. ನಾವು ಕಾಲಾದಿಂದ ನಿಮ್ಮ ನೋಡಿಕಂಡು ಬಂದಿದ್ದೀವಿ. ನೀವು ಹ್ವಳೆನರಸಿಪುರದಲ್ಲಿ ರೇವಣ್ಣನ್ನ ಸ್ಥಾಪನೆ ಮಾಡಕ್ಕೆ ಅಂತ ಏನೇನು ರಾಜಕಾರಣ ಮಾಡಿ ಗೆದ್ರೊ, ಅದ್ನೆ ರಾಜ್ಯಮಟ್ಟದಲ್ಲಿ ಮಾಡ್ತ ಮಾಡ್ತ ಇವತ್ತು ಇಂತ ಸ್ಥಿತಿ ತಂದು ಮಡಗಿದ್ದಿರಿ, ಅಂದುಬುಟ್ಟು ಎದ್ದು ಬರಬೇಕಾಗಿತ್ತು."

"ಅದು ನೀನೇಳೊವೊಟು ಸುಲಭವೇನ್ಲ?"

"ಹೇಳಕ್ಯಾಗದೆಯಿದ್ರೆ ಕಾಗದ ಬರಿಬೇಕಾಗಿತ್ತು, ಇಲ್ಲ ಯಾರ ಕೈಲಾರ ಬರದು ಕೊಟ್ಟುಕಳುಸಬೇಕಾಗಿತ್ತು. ಕಳ್ಳ ಜೇಬಿಗೆ ಕೈ ಹಾಕಿ ದುಡ್ಡ ಎಣಿಸಿ ಎಣಿಸಿ ತಗತ್ತಯಿರುವಾಗ ಸುಮ್ಮನೆ ಯೆಮ್ಮೆಯಂಗೆ ನಿಂತಿದ್ರೆ ಏನಾಯ್ತದೇಳು? ಇವತ್ತು ಪ್ರಕಾಶ್‌ನಿಗಾಗಿದ್ದು ಅದೆಯಾ. ಇವುನಿಗಿಂಗೇ ಮಾಡಬೇಕಾಗಿತ್ತು ಅಂತ ದ್ಯಾವೇಗೌಡನೂ ಕಾಯ್ತಾಯಿದ್ದ."



"ಅಂಗರೆ ಪ್ರಕಾಶನ ಮ್ಯಾಲೆ ದ್ಯಾವೇಗೌಡನಿಗೆ ಸಿಟ್ಟಿತ್ತೆ?"

"ಸಿಟ್ಟಲ್ಲ ಸೇಡಿತ್ತು. ಯಗಡೆ ಸಾಯುವರಿಗೂ ಅವುನತ್ರಯಿದ್ದು ಕಡಿಗಾಲಕ್ಕೆ ನನ್ನತ್ರ ಬಂದವುನಲ್ಲಾ ಇವುನಿಗೇನಾರ ಮಾಡಬೇಕು ಅಂತ ಕಾಯ್ತಾಯಿದ್ದ. ಅಂತ ಕಾಲ ಬತ್ತು ತಗುದು ಮಡಗಿದ. ಆ ಸಿಂದ್ಯನಿಗೂ ಅಂಗೇ ಆಯ್ತು."

"ಸಿಂದ್ಯನಮ್ಯಾಲೂ ದ್ಯಾವೇಗೌಡನಿಗೆ ಸೇಡಿತ್ತೆ?"

"ಸಿಂದ್ಯನಮ್ಯಾಲೆ ಪ್ರಕಾಶ್‌ನಿಗಿಂತ್ಲೂ ಸೇಡಿತ್ತು. ಆಗೊಂದು ಸತಿಯಾ ಇವ ಜುಮ್ಮಿ ಮನೆಲಿ ವಳೆನರಸೀಪುರದ ಜವರಪ್ಪ ಬಂದು ಕುಡುದು ಗ್ಯಾನೆಸಿದಂಗೆ ಮೂರುದಿನ ಮನಿಗಿದ್ದ ಗೊತ್ತೆ?"

"ಊಕಂಡ್ಯ, ಕನಕಪುರದಲ್ಲಿ ದ್ಯಾವೇಗೌಡ ಸೋತವುನೆ ಅಂತ ವೂರ್ನಮಿ ಪಕ್ಸದಲ್ಲಿ ಕುಡುದು ಈಕಡಿಂದ ಆಕಡಿಕ್ವಳ್ಳೊನು ಆ ಕಡಿಂದ ಈ ಕಡಿಕ್ವಳ್ಳೊನು" ಎಂದು ಜುಮ್ಮಿ ನಗಾಡಿದಳು.

"ಆಗ ಕನಕಪುರದಲ್ಲಿ ದ್ಯಾವೇಗೌಡನ್ನು ಸೋಲಿಸಿದ್ದೋನು ಇದೇ ಸಿಂದ್ಯಾ. ಅಂತವುನ್ಯಲ್ಲ ಮರುತಬುಟ್ಟನವುನು?"

"ಅಂಗರೆ ಸಿಂದಿಯಾ ಪ್ರಕಾಸುನಿಗೆ ಸರಿಯಾದ್ದಾಯ್ತು ಬುಡತ್ತಗೆ" ಎಂದ ಕಾಳಮಾವ.

"ನೀನೇಳದು ನೋಡಿದ್ರೆ ದ್ಯಾವೇಗೌಡನೂ ಕುಮಾರಸ್ವಾಮಿನೂ ಮಾತಾಡಿಕಂಡೆ ಮಾಡ್ಯವುರೆ ಅಂದಂಗಾಯ್ತು" ಎಂದಳು ಜುಮ್ಮಿ.

"ಮಾತಾಡಿಕಂಡೇನ್ಲೆ? ಇವತ್ತಿಗೂ ದ್ಯಾವೇಗೌಡನೂ ಕುಮಾರಸ್ವಾಮಿನೂ ರಾತ್ರಿಹೊತ್ತಲ್ಲಿ ಕದ್ದು ಬೇಟಿ ಮಾಡ್ತರಂತೆ" ಎಂದ ಸೀರ ಕಳ್ಳರನ್ನ ಹಿಡಿದಂತೆ ಕಣ್ಣುಬಿಟ್ಟ.

"ನಿಜವೇನೋ ಮಾವ?"

"ಊ ಕಂಡ್ಯೆ. ದ್ಯಾವೇಗೌಡನ ಮನೆತಕ್ಕೆ ಇದೇ ಕುಮಾರಸ್ವಾಮಿ ಹೋದನಂತೆ. ಅವುನು ರಗ್ಗೊದ್ದಕಂಡು ಬಂದು ಒಂದು ಮೂಲೇಲಿ ಮಾತಾಡಿಕಂಡು ಅವ್ರು ಅತ್ತಗೋದನಂತೆ, ಇವುನು ಇತ್ತಗೋದನಂತೆ. ಗೊ... ದೋರೆ ಹೇಳ್ತ ಕುಂತವುರೆ."

"ಚಿಗಪ್ಪ ನೀನೇಳ್ತಯಿರದು ಇಂಪಾಜಿಬ... ದ್ಯಾವೇಗೌಡನೂ ಕುಮ... ಸ್ವಾಮಿನೂ ನೀನೇಳಿದಂಗೆ ಬ... ಮಾಡದಕ್ಕಿಂತ ಮೊಬೈಲಿ... ಮಾತಾಡಬವುದಲವೆ" ಎಂ... ಕೊಂಡು ವಾಟಿಸ್ಸೆ ಬಂದ.

"ಊ ಕಣೊ ವ... ಈಗೇನು ಮಬೈಲು ಪೋ... ಬಂದವೆ" ಎಂದಳು ಜುಮ್ಮಿ...

"ಅದ ಕದ್ದು ಕೇಳಿಸಿಗ... ಮಿಸಿನ್ನು ಬಂದಿದ್ದವಂತೆ ಕಂ... ಅದ್ಕೆಯಾ ಈ ದ್ಯಾವೇಗೌ... ಕಂಬಳಿ ಹೊದ್ದುಕೊಂಡೋಗಿ ಕತ್ಲಲಿ ಮಾತಾ... ಬಂದನಂತೆ."

"ನಮ್ಮ ಚಿಗಪ್ಪ ಕಂಬಳಿ ಅಂದೇಟಿಗೆ ನನಿಗೇನ... ಪ್ಲಾಸಾಯ್ತು. ಏನಪ್ಪಾ ಅಂದ್ರೆ ಕಂಬಳಿಯೋನಿಗೆ ಗೂ... ಬದ್ದಾಗ ಪಂಚೆ ದುಪಟಿಯವರು ಎಚ್ಚೆತ್ತ್ರಗ ಬೇಕಾಗಿ... ಕಣಕ್ಕ."

"ಕಂಬ್ಳಿ, ಪಂಚೆ, ದುಬಟಿಯೋರ್ಯಾರ್ಲ?"

"ಸಿದ್ದರಾಮಯ್ಯ ಕಂಬ್ಳಿ, ಪ್ರಕಾಶ ಪಂಚೆ, ಸಿಂ... ದುಪಟಿಯೋನು ಕಣೆ. ದ್ಯಾವೇಗೌಡ ಸಿದ್ದರಾಮಯ... ಕಂಬಳಿಕಿತಗಂಡು ಕಳಿಸಿದಾಗ ಇದೇ ಪಂಚೆ, ದುಪ... ಜನ ಎಚ್ಚತ್ತಗಬೇಕಾಗಿತ್ತು."

"ಏನೇ ಎಚ್ಚತ್ತಗಂಡಿದ್ರೂ ದ್ಯಾವೇಗೌಡ ಮಾಡ... ಮಾಡತಿದ್ದ ಕಣೊ ವಾಟಿಸ್ಸೆ. ಆದ್ರು ಸಿಂದ್ಯಾ ಪ್ರಕಾಶನ... ಸರಿಯಾದ್ದೆ ಆಯ್ತು ಅಂತ ಒಪ್ಗತ್ತೀಯಾ?"

"ಎಸ್ ದ್ಯಪನೆಟ್ಟಿ. ಇದೇ ಪ್ರಕಾಶ ಕ್ಯಳಜಾತಿ ಜ... ಮೇಲ್ಜಾತಿ ಜನಗಳಿಂದ ಪವರ್ ಕಸಗಳಕ್ಕ ಹ್ವಂಟವ... ಅಂದಿದ್ದ. ದ್ಯಾವೇಗೌಡ ಅವುನ ಕೈಯಿಂದ್ಲೇ ಕಿ... ಮಗನಿಗೆ ಕೊಟ್ಟ. ಇದೇ ಸಿಂದ್ಯಾ, ದ್ಯಾವೇಗೌಡ... ಮಕ್ಕಳು ಮಾತ್ರ ರಾಜಕಾರಣ ಮಾಡ್ತಯಿದ್ದರಾ. ರಾಹು... ಗಾಂಧಿಯಿಂದ ಹಿಡಿದು ಕುಮಾರ್ ಬಂಗಾರಪ್ಪನವರಿಗ... ಪಟ್ಟಿ ತಯಾರಿಸಿಕೊಂಡು ಓದೋನು. ಆ ಬಾಶಣ ಮ... ದ್ಯಾವೇಗೌಡ ಸಿಂದ್ಯನ ತ್ವಡೆ ಸವುರತಿದ್ದ. ಇವತ್ತೇನಾಗ್ಯದ... ಸಿಂದ್ಯ ತ್ವಡೆ ಮುರುದೋನಂಗೆ ಅವುಡಗಚಗಂ... ಕುಂತವುನೆ. ಇದೊಂತರ ವಳ್ಳೆ ಪನಿಷ್‌ಮೆಂಟೆಯ... ಈಗ ನೋಡು ಕುಮಾರಸ್ವಾಮಿ ಅವದಿ ಮುಗಿಯ... ವತ್ತಿಗೆ ರೇವಣ್ಣನ್ನ ಮುಖ್ಯಮಂತ್ರಿ ಮಾಡಕ... ದ್ಯಾವೇಗೌಡ ಒಂದೇ ಕಣ್ಣಲ್ಲಿ ಆಳತಾಯಿದ್ದನಂತೆ!"

"ನಿಜವೇನ್ಲ?"

"ಚನ್ನಮ್ಮನಾಣೆ ಕಣಕ್ಕ ನಾನ್ಯಾಕೆ ಸುಳ್ಳೇಳಲಿ?"

–ಬಿ.ಚಂದ್ರೇಗೌ...

ಪ್ರಶಸ್ತಿಗಳು ಹರಾಜಾದಾಗ ಸುಧಾ ಮೂರ್ತಿಗೂ ಅವಾರ್ಡ್!


ಒಂದು ಪತ್ರ

ತಮ್ಮ ಅಮೂಲ್ಯ ಹಾಗೂ ಜನಪ್ರಿಯ ವಾರ ಪತ್ರಿಕೆಯನ್ನು ಚಾಚೂ ತಪ್ಪದೇ ಓದುವ ಅಭ್ಯಾಸವುಳ್ಳ ನಾನು ಹಾಗೂ ನನ್ನ ಮಿತ್ರರು, ಇತ್ತೀಚೆಗೆ ಮಾರ್ಚ್ 8ರ ಪತ್ರಿಕೆಯಲ್ಲಿ 'ಪ್ರಶಸ್ತಿಗೆಷ್ಟು ಬೆಲೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿರುವ ಲೇಖನ ನಿಜಕ್ಕೂ ನೂರಕ್ಕೆ ನೂರು ಭಾಗ ಸತ್ಯವಾದದ್ದು ಎಂದು ಅಭಿಪ್ರಾಯ ಪಡುತ್ತೇವೆ. ಸಮಾಜದಲ್ಲಿ ತಮ್ಮ ಹಣದ ಬಲದಿಂದ ಅತ್ಯಂತ ಪ್ರಭಾವಶಾಲಿಗಳಾದ ಇನ್‌ಫೋಸಿಸ್ ಸಂಸ್ಥೆಯ ನಾರಾಯಣ ಮೂರ್ತಿ ಹಾಗೂ ಅದರ ಸಂಸ್ಥಾನದ ಅಧ್ಯಕ್ಷೆಯಾದ ಸುಧಾಮೂರ್ತಿಯವರ ಅಂತರಾಳದಲ್ಲಿ ಅಡಗಿರುವ ಕಪಟ ಬುದ್ಧಿ, ಢೋಂಗಿ ವರ್ತನೆ, ಸ್ವಾರ್ಥಗಳ ಬಗ್ಗೆ ದನಿಯೆತ್ತಿರುವ ನಿಮ್ಮ ಪತ್ರಿಕೆಯು ಹೊಂದಿರುವ ವೃತ್ತಿ ಗೌರವದ ಬಗ್ಗೆ ಎಷ್ಟು ಪ್ರಶಂಸಿಸಿದರೂ ಸಾಲದು.

ಇನ್‌ಫೋಸಿಸ್‌ನ ಸುಧಾಮೂರ್ತಿ ಹಾಗೂ ನಿಲೇಕಣಿರವರಿಗೆ ಭಾರತ ಸರ್ಕಾರ ಅತ್ಯಂತ ಉನ್ನತ ಹಾಗೂ ಉತ್ಕೃಷ್ಟವಾದ ಪದ್ಮಶ್ರೀ ಹಾಗೂ ಪದ್ಮಭೂಷಣ ನೀಡಿ ಗೌರವಿಸಿರುವುದು ಇವರುಗಳು ಯಾವ ಪುರುಷಾರ್ಥವನ್ನು ಸಾಧಿಸಿದ್ದಾರೆ, ಈ ನಾಡು ಮತ್ತು ರಾಷ್ಟ್ರಕ್ಕೆ ಯಾವ ಸೇವೆಯನ್ನು ಸಲ್ಲಿಸಿದ್ದಾರೆ ಎಂಬುದು ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಒಂದು ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಯನ್ನು ಕೂಗಿ ವಸ್ತುಗಳನ್ನು ಗಿಟ್ಟಿಸುವುದು, ಬಹಿರಂಗ ಹರಾಜಾದಾಗ ಹೆಚ್ಚಿನ ಬೆಲೆಯನ್ನು ನಿಗದಿಪಡಿಸಿ ಟೆಂಡರನ್ನು ಪಡೆಯುವುದು ಒಂದೇ, ಸುಧಾಮೂರ್ತಿ ಹಾಗೂ ನಿಲೇಕಣಿಯವರಿಗೆ ಪ್ರಶಸ್ತಿ ಬಂದಿರುವುದು ಇದೇ ತತ್ವದ ಮೇಲೆ ಎಂದು ನಾವು ಅಭಿಪ್ರಾಯ ಪಡುತ್ತೇವೆ.

ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ರಾಜಕಾರಣಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರ ಸರ್ಕಾರದ ಅವಧಿಯಲ್ಲಿ ಸುಧಾಮೂರ್ತಿ ಅನಭಿಷಕ್ತ ಸಾಮ್ರಾಜ್ಞಿಯಾಗಿ ಮೆರೆದದ್ದು ಹಾಗೂ ನಾರಾಯಣಮೂರ್ತಿಯವರು ಈ ನಾಡಿಗೆ ಸಾಸಿವೆ ಕಾಳಿನಷ್ಟು ಸೇವೆಯನ್ನೂ ಸಲ್ಲಿಸದೇ ಸರ್ಕಾರದಿಂದ ಬಹಳಷ್ಟು ಸೌಲಭ್ಯಗಳನ್ನು ಗಿಟ್ಟಿಸಿರುವುದು, ಸಾಗುವಳಿ ಮಾಡುತ್ತಿರುವ ರೈತರ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಗಿಟ್ಟಿಸಿಕೊಂಡು ಭೂ ಕಬಳಿಕೆ ಮಾಡಿರುವುದು ಪ್ರತಿಯೊಬ್ಬ ಪ್ರಗತಿಪರ ಚಿಂತನೆಯುಳ್ಳ ಕನ್ನಡಿಗನು ಪ್ರತಿಭಟಿಸಲೇಬೇಕಾದ ವಿಷಯವಾಗಿರುತ್ತದೆ.

ಸಮಾಜಕ್ಕೆ ಗಣನೀಯವಾದ ಸೇವೆ ಸಲ್ಲಿಸಿರುವ ಸಾಲು ಮರದ ತಿಮ್ಮಕ್ಕ, ಇತ್ತೀಚೆಗೆ ನಿಧನರಾದ ಲೇಖಕಿ ಹಾಗೂ ಹೆಸರಾಂತ ಸಮಾಜ ಸೇವಕಿ ರತ್ನಮ್ಮ ಹೆಗ್ಗಡೆ (ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ತಾಯಿ), ಹಾಗೂ ತಾವು ಮೇಲೆ ಉಲ್ಲೇಖಿಸಿರುವ ಲೇಖನದಲ್ಲಿ ತಿಳಿಸಿರುವ ರೈತನಾಯಕಿ ಸುನಂದಾ ಜಯರಾಂ, ಶಿವಮೊಗ್ಗದ ಸ್ವಾತಂತ್ರ್ಯ ಹೋರಾಟಗಾರ್ತಿ ಪೊನ್ನಮ್ಮಾಳ್, ವಿನೋಬಾ ಭಾವೆಯವರ ಶಿಷ್ಯೆ ಮಹಾದೇವಿ (ರಾಮಕೃಷ್ಣ ಹೆಗ್ಗಡೆಯವರ ಅಕ್ಕ) ಈ ಸರ್ಕಾರದ ಕಣ್ಣಿಗೆ ಕಾಣುವುದಿಲ್ಲವೇ? ಹಾಗೂ ಹೊಗಳುಭಟ್ಟರೆಂದೇ ಹೆಸರುಗಳಿಸಿರುವ ವಿಪ್ರೋತ್ತಮ ಪತ್ರಿಕೋದ್ಯಮಿಗಳಿಗೆ ಕಾಣಿಸುವುದಿಲ್ಲವೇ? ಇದೆಲ್ಲಾ ತೀರಾ ವಿಪರ್ಯಾಸವಾದ ಸಂಗತಿಯಾಗಿರುತ್ತದೆ.



ಮಾಜಿ ಪ್ರಧಾನಮಂತ್ರಿಗಳಾದ ದೇವೇಗೌಡರು, ಇನ್‌ಫೋಸಿಸ್ ನಾರಾಯಣಮೂರ್ತಿ ಹಾಗೂ ಬಯೋಕಾನ್‌ನ ಕಿರಣ್ ಮುಜುಂದಾರ್‌ರವರು ಸಾಗುವಳಿ ಜಮೀನನ್ನು ಭೂಕಬಳಿಕೆ ಮಾಡಿರುವ ಬಗ್ಗೆ ಅದರ ವಿರುದ್ಧ ಪ್ರತಿಧ್ವನಿಸಿದ್ದರಿಂದ ನಾರಾಯಣ... ಮೂರ್ತಿಯವರು ಭಾಗವಹಿಸುತ್ತಿರುವ ಎಲ್ಲ ಸಭೆಗಳಲ್ಲಿ... ದೇವೇಗೌಡರನ್ನೇ ಉದ್ದೇಶವಾಗಿಟ್ಟುಕೊಂಡು... ರಾಜಕಾರಣಿಗಳನ್ನು ಟೀಕೆ ಮಾಡಿರುವುದು... ಕೈಲಾಗದವನು ಮೈ ಪರಚಿಕೊಂಡಂತೆ ಎಂಬ... ನಾಣ್ನುಡಿಗೆ ಸರಿ ಹೊಂದುತ್ತದೆ.

ಈ ನಾಡು ಕಂಡ ಅತ್ಯಂತ ಶ್ರೇಷ್ಠ ಸಾಹಿತಿ ಹಾಗೂ ಕಲೆ, ಸಂಸ್ಕೃತಿಗಳ ಬಗ್ಗೆ ತನ್ನದೇ ಆದ ಸಿದ್ಧಾಂತಗಳನ್ನು ಹೊಂದಿದ್ದು ಈ ನಾಡಿಗೆ ಚಿರಸ್ಮರಣೀಯವಾದ ಸೇವೆಯನ್ನು ಸಲ್ಲಿಸಿರುವ ನಮ್ಮೆಲ್ಲರ ಮಾಸ್ತರರಾದ ಲಂಕೇಶ್‌ರವರಿಗೆ ಸರ್ಕಾರವು ಯಾವ ಪ್ರಶಸ್ತಿಯನ್ನು ನೀಡದಿರುವುದು ಹಾಗೂ ಜ್ಞಾನಪೀಠ ಪ್ರಶಸ್ತಿಯನ್ನು ಕೂಡಾ ಇವರಿಗೆ ನೀಡಿ ಗೌರವಿಸದೇ ಇರುವುದು ತೀರಾ ಖಂಡನೀಯವಾಗಿದ್ದು ಹಾಗೂ ಏಕಪಕ್ಷೀಯವಾದದ್ದು ಎಂದು ನಾವು ಅಭಿಪ್ರಾಯ ಪಡುತ್ತೇವೆ.

–ಬಿ.ಎಸ್. ಜ್ಞಾನಪ್ರಕಾಶ್
ಅಧ್ಯಕ್ಷರು
ಪ್ರೋಗ್ರೆಸಿವ್ ಥಿಂಕಿಂಗ್ ಅಡ್ವೋಕೇಟ್ಸ್
ಫೋರಂ (ರಿ), ಬೆಂಗಳೂರು

ಕೋಪವು ದಡ್ಡನನ್ನು ಜಾಣನನ್ನಾಗಿಸುತ್ತದೆ. ಆದರೆ ಅವನನ್ನು ಎಂದೆಂದಿಗೂ ಭಿಕಾರಿಯಾಗಿ ಇರುವಂತೆ ಮಾಡುತ್ತದೆ –ಎಲಿಜಬೆತ್

ಎಲ್ಲರಂಥವನಲ್ಲ.... ಶರೀಫ

ಈತನ ಮಾತು ಮಾಣಿಕ್ಯದಂತೆ.

ಮೊದಲ ಸೊಲ್ಲಿನಲ್ಲಿಯೇ ಈತನ ಕನ್ನಡ, ಈತನ ಅರ್ಥ ಚಕಿತಗೊಳಿಸುತ್ತವೆ. ನುಡಿಕಟ್ಟು ಎಂದರೆ, ಇಡಿಯಂ ಅಂದರೆ ಏನೆಂದು ತಿಳಿದುಕೊಳ್ಳಲು ಈ ಶಿಶುನಾಳ ಶರೀಫರನ್ನು ಓದಬೇಕು. ಇಂಗ್ಲಿಷ್ ಭಾಷೆಯನ್ನು ತಲೆಯಲ್ಲಿ ತುಂಬಕೊಂಡು ಅದಕ್ಕೆ ಹೊಂದಿಕೊಳ್ಳುವಂತೆ ಬಿದ್ದಿ ಮಾತಾಡುವ, ಬರೆಯುವ ಜನಕ್ಕೆ ಕನ್ನಡದ ಸೊಗಸು ಗೊತ್ತಿರುವುದಿಲ್ಲ. 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ' ಎಂದೊಡನೆ ಬಲ್ಲೆವು. ಈತ ಮನಕ್ಕೆ ನೇರವಾಗಿ ಮುಟ್ಟುವಂತೆ ಹೇಳುತ್ತಿದ್ದಾನೆ. ತಂಬೂರಿಗಿಂತ ಹೆಚ್ಚಿನದನ್ನ ಹೇಳುತ್ತಿದ್ದಾನೆ; ಈತನ ಕಾವ್ಯದ ಬಳ್ಳಿ ಕನ್ನಡದ ಮತ್ತಿಲಲ್ಲಿ ಬೇರುಬಿಟ್ಟದೆ.

ಶಿಶುನಾಳರ ಮಾತು ಗಮನಿಸಿ. ಮೊನ್ನೆ ಈ ಕೆಳಗಿನ ಸಾಲುಗಳು ಕಿವಿಗೆ ಬಿದ್ದವು. ಮತ್ತೆಮತ್ತೆ ಕೇಳಿದೆ. ಮಾತಿನ ಸಂಗೀತ, ಸರಳತೆ ಮತ್ತು ಅರ್ಥ ಮತ್ತೆಮತ್ತೆ ಮೆಲುಕುಹಾಕುವಂತೆ ಮಾಡಿದವು.

ನನ್ನೊಳಗಾ ನಾ ತಿಳಕೊಂಡೆ
ನಂಗೆ ಬೇಕಾದ ಗಂಡನ ಮಾಡಿಕೊಂಡೆ
ಆಜ್ಞಾ ಪ್ರಕಾರ ನಡಕೊಂಡೆ
ನಾ ಎಲ್ಲಾರ ಹಂಗೊಂದು ಹಡಕೊಂಡೆ
ಇವನ ಮ್ಯಾಲೇ ಮನಸಿಟ್ಟೆ
ನನ್ನ ಬದುಕುಬಾಳನ್ನೆಲ್ಲ ಬಿಟ್ಟುಕೊಟ್ಟೆ....




ಇದು ಅದ್ಭುತವಾದ ಕನ್ನಡ ಮಾತ್ರವಲ್ಲ, ಅತ್ಯಾಶ್ಚರ್ಯಕರವಾದ ಸಂದರ್ಭ, ಸಂಬಂಧದ ನಿರೂಪಣೆ. ಕವನದ 'ಈಕೆ' ತನ್ನ ಇನಿಯನ ಜೊತೆಗಿನ ಸಂಬಂಧ ಹೇಳುತ್ತಿದ್ದಾಳೆ. ಈಕೆ ತನ್ನ ಇನಿಯನನ್ನು ಗಂಡನನ್ನಾಗಿ ಆರಿಸಿಕೊಳ್ಳಲು 'ನನ್ನೊಳಗಾ ನಾ ತಿಳಕೊಂಡೆ' ಎನ್ನುತ್ತಾಳೆ. ಅಂತರ್ಯದ ಇಷ್ಟ ಈ ಆಯ್ಕೆಗೆ ಬೇಕು. ಆದರೆ ಈ ಆಯ್ಕೆ ಆಕೆಯ ಅಂತರ್ಯದ ದನಿಯನ್ನು ನೆಚ್ಚಿದ್ದರೂ ಅದು 'ಆಜ್ಞಾ' ಕೂಡಾ; ಅಂತರ್ಯದ ಆಜ್ಞಾ ಮಾತ್ರವಲ್ಲ, ಬಾಹ್ಯದ ಆಜ್ಞಾ ಅದು. ಗುರು ಗೋವಿಂದನ, ದೇವರ ಆಜ್ಞಾ ಎರಡೂ ಇರಬಹುದು. ಸಂತನ ಅಂತರ್ಯದ ವಾಣಿ ಎಲ್ಲರ ಜೀವಸೆಲೆ ಯಾಗಬೇಕು; ಎಲ್ಲರ ಬದುಕಿಗೆ ಹೊಂದಿಕೊಳ್ಳಬೇಕು, ಆದ್ದರಿಂದ,

ಆಜ್ಞಾ ಪ್ರಕಾರ ನಡಕೊಂಡೆ,
ನಾ ಎಲ್ಲಾರ ಹಂಗೊಂದು ಹಡಕೊಂಡೆ
-ಎನ್ನುತ್ತಾಳೆ
ಆಮೇಲೆ ಆಕೆಯ ಆತ್ಮಾರ್ಪಣೆ ನೋಡಿ:
ಇವನ ಮ್ಯಾಲೇ ಮನಸಿಟ್ಟೆ.
ನನ್ನ ಬದುಕುಬಾಳನ್ನೆಲ್ಲ ಬಿಟ್ಟುಕೊಟ್ಟೆ....

ಈಗಾಗಲೇ ನೀವು ಬಲ್ಲಂತೆ, ಈ ಸಂತ ಶಿಶುನಾಳ ತನ್ನ-ದೇವರ ತನ್ನ-ಗುರುವಿನ ಸಂಬಂಧ ಹೇಳುತ್ತಿದ್ದಾರೆ. ಇನಿಯನ, ಪ್ರೇಯಸಿಯ, ಗಂಡಹೆಂಡತಿಯ ಸಂಬಂಧ ಆಯ್ಕೆಯನ್ನು ಬಳಸಿಕೊಳ್ಳುವ ಶಿಶುನಾಳ ಅಂತರ್ಯ ಬಾಹ್ಯದ ಸೇತುವೆಯನ್ನೂ ವರ್ಣಿಸುತ್ತಾರೆ. ಈ ನುಡಿಗಳನ್ನು ಕೇಳುತ್ತ ಹೋದಂತೆ, ಈ ಕನ್ನಡದ ಕುಟುಂಬ ವಾತಾವರಣ ತೆರೆದುಕೊಳ್ಳುತ್ತಿದ್ದಂತೆ ನನ್ನ ಕಣ್ಣು ಕಂಬನಿಯಿಂದ ತುಂಬಿದವು. ಇದು ಕರುಣೆಯ, ಭಾವೋದ್ವೇಗದ ಕಂಬನಿಯಲ್ಲ, ಇದು ಅಪ್ಪಟ ಸಂತೋಷದ, ಕಾವ್ಯ ನೀಡುವ ಆನಂದದ, ಭಾಷೆ ಸ್ಫುರಿಸುವ ರೋಮಾಂಚನ ಭಾಷ್ಪ.

ನನ್ನ ಮುನ್ನ



ಪಿ.ಲಂಕೇಶ್

ನಿಮ್ಮ ಜನಕ್ಕೆ ಸಿಗುತ್ತಿರುವ ಸಾಮಾಜಿಕ ನ್ಯಾಯ, ಅವಮಾನ, ನೋವು ಇತ್ಯಾದಿಯನ್ನು ನೋಡಲು ಕನ್ನಡಿಯಂಥ ಸ್ಥಳ ಪೋಲೀಸ್ ಸ್ಟೇಷನ್. ನಿಮ್ಮ ಸರ್ಕಾರ ಶೋಷಕರಿಂದ, ದುಷ್ಟರಿಂದ ಕೂಡಿದ್ದರೆ ಅದು ಪೋಲೀಸ್ ಸ್ಟೇಷನ್‌ನಲ್ಲಿ ವ್ಯಕ್ತವಾಗುತ್ತದೆ; ನಿಮ್ಮ ಸರ್ಕಾರ ನ್ಯಾಯಪಂಕ್ತಿಯಿಂದ ಜನರನ್ನು ನೋಡಿಕೊಳ್ಳುತ್ತಿದ್ದರೆ ಅದೂ ಅಲ್ಲಿ ಕಾಣಸಿಗುತ್ತದೆ. ಸರ್ಕಾರದ ಪುಢಾರಿಗಳು, ಪೀಟರು ಪೋಲೀಸ್ ಸ್ಟೇಷನ್‌ನನ್ನು ಬಳಸಿಕೊಂಡು ಅಮಾಯಕರನ್ನು ಗೋಳಾಡಿಸುತ್ತಾರೆ, ನೋವುಂಡ ಜನಕ್ಕೆ ನೋವು ಕೊಡುತ್ತಾರೆ.

ಇದು ಹೊಳೆದದ್ದು ಮೊನ್ನೆ ನಾನು ನಾಗತಿಹಳ್ಳಿಗೆ ಹೋಗಿದ್ದಾಗ. ಈ ಹಳ್ಳಿಗೆ ಪಕ್ಕದ ಹಳ್ಳಿಯೊಂದರಲ್ಲಿ ಹುಟ್ಟಿದ ನಮ್ಮ ಬಿ. ಚಂದ್ರೇಗೌಡ ಮೇಲಿನ ವಿಷಯ ಹೇಳಿಲ್ಲ, ಈ ಕೆಳಗಿನ ಕಾಗದದಲ್ಲಿ ನಮ್ಮೆಲ್ಲರ ಭೇಟಿಯ ಬಗ್ಗೆ ಬರೆದಿದ್ದಾನೆ. ಜನಕ್ಕೆ ಕುತೂಹಲಕರ ಅನ್ನಿಸಬಹುದೆಂದು ಅದನ್ನಿಲ್ಲಿ ಕೊಡುತ್ತಿದ್ದೇನೆ.


ಒಂದು ಕಾಗದ

ಪ್ರೀತಿಯ ಲಂಕೇಶ್,

ನೀವು ಹೆಣ್ಣುಮಗಳೊಬ್ಬಳ ಸಮಸ್ಯೆಯ ಕಾರಣವಾಗಿ ನಮ್ಮೂರಿನ ಸಮೀಪಕ್ಕೆ ಬಂದು ಹೋದದ್ದು ಗೊತ್ತಾಗಿ ಮೊನ್ನೆ ನಾನೂ ಆ ಕಡೆ ತಿರುಗಿಬಂದೆ.

ನಿಮ್ಮ ಈ ಭೇಟಿ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ನಿರ್ಗತಿಕರಿಗೆ ಮತ್ತು ದಲಿತರಿಗೆ ತೊಂದರೆ ಕೊಟ್ಟದ್ದರೆ, ಎಲ್ಲೆಲ್ಲೋ ಇರುವ ಅಗೋಚರ ವ್ಯಕ್ತಿಗಳು ಬಂದು ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಾರೆಂಬ ಗುಮಾನಿ ಇಲ್ಲಿನ ಜನರಿಗುಂಟಾಗಿದೆ. ಅದಕ್ಕಿಂತಲೂ "ಲಂಕೇಶ್ ಬರುವಂತಹ ಸಮಸ್ಯೆಯೆ, ಈ ಮೀನಾಕ್ಷಮ್ಮನದು" ಎಂಬುದು ಇಲ್ಲಿನವರ ಉದ್ಗಾರ.

ಈ ಮೀನಾಕ್ಷಮ್ಮ ನನ್ನೂರಿನ ಸೊಸೆ. ಒಬ್ಬ ಮುಗ್ಧ ಅನಕ್ಷರಸ್ಥನನ್ನು ಮದುವೆಯಾದ ಈಕೆ ಅನಿವಾರ್ಯವಾಗಿ ದಿಟ್ಟ ಹೆಂಗಸಾಗಬೇಕಾಯ್ತು. ನಮ್ಮೂರಲ್ಲಿದ್ದ ಗಂಡನ ಒಂದಿಷ್ಟು ಜಮೀನು ಮಾರಿಸಿ ಇತ್ತೀಚೆಗೆ ನಾಗತಿಹಳ್ಳಿ ಸೇರಿಕೊಂಡಿದ್ದಳು. ನಾಗತಿಹಳ್ಳಿ, ಅಳೀಸಂದ್ರ, ಹೆರಗನಹಳ್ಳಿ ಈ ಮೂರು ಊರುಗಳು ಒತ್ತಾಗಿರುವ ಪ್ರಯುಕ್ತ ಇಲ್ಲಿ ಮೊದಲಿಂದಲೂ ಭೂಮಿಯ ಅಭಾವವಿದೆ. ಈ ಮೂರು ಊರುಗಳಲ್ಲಿರುವಷ್ಟು ಮೇಷ್ಟ್ರುಗಳು ನಮ್ಮ ತಾಲ್ಲೂಕಿನ ಯಾವ ಊರಿನಲ್ಲೂ ಇಲ್ಲ, ಅದರಲ್ಲೂ ನಾಗತಿಹಳ್ಳಿ ನಮ್ಮ ತಾಲೂಕಿನಲ್ಲೇ ಹೆಚ್ಚು ವಿದ್ಯಾವಂತರನ್ನೊಂದಿರುವ ಊರಲ್ಲದೆ ಅತಿಹೆಚ್ಚು ಮೇಷ್ಟರೂ ಇದ್ದಾರೆ. ನಮ್ಮ ಹಳ್ಳಿಗಳಿಗೆ ವಿದ್ಯೆ ದೊರಕಿದರೆ ಏನಾದರೂ ಬದಲಾವಣೆ ಸಾಧ್ಯ ಎಂದು ತಿಳಿದಿದ್ದ ನಮಗೆ, ವಿದ್ಯೆ ಕಪಟಗಳ ಸಂಖ್ಯೆಯನ್ನಷ್ಟೆ ಸೃಷ್ಟಿಸುತ್ತಿರುವುದು ಈಚೆಗೆ ಗೊತ್ತಾಗುತ್ತಿದೆ.



ಊರಿನ ಯಾವುದೇ ಸಮಸ್ಯೆಯನ್ನು ಹೊರಗೆಳೆದುಕೊಂಡು ಹೋಗಿ ಅವರಿವರ ಸಹಾಯ ಬೇಡುವುದು, ಈ ಭಾಗದ ಜನರ ದೃಷ್ಟಿಯಲ್ಲಿ ಅಕ್ಷಮ್ಯವಾದ ಪ್ರಯುಕ್ತ ಮೀನಾಕ್ಷಮ್ಮನ ಬಗೆಗಿನ ಸಿಟ್ಟು ಇಲ್ಲಿನ ಜನಕ್ಕೆ ಹಾಗೇ ಇದೆ. ನಮ್ಮವ್ವನೂ ಹಿಂದೊಮ್ಮೆ ಮೀನಾಕ್ಷಮ್ಮನಂತೆ ಊರಜನರನ್ನು ಎದುರಾಕಿಕೊಂಡು ತಾಳಲಾರದೆ ಕೊನೆಗೆ ಪೋಲೀಸರಿಗೆ ದೂರುಕೊಟ್ಟಳು. ನಮ್ಮೂರಿನ ಇತಿಹಾಸದಲ್ಲಿ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊದಲ ಕೇಸು ನಮ್ಮವ್ವನದ್ದು. ಮೀನಾಕ್ಷಮ್ಮ ನಮ್ಮೂರಲ್ಲಿದ್ದರೂ ಈ ಗೋಳು ತಪ್ಪುತ್ತಿರಲಿಲ್ಲ.

ಇದೆಲ್ಲವೂ ತಣ್ಣಗಾದ ಮೇಲೆ ಆಕೆಗೆ ತೊಂದರೆ ಕೊಡುವ ಮನಸ್ಸು ಇಲ್ಲಿನವರಿಗಿದೆ. ಆದರೂ ಇಲ್ಲಿಗೆ ಬಂದು ಹೋದವರ ಬಗ್ಗೆ ಒಂದಿಷ್ಟು ಹೆದರಿಕೆಯಿರುವ ಪ್ರಯುಕ್ತ, ಸದ್ಯಕ್ಕೆ ಅಂತಹ ಧೈರ್ಯ ಮಾಡಲಾರರು. ನಾಗತಿಹಳ್ಳಿಗೆ ಬಂದ ನಮ್ಮೂರ ಮತ್ತು ಅಕ್ಕಪಕ್ಕದ ಜನ ಇಡೀ ಪ್ರಕರಣ ಮತ್ತು ತಮ್ಮ ಭಾಷಣವನ್ನು ಒಗ್ಗರಣೆಯೊಂದಿಗೆ ಚರ್ಚಿಸುತ್ತಿರುವ ಪ್ರಯುಕ್ತ, ಇಲ್ಲೊಂದು ಹೊಸ ವಾತಾವರಣದ ಗಾಳಿ ಬೀಸುತ್ತಿದೆ. ದುರ್ಬಲರಿಗೆ, ಅಸಹಾಯಕರಿಗೆ ಒಂದಿಷ್ಟು ಆತ್ಮವಿಶ್ವಾಸ ಬಂದಿದೆ.

-ಬಿ. ಚಂದ್ರೇಗೌಡ

ನಿರ್ಮಾಪಕರಿಗೂ-ರಾಜಕಾರಣಿಗಳಿಗೂ ಯಾವ ವ್ಯತ್ಯಾಸ?

ಬಿ. ಚಂದ್ರೇಗೌಡ, ಬೆಂಗಳೂರು
'ಈ ಜನ್ಮ ಸಾರ್ಥಕವಾಯಿತು' ಎಂದು ಗಂಡನಿಗೆ ಅನ್ನಿಸುವುದು ಯಾವಾಗ?
* ಸುಳ್ಳು ಹೇಳಿ ಹೆಂಡತಿಯನ್ನು ನಂಬಿಸಿದಾಗ.

ಮೆಂಚಾಲಿ ಗುರುರಾಜಚಾರು, ಬಳ್ಳಾರಿ
ಅನುಭವ ಇದೆಯ ಅಂಥ ಎಲ್ಲಿ ಕೇಳಬಾರದು? ಮತ್ತೆ ಬರುತ್ತೇನೆ ಅಂಥ ಎಲ್ಲಿ ಹೇಳಬಾರದು?
* ಮದುವೆಯಲ್ಲಿ, ಮೆಂಟಲ್ ಆಸ್ಪತ್ರೆಯಲ್ಲಿ.

ಎಂ.ಎನ್. ಕುಮಾರಸ್ವಾಮಿ, ಮಂಡ್ಯ
ಜನತಾದಳದಿಂದ ಜನಸಂಪರ್ಕ ಸೇವೆ ಆರಂಭ, ಬಿಜೆಪಿಯಿಂದ?
* ಬೌರಿಂಗ್ ಆಸ್ಪತ್ರೆಯಲ್ಲಿ ಯದ್ದಿಗೆ ಚೀಟಿ ಸೇವೆ ಆರಂಭವಾಗಿದೆಯಲ್ಲಾ?

ಕೆ.ವಿ. ಸುಗುಣ, ಮೈಸೂರು
"ಎಲ್ಲಾರು ಮಾಡುವುದು ಹೊಟ್ಟೆಗಾಗಿ... ಗೇಣು ಬಟ್ಟೆಗಾಗಿ..." ಈ ತತ್ವವನ್ನು ಹಿರೋಯಿನ್‌ಗಳು ಅನುಸರಿಸುತ್ತಿಲ್ಲವಲ್ಲ?
* ನಿರ್ಮಾಪಕನ ಹೊಟ್ಟೆ ಪಾಡು ಆಗಿರೋದ್ರಿಂದ.

ಕೆ.ವಿ. ರಾಘವೇಂದ್ರ, ಮೈಸೂರು
ಅಮೆರಿಕಾದ 'ಬುಷ್' ಬಂದರೆ ಭಾರತದವರು 'ಬುಸ್' ಗುಟ್ಟಿದ್ದೇಕೆ?
* ನ್ಯೂಕ್ಲಿಯರ್ ಪುಂಗಿ ಊದಲು ಬುಷ್ ಬಂದಿದ್ದರಿಂದ.

ಕೆ.ಬಿ. ಸುಕನ್ಯಾ ನಾಗರಾಜ್, ಕೆಂಕೆರೆ
ಹೆಂಗಸರು ಗಂಡಸರನ್ನು ಆರಾಧಿಸುವಂತೆ ಗಂಡಸರು ಹೆಂಗಸರನ್ನು ಆರಾಧಿಸುತ್ತಾರಾ?
* ಕೆಲವರು ತಾಯಿಯನ್ನು ಆರಾಧಿಸುತ್ತಾರೆ.

ಓದುಸಿದ್ದೇಗೌಡ ಕೆಬ್ಬೆಹಳ್ಳಿ, ಕನಕಪುರ
ಕಾಮಕ್ಕೆ ಕಣ್ಣು ಇದ್ದಿದ್ದರೆ?
* ಪ್ರೇಮ ಕುರುಡಾಗುತ್ತಿರಲಿಲ್ಲ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ವಯಸ್ಸಿಗೆ ಬಂದಾಗ ಕತ್ತೆ ಮರೀನೂ ಸುಂದರವಾಗಿ ಕಾಣುತ್ತ-ವಯಸ್ಸಾದ ಮೇಲೆ?
* ಸುಂದರಿಯೂ ಕತ್ತೆ ತರಹ ಕಾಣಿಸುತ್ತಾಳೆ.



ಕಣ್ಣಾ ಮುಚ್ಚಾಲೆ

ಕೆ. ಪ್ರಾಣೇಶ್‌ರಾವ್, ಹಗರಿಬೊಮ್ಮನಹಳ್ಳಿ
'ಮುಖ್ಯಮಂತ್ರಿ' ಚಂದ್ರು ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಿಲ್ಲವೇಕೆ?
* ಅಲ್ಲಿ ನಕಲಿ ಮುಖ್ಯಮಂತ್ರಿಗಳಿಗೆ ಜಾಗ ಇಲ್ಲ, ಅದಕ್ಕೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಹೆಣ್ಣಿಲ್ಲದ ಒಂದು ಮಂತ್ರಿಮಂಡಲ, ಅದೊಂದು ಮಂತ್ರಿ ಮಂಡಲವೇ?!
* ಅದು ಕಂತ್ರಿ ಮಂಡಲ ಕಣ್ರೀ!

ಕೆ. ಶ್ರೀನಿವಾಸ್, ಮಂಡ್ಯ
'ದರವೇಶಿ ಕತೆಗಳು' ಬರೆಯಲು ಸ್ಫೂರ್ತಿ?
* ಬಿಳಿದಾಳಿ ಈಶ ಎಂಬ ಪಿಶಾಚಿಯಂತೆ!

ಎಸ್. ಶ್ರೀಧರ್, ದಾವಣಗೆರೆ
ಕಾಂಗ್ರೆಸ್‌ಗೆ ಶತಮಾನಕ್ಕೂ ಹೆಚ್ಚು ವಯಸ್ಸಾಗಿದ್ದರೂ ಬುದ್ಧಿ ಬೆಳೆದಿಲ್ಲವೇಕೆ?
* ಅದು ಕತ್ತೆಗಳ ಕಾಂಗ್ರೆಸ್ ಸಂತತಿ, ಅದಕ್ಕೆ.



ಡಿ.ಎಸ್. ಪ್ರವೀಣ್, ದುಮ್ಮೇನಹಳ್ಳಿ
ನಿರ್ಮಾಪಕರಿಗೂ-ರಾಜಕಾರಣಿಗಳಿಗೂ ಯಾವ ವ್ಯತ್ಯಾಸ?
* ನಿರ್ಮಾಪಕ ತಾನೇ ನಿರ್ನಾಮವಾಗುತ್ತಾನೆ. ರಾಜಕಾರಣಿ ಇತರರನ್ನು ನಿರ್ನಾಮ ಮಾಡುತ್ತಾನೆ.

ಟಿ.ಎಸ್. ಸ್ವಾಮಿ, ಹೊಸಪೇಟೆ
ಕುಮಾರಸ್ವಾಮಿ 'ಜನತಾದರ್ಶನ'ಕ್ಕೂ, 'ತಿರುಪತಿ ದರ್ಶನ'ಕ್ಕೂ, ವ್ಯತ್ಯಾಸವೇನು?
* ಇಲ್ಲಿ ಕುಮಾರಸ್ವಾಮಿ ನಾಮ ಹಾಕಿಕೊಂಡಿರಲ್ಲ,

ಬಹುಮಾನಿತ ಪ್ರಶ್ನೆಗಳು

ಛೀ...ತು೦ಟಿ!

ಒಂದು ಹೇಸರಗತ್ತೆ ಅಡ್ಡಾಡುತ್ತ ರೈತನ ಮನೆಗೆ ಬಂತು. ಅಲ್ಲೊಂದು ಕುರಿಯನ್ನು ಕಂಡು "ಏನು ಕೆಲಸ ಮಾಡ್ತಿ?" ಎಂದು ಕೇಳಿತು. "ನಾನು ಉಣ್ಣೆ ಬೆಳೆಯುತ್ತೇನೆ" ಎಂಬ ಉತ್ತರ ಬಂತು.

ಹೇಸರಗತ್ತೆ ಹಸುವನ್ನು ಕೇಳಿತು. "ನಿನ್ನ ಕೆಲಸವೇನು?" ಹಸು "ಹಾಲು ಕೊಡುತ್ತೇನೆ" ಅಂದಿತು. ಅಲ್ಲೇ ಸಿಕ್ಕ ಕೋಳಿಗೆ, "ನೀನೇನು ಮಾಡುತ್ತಿ?" ಅಂದಾಗ ಕೋಳಿ "ಮೊಟ್ಟೆ ಇಡುತ್ತೇನೆ" ಅಂದಿತು.




ಹೇಸರಗತ್ತೆ ಮುಂದೆ ಸಿಕ್ಕ ಹೋರಿಗೆ ಅದೇ ಪ್ರಶ್ನೆ ಹಾಕಿತು - "ನೀನೇನು ಕೆಲಸ ಮಾಡುತ್ತೀ?"

ಹೋರಿ - "ಆ ನಿನ್ನ ಪ್ರೈವಾಸಾ ಬಿಚ್ಚಿ ತೋರಿಸುತ್ತೇನೆ" ಅಂದಿತು!

ಕೊರಂಗು ತಲೆದಂಡ ತಪ್ಪಿದ್ದೇಕೆ?

ಕೊರಂಗು ಎನ್‌ಕೌಂಟರ್ ತಪ್ಪಿದೆಯೆಂದರೆ ಅದಕ್ಕೊಂದು ಪೊಲೀಸ್ ಲೆಕ್ಕಾಚಾರ ಇರಲೇಬೇಕು!

ಅವರರ್ಥ ಕೊರಂಗುಗಿಂತಲೂ ಆತನ ಶಿಷ್ಯ ಸುನೀಲನೇ ಹೆಚ್ಚು ಅಪಾಯಕಾರಿ ಎಂಬುದು ಪೊಲೀಸರ ನಿರ್ಧಾರವೇ? ಹೇಗೂ ಇನ್ನೆರಡು ತಿಂಗಳೊಳಗೆ ಸುನೀಲನ ಬದುಗತೆಯಾಗುತ್ತದೆ. ಕೊರಂಗು ಪಾಲಿನ ತಲೆದಂಡವನ್ನು ಆತನ ನೆತ್ತಿಗೇ ಕಟ್ಟಿಬಿಟ್ಟರೆ ಅರ್ಧ ಬೆಂಗಳೂರು ಸರಿಹೋಗುತ್ತದೆ. ಕೊರಂಗು ಹಲ್ಲಿಲ್ಲದ ಕಿತ್ತಂತಾಗುತ್ತದೆ ಎಂಬುದು ಪೊಲೀಸರ ಲೆಕ್ಕಾಚಾರವೇ?


ಕೊರಂಗು

ಅಥವಾ ಪ್ರಾಣಭಿಕ್ಷೆಗೆ ಬದಲಾಗಿ ತನ್ನ ಜೊತೆ ಮಂಡ್ಯ ಕೃಷ್ಣನ ಹಂತಕ ಕೋತಿರಾಮ, ಬನಶಂಕರಿಯ ಲಿಂಗ ಮತ್ತು ಕತ್ರಿಗುಪ್ಪೆ ರಾಮನ ಹಂತಕ ರಾಜೇಶರಂಥ ಮೋಸ್ಟ್ ವಾಂಟೆಡ್‌ಗಳನ್ನು ಒಟ್ಟಿಗೇ ಸರೆಂಡರ್ ಮಾಡಿಸುತ್ತೇನೆಂದು ಕೊರಂಗು ಪೊಲೀಸರಿಗೆ ಪ್ಯಾಕೇಜ್ ಕೊಟ್ಟಿದ್ದನೆ?


ಎಲ್ಲವೂ ನಿಗೂಢ. ಮಾರ್ಚ್ ಎಂಟರ ಸಂಜೆಗೆಲ್ಲ ಸಿಸಿಬಿ ಎಸಿಪಿ ಶಿವರಾಮ್, ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ, ನಂಜುಂಡೇಗೌಡ ಮತ್ತು ಅಶೋಕನ್‌ರ ಮೊಬೈಲುಗಳು ಸ್ವಿಚ್ ಆಫ್ ಆಗಿದ್ದವು. ಇಡೀ ಸಿಸಿಬಿ ಪಡೆ ಮೂರು ಎ.ಕೆ. 47 ರೈಫಲ್ಲುಗಳ ಸಮೇತ ಚೆನ್ನೈನತ್ತ ಹೊರಟಿದೆ ಎಂಬ ಸುಳಿವಿತ್ತು. ಎಲ್ಲರೂ ಲೆಕ್ಕ ಹಾಕಿದ್ದು ಪಳನಿ ಕೊಲೆ ಕೇಸಿನಲ್ಲಿ ಪರಾರಿಯಾಗಿರುವ ಕಾಲಾಪತ್ಥರ್ ಕತೆ ಇನ್ನೇನು ಮುಗಿದೇ ಹೋಯಿತು ಎಂದು. ಆದರೆ ಸಿಕ್ಕಿದ್ದು ಕೊರಂಗು ಮತ್ತು ಆತನ ಕಪಿಸೈನ್ಯ. ಚಿತ್ತೂರಿನಿಂದ ಕೊರಂಗುವನ್ನು ಹಿಡಿದು ತಂದಿದ್ದೇವೆಂದು ಪೊಲೀಸರು ಅದೆಷ್ಟೇ ಆಣೆ ಪ್ರಮಾಣ ಮಾಡಿ ಹೇಳಿದರೂ ಸತ್ಯ ಅದಲ್ಲ-


ಕೊರಂಗು ಆಂಧ್ರದ ಪ್ರಕಾಶಂ ಜಿಲ್ಲೆಯ ಪಾಮೂರ್ ಎಂಬಲ್ಲಿ ಬಚ್ಚಿಟ್ಟುಕೊಂಡಿದ್ದು ಮತ್ತು ಆತ ಓಡಾಟಕ್ಕೆ ಬಳಸುತ್ತಿದ್ದ ಕ್ವಾಲೀಸ್‌ನ ನಂಬರ್ ಅನ್ನು ನಿಗೂಢವಾಗಿ ಕಲೆಹಾಕಿದ್ದು ಸಿಸಿಬಿ ಇನ್ಸ್‌ಪೆಕ್ಟರ್ ರೇವಣ್ಣ. ಈ ಬಾರಿ ಕೊರಂಗು ಎನ್‌ಕೌಂಟರ್ ಶತಸಿದ್ಧ ಎಂದು ನಿರ್ಧಾರ ಮಾಡಿಕೊಂಡೇ ಒಂದಲ್ಲ ಎರಡು ಎ.ಕೆ. 47ಗಳೊಡನೆ ಸಿಸಿಬಿ ಪಡೆ ಸಜ್ಜಾಗಿತ್ತು. ಬಹುಶಃ ಇತ್ತೀಚಿನ ದಿನಗಳಲ್ಲಿ ಕೊರಂಗುನಂತೆ ಪೊಲೀಸರನ್ನು ಕೆಣಕಿದ ಮತ್ತೊಬ್ಬ ರೌಡಿ ಇರಲಿಕ್ಕಿಲ್ಲ. ತಮಿಳಿನಲ್ಲಿ ಕೊರಂಗು ಅಂದರೆ ಕೋತಿ!


ರಾಜಾಜಿನಗರದ ಗುಂಗ್ರೂ ವೆಂಕಟೇಶನ ಹೋಲ್‌ಸೇಲ್ ವೈನ್ಸ್ ಗೋದಾಮಿಗೆ ನುಗ್ಗಿ ಲಾಂಗ್ ಹಿಡಿದು ಹುಡುಗಿಯರೊಂದಿಗೆ ನುಗ್ಗಿ ಬಾಂಬ್ ಎಸೆದು ಪರಾರಿಯಾಗಿದ್ದ ಕೊರಂಗು ಸರಿಸುಮಾರು ಐದು ವರ್ಷಗಳ ಕಾಲ ಬೆಂಗಳೂರಿನತ್ತ ತಲೆಹಾಕಲೇ ಇಲ್ಲ. ಇನ್ನು ಕೊರಂಗು ಕಾಟ ತಪ್ಪಿತೆಂದೇ ಪೊಲೀಸರು ಸುಮ್ಮನಾದರು. ಹಾಗೆ ಲೆಕ್ಕ ಹಾಕಿದ ಮತ್ತೊಬ್ಬನೆಂದರೆ ಆತ ಕೋದಂಡರಾಂಪುರದ ರೌಡಿ ಬನಾಯಸ್ ರಾಜೇಂದ್ರ. ಆತ ಕೊರಂಗು ಪಾಲಿಗೆ ಆಜನ್ಮ ಶತ್ರು. ಆ ಹೊತ್ತಿಗಾಗಲೇ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಮತ್ತು ಮಲ್ಲೇಶ್ವರಂ ಶಾಸಕ ಸೀತಾರಾಮ್ ಸಂಬಂಧ ಹಳಸಿತ್ತು. ಕೊರಂಗು ಅಣ್ಣ ಮುನಿರತ್ನಂ ಹರಿಪ್ರಸಾದ್ ಪಾಳಯದಲ್ಲಿ ಮಿಂಚುತ್ತಿದ್ದರೆ ಬನಾಯಸ್‌ಗೆ ಎಮ್ಮೆಲ್ಲೆ ಸೀತಾರಾಮ್ ಆಶೀರ್ವಾದವಿತ್ತು. 2004ರ ಏಪ್ರಿಲ್ ಹದಿನಾಲ್ಕರ ಬೆಳಿಗ್ಗೆ ರಾಜೇಂದ್ರ ಮಾಮೂಲಿನಂತೆ ಕೋದಂಡರಾಂಪುರದ ತನ್ನ ಅಡ್ಡೆಯಲ್ಲಿ ಕೂತು ಪೇಪರ್ ಓದುತ್ತಿದ್ದ. ಯಾರೂ ನಿರೀಕ್ಷಿಸದ ರೀತಿಯಲ್ಲಿ ಪಂಚೆ ಉಟ್ಟು ಹಳ್ಳಿಗರಂತೆ ಕಾಣುತ್ತಿದ್ದ ಹುಡುಗರ ತಂಡವೊಂದು ಆತನ ಮೇಲೆ ದಾಳಿ ನಡೆಸಿತ್ತು.

ಹೇಗೆ ಕತ್ತರಿಸಿತ್ತೆಂದರೆ ಬನಾಯಸ್ ಸತ್ತೇ ಹೋದ ಎಂದುಕೊಂಡು ಗ್ಯಾಂಗ್ ಪರಾರಿಯಾಗಿತ್ತು; ಆದರೆ ಬನಾಯಸ್ ಬಚಾವಾದ. ಆತನ ಕೈ ಮತ್ತು ಕಾಲುಗಳೆರಡೂ ಲ್ಯಾಪ್ಸ್ ಆಗಿದ್ದವು. ನೆಟ್ಟಗೆ ಮಾತಾಡುವುದಕ್ಕೂ ಆಗದಂತೆ ಬನಾಯಸ್ ಸ್ಕ್ರಾಪ್ ಆಗಿದ್ದ.

ಪೊಲೀಸರು ಕೋದಂಡರಾಂಪುರದ ಯಾರೋ ಒಂದಷ್ಟು ಪೋರ್ಕಿಗಳನ್ನು ಹಿಡಿದು ಜೈಲಿಗೆ ದಬ್ಬಿದ್ದರು. ಅದು ಕೊರಂಗುನ ರೀ ಎಂಟ್ರಿ. ಅವತ್ತು ಬನಾಯಸ್‌ನನ್ನು ಆತನ ಅಡ್ಡೆಗೇ ನುಗ್ಗಿ ಕತ್ತರಿಸಿದ್ದು ಚಿಕ್ಕನಕಚ್ ರಾಜೇಂದ್ರನ ಹಂತಕ ಸುನೀಲ ಮತ್ತು ಅದನ್ನು ಮಾಡಿಸಿದ್ದು ಕೊರಂಗು ಎಂಬುದು ಪೊಲೀಸರಿಗೆ ಗೊತ್ತಾಗುವ ಹೊತ್ತಿಗೆ ಸುನೀಲನ ಗ್ಯಾಂಗ್ ಕಲಾಸಿಪಾಳ್ಯದಲ್ಲಿ ಮಾರ್ಕೆಟ್ ವೇಡಿಯ ಅಡ್ಡೆಯಲ್ಲಿ ಅವಿತಿತ್ತು. ಸುಧಾಮನಗರದ ರಾಜೇಶ ಎಂಬ ಪುಡಿರೌಡಿಯೊಬ್ಬ ಇದೇ ಸುನೀಲನ ಪಡೆಯಿಂದ ಹತನಾಗಿದ್ದ. ಮುಂದೆ ಸುನೀಲನ ಪಡೆ ಚಿಕ್ಕನ್‌ಕಚ್ ರಾಜೇಂದ್ರನನ್ನು ಮುಗಿಸಿತು. ಆದರಲ್ಲಿ ಗೆಡ್ಡಾನಾಗನ ಹೆಸರು ಕೇಳಿಬಂತೇ ಹೊರತು ಸುನೀಲನ ಬೆನ್ನಿಗೆ ಕೊರಂಗು ಇದ್ದಾನೆ ಎಂಬುದು ನಿಗೂಢವಾಗೇ


ಕೋತಿರಾಮು


ಬನಶಂಕರಿ ಲಿಂಗ


ರಾಜೇಶ


ರಾಮಚಂದ್ರ

ವರ್ತಕರ 'ಹುಚ್ಚು' ಖಯಾಲಿ....

ಅಡಿಕೆ ದರ ಈ ಸಲ ಶೇ. 10 ರಿಂದ ಶೇ. 20 ರಷ್ಟು ಏರುವುದು ಮೊದಲೇ ಗ್ಯಾರಂಟಿ ಇತ್ತು. ಇದಕ್ಕೆ ಎರಡು ಕಾರಣಗಳಿದ್ದವು: ಮೊದಲನೆಯದಾಗಿ ಕೊಳೆ ರೋಗದ ಕಾರಣದಿಂದ ಅಡಿಕೆ ಉತ್ಪಾದನೆಯಲ್ಲಿ ಶೇ. 40 ರಷ್ಟು ಕುಸಿತವಾಗಿ, ಬೇಡಿಕೆ ಸ್ವಲ್ಪ ಹೆಚ್ಚಿತ್ತು. ಎರಡನೆಯದಾಗಿ ಶ್ರೀಲಂಕಾ, ಮಲೇಷಿಯಾಗಳಲ್ಲೂ ಕೊಳೆರೋಗದ ಕಾರಣದಿಂದ ಅಲ್ಲಿಂದ ಬರುತ್ತಿದ್ದ ಅಡಿಕೆಯೂ ಈ ಸಾರಿ ಕಡಿಮೆ ಪ್ರಮಾಣದಲ್ಲಿ ಬಂದಿದೆ. ಈ ಎರಡು ಕಾರಣಗಳಿಂದ ಕ್ವಿಂಟಾಲ್‌ಗೆ 2000 ರಿಂದ 3000 ರಷ್ಟು ರೂಪಾಯಿ ಏರಬೇಕಾಗಿತ್ತು. ಆದರೆ ಈಗ ಏಕಾಏಕಿ ದರ ದುಪ್ಪಟ್ಟು ಆಗಿರುವುದು ಮಾರ್ಕೆಟನ್ನೇ ತಮ್ಮ ವಶದಲ್ಲಿಟ್ಟುಕೊಂಡಿರುವ ಏಳೆಂಟು ಜನ ದೊಡ್ಡ ಕುಂತ್ರಿ ವರ್ತಕರ ಕುತಂತ್ರ ಮತ್ತು ಖಯಾಲಿಗಳಿಂದ. ಓಂಕಾರಪ್ಪ, ವಡ್ನಾಳ್ ರಾಜಣ್ಣ, ಕೆ.ಟಿ. ಜಯರಾಮ್, ಜೇತೇಂದ್ರ ಗೌರ್‌ನಂತಹ ಪಾಪಿ ವರ್ತಕರೇ ಅಡಿಕೆ ಮಾರ್ಕೆಟ್ ಮೇಲೆ ಹಿಡಿತ ಹೊಂದಿರುವುದು. ಈ ಸಲ ಕೆಟಿ. ಜಯರಾಮ್ ಉತ್ತರ ಭಾರತದ ಗುಟ್ಕಾ ದೊರೆಗಳಿಗೆ ಮಾರಲೆಂದು 60 ಲೋಡ್ ಅಡಿಕೆಯನ್ನು ಮೊದಲೇ ಬುಕ್ ಮಾಡಿ ಖರೀದಿಸಲಾರಂಭಿಸಿದ. ಸ್ಥಳೀಯರೇ ಆಗಿ ಹೋಗಿಬಿಟ್ಟಿರುವ ಉತ್ತರ ಭಾರತದ ಮಾರ್ವಾಡಿ ಜೀತು ಅಲಿಯಾಸ್ ಜಿತೇಂದ್ರ ಗೌರ್ ಪೈಪೋಟಿಗೆ ಬಿದ್ದು ಕ್ವಿಂಟಾಲ್‌ಗೆ 500, 1000 ರೂ. ಹೆಚ್ಚಿಸುತ್ತಾ ಹೋದ. ಕೆ.ಟಿ. ಜಯರಾಮನೂ ಪೈಪೋಟಿಯಿಂದ ದರ ಏರಿಸುತ್ತಲೇ ಹೋದ. ಹೀಗೆ ಈ ಇವರಿಬ್ಬರ ಪ್ರತಿಷ್ಠೆ, ಖಯಾಲಿಗಳ ಕಾರಣದಿಂದ ಅಡಿಕೆ ದರ ದಿಢೀರ್‌ನೆ ಡಬಲ್ ಆಗಿ ಹೋಯ್ತು. ಇದರ ಲಾಭ ಪಡೆದದ್ದು ಕೆಲವೇ ಕೆಲವು ದೊಡ್ಡ ಬೆಳೆಗಾರರು ಮಾತ್ರ. ಸಣ್ಣ ಬೆಳೆಗಾರನ ಬಳಿ ಇದ್ದ ಅಡಿಕೆ ಎಂದೋ ಕಡಿಮೆ ದರದಲ್ಲಿ ಮಾರಾಟವಾಗಿ ಹೋಗಿದೆ.

ಕೃತಕ ಏರಿಕೆ ಉಂಟು ಮಾಡುವ ತಿಮಿಂಗಿಲಗಳಿಗೆ ಅಡಿಕೆ ಬೆಳೆಗಾರರೇ ಬುದ್ಧಿ ಕಲಿಸಬೇಕಾಗಿದೆ. ಕೃತಕ ಬೆಳವಣಿಗೆಗಳು ಎಂದಿಗೂ ತಾತ್ಕಾಲಿಕ. ಅಡಿಕೆ ದರ ಆಕಾಶಕ್ಕೆ ನೆಗೆದಷ್ಟೇ ವೇಗದಲ್ಲಿ ನೆಲಕ್ಕೆ ನೆಗೆದ ಬೀಳಲಿದೆ!

ಅಡಿಕೆ ರೇಟ್ ಏರಿಸಿದ ವಂಚಕರು

ಅಡಿಕೆ ದರ ಒಂದೇ ಸಮನೆ ಏರುತ್ತಲೇ ಇದೆ!

ಈಗ ಮಲೆನಾಡಿನ ತುಂಬಾ ಅಡಿಕೆಯ ರೇಟಿನದೇ ಮಾತು. ಅಡಿಕೆ ಬೆಳೆಗಾರರು, ಮಂಡಿ ವ್ಯಾಪಾರಿಗಳು, ದೈತ್ಯ ವರ್ತಕರು, ಉತ್ತರ ಭಾರತದ ಗುಟ್ಕಾ ಕಂಪನಿಗಳ ಏಜಂಟರೆಲ್ಲ ತಮ್ಮ ತಮ್ಮ ಲಾಭದ ಲೆಕ್ಕದಲ್ಲಿ ಮುಳುಗಿ ಹೋಗಿದ್ದಾರೆ. ಆದರೆ ನಿಜಕ್ಕೂ ಈ ಅಡಿಕೆ ದರದ ತೀವ್ರ ಏರಿಕೆ ಸಹಜವಾದದ್ದೇ? ಅಡಿಕೆ ಸಂಗ್ರಹ ಕಡಿಮೆ ಆಗಿದ್ದಕ್ಕೆ ದರ ಏರುತ್ತಿದೆಯಾ? ವರ್ತಕರು, ಮಂಡಿ ವ್ಯಾಪಾರಿಗಳು, ಗುಟ್ಕಾ ಖದೀಮರ ಅಲಿಖಿತ ಒಪ್ಪಂದವೇ ಇದಕ್ಕೆ ಕಾರಣವೇ ಎಂದು ವಿಚಾರಿಸುತ್ತಾ ಹೋದರೆ ಇದೊಂದು ಕೃತಕ ದರ ಏರಿಕೆ ಎಂಬುದು ತಿಳಿಯುತ್ತದೆ. ಬೆಳೆಗಾರನಿಗಷ್ಟೇ ಅಲ್ಲ, ಸಣ್ಣಪುಟ್ಟ ಮಂಡಿ ವ್ಯಾಪಾರಿಗಳಿಗೂ ಟೋಪಿಗಳನ್ನು ತೊಡಿಸಲು ಅಡಿಕೆ ವ್ಯಾಪಾರದಲ್ಲಿ ಏಕಸ್ವಾಮ್ಯತೆ ಸಾಧಿಸಿಕೊಂಡಿರುವ ಹಲವು ಕಿರಾತಕ ಟ್ರೇಡರ್ಸ್‌ಗಳೇ ಈ ಕೃತಕ ದರ ಏರಿಕೆಗೆ ಕಾರಣರಾಗುತ್ತಿದ್ದಾರೆ; ಒಮ್ಮೆ ದೊಡ್ಡ ಮೊತ್ತ ಕೈಗೆ ಬಂದ ತಕ್ಷಣ ಇವರೆಲ್ಲ ಕಾಣೆಯಾಗಲಿದ್ದಾರೆ.


ನೆಗೆಯಿತು ಗಗನಕ್ಕೆ...

90 ರ ದಶಕದಲ್ಲಿ ಕಂಡುಬಂದಿದ್ದ ಅಡಿಕೆ ವೈಭವ ಮರುಕಳಿಸುತ್ತಿದೆ ಎಂದು ಭ್ರಮೆ ಹುಟ್ಟಿಸಲು ತಿಮಿಂಗಿಲ ವರ್ತಕರುಗಳೇ ಅಡಿಕೆ ದರದ ಏರಿಕೆಗೆ ಕಾರಣರಾಗುತ್ತಿದ್ದಾರೆ. ಆದರೆ ಈ ದರ ಏರಿಕೆ ತಾತ್ಕಾಲಿಕ ಎನ್ನುವುದು ಸ್ಪಷ್ಟ. ಮಾರ್ಚ್ 8 ರ ಶಿವಮೊಗ್ಗ ಮಾರುಕಟ್ಟೆಯಲ್ಲಿ ಗರಿಷ್ಠಧಾರಣೆ ಸರಕು 16,529 ರೂ. ಬೆಟ್ಟೆ 15,589 ಆಪಿ 15,009 ಇಡಿ 13,816 ಮತ್ತು ಗೊರಬಲು 8009 ರೂ.ಗಳಿಗೆ ಒಂದೇಟಿಗೆ ಏರಿದ್ದು ಅನುಮಾನಾಸ್ಪದವಾಗಿದೆ. ಧಾರಣೆ ಕುಸಿತದಿಂದ ಏಳೆಂಟು ತಿಂಗಳ ಹಿಂದೆ ಬೆಂಬಲ ಬೆಲೆಗೆ ಮೊರೆ ಹೋಗಿದ್ದ ಸಾಗರದಲ್ಲಿ ರಾಶಿ ಇಡಿ ಅಡಕೆಗಳಿಗೂ ಈಗ ಡಿಮ್ಯಾಂಡ್ ಬಂದುಬಿಟ್ಟಿದೆ! ಭೀಮಸಮುದ್ರ, ಚೆನ್ನಗಿರಿ ಮಾರುಕಟ್ಟೆಗಳಲ್ಲೂ ಅಡಿಕೆಯ ದರದ ಆರೋಹಣವೇ ಆರೋಹಣ!



ನೆಗೆದು ಬೀಳಲಿದೆ ನಾಳೆ?

ಗೂಳಿ (bull) ಟ್ರೇಡರ್‌ಗಳ ಹಿಕ್ಮತ್ತಿನಿಂದ ಒಮ್ಮೊಮ್ಮೆ ಏಕಾಏಕಿ ಷೇರು ಮಾರುಕಟ್ಟೆಯ ಸೆನ್ಸೆಕ್ಸ್ ಏರುತ್ತದಲ್ಲ... ಗೂಳಿಗಳಿಗೆ ಲಾಭವಾದ ತಕ್ಷಣವೇ ಮತ್ತೆ ಕುಸಿಯುತ್ತದಲ್ಲ... ಇವತ್ತು ಮಲೆನಾಡಿನ ಅಡಿಕೆ ದರದ ಹಠಾತ್ ಏರಿಕೆಯ ಹಿಂದೆಯೂ ಇಂತಹುದೇ ವರ್ತಕ ಗೂಳಿಗಳಿವೆ. ಮಾರುಕಟ್ಟೆಯ ಏಕಸ್ವಾಮ್ಯಕ್ಕಾಗಿ ಎರ್ರಾಬಿರ್ರಿ ದರ ಏರಿಸುತ್ತಾ, ಪರಸ್ಪರ ಕಾಲೆಳೆಯುವುದರಲ್ಲಿ ಮಗ್ನರಾಗಿರುವ ವರ್ತಕರು ಮಂಡಿ ವ್ಯಾಪಾರಿಗಳಿಗೆ, ಬೆಳೆಗಾರರಿಗೆ ಸದ್ಯದಲ್ಲೇ ಭರ್ಜರಿ ಹೊಡೆತ ಕೊಟ್ಟು ಓಡಿ ಹೋಗಲಿದ್ದಾರೆ. ಏಕೆಂದರೆ ಈಗಾಗಲೇ ಹಲವಾರು ಟೋಪಿವಾಲಾ ವರ್ತಕರು ಆ ಕೆಲಸ ಮಾಡಿದ್ದಾರೆ.



ಈ ವರ್ತಕರು ಈಗಾಗಲೇ ಹಿಂದಿನ ದರದಲ್ಲಿ ಅಡಿಕೆ ಪೂರೈಸುವುದಾಗಿ ಉತ್ತರ ಭಾರತದ ಖದೀಮ ಗುಟ್ಕಾ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಇನ್ನೇನು ಬೇಸಿಗೆಯ ಆರಂಭ. ಗುಟ್ಕಾಕ್ಕೆ ಅಡಿಕೆ ಖರೀದಿ ಜೋರಾಗಲಿದೆ. ಈಗ ದಿಢೀರ್ ಏರಿರುವ ದರದಲ್ಲಿ ಅಡಿಕೆ ಖರೀದಿಸಿ, ಗುಟ್ಕಾ ಕಂಪನಿಗಳಿಗೆ ಹಳೆ ದರದಲ್ಲಿ ಮಾರಿ ಹಾಡುಹಗಲೇ ಲಾಸ್ ಆಗಲು ಈ ವರ್ತಕರು ಬಯಸುತ್ತಾರಾ? ಅದಕ್ಕೆ ಈಗ ಎಲ್ಲೆಡೆ ಅನುಮಾನ ಶುರುವಾಗಿದೆ. ಈ ವರ್ಷದ ಅಡಿಕೆ ಬೆಳೆ ಪೈಕಿ ಶೇ. 40 ರಷ್ಟು ಶಿವಮೊಗ್ಗ ಎಪಿಎಂಸಿಯನ್ನು ತಲುಪೇ ಇಲ್ಲ. ಏಕೆಂದರೆ ದೊಡ್ಡ ವರ್ತಕರೆಲ್ಲ ಹಳ್ಳಿಹಳ್ಳಿಗೆ ಹೋಗಿ ಬೆಳೆಗಾರರಿಂದ ನೇರವಾಗಿ ಅಡಿಕೆ ಖರೀದಿಸಿ ಸರ್ಕಾರಕ್ಕೆ ನೂರಾರು ಕೋಟಿ ರೂ. ತೆರಿಗೆ ಮುಂಡಾಮೋಚಿದ್ದಾರೆ. ವಾರ್ಷಿಕ 700 ಕೋಟಿ ರೂಪಾಯಿಗಳ ವ್ಯವಹಾರದ ಶಿವಮೊಗ್ಗ ಅಡಿಕೆ ಮಾರುಕಟ್ಟೆ ಕೆಲವೇ ಕೆಲವು ದೊಡ್ಡ ವರ್ತಕರ ಏಕಸ್ವಾಮ್ಯಕ್ಕೊಳಗಾಗಿದೆ. ಈಗ ಉಳಿದವರು ಮಾರ್ಕೆಟ್ ಮೇಲೆ ಹಿಡಿತ ಸಾಧಿಸಲು ಯದ್ವಾತದ್ವಾ ರೇಟಿಗೆ ಅಡಿಕೆ ಖರೀದಿಸುವಂತೆ ನಾಟಕ ಆಡುತ್ತಿದ್ದಾರಷ್ಟೇ.

ಇಲ್ಲೊಂದು ಮೀನಾಕ್ಷಿ ಸುಪಾರಿ ಟ್ರೇಡರ್ಸ್ ಇದೆ. ಇದರ ಕೆಲಸವೇ ಗುಟ್ಕಾ ಕಂಪನಿಗಳ ಏಜಂಟನಾಗಿ ಕೆಲಸ ಮಾಡುವುದು. ಉತ್ತರ ಭಾರತದಿಂದ ಬಂದು ಮೀನಾಕ್ಷಿ ಟ್ರೇಡರ್ಸ್ ಎಂಬ ನಂ. 2 ವ್ಯವಹಾರಗಳ

ಸಮಾಧಾನಿಯ ಸಿಟ್ಟಿನ ಬಗ್ಗೆ ಎಚ್ಚರದಿಂದಿರಿ -ಡ್ರೈಡನ್

ಇತ್ತು. ಈ ಮಧ್ಯೆ ಹೆಣ್ಣೂರಿನ ಮೈಕಸುಬು ಕೇಂದ್ರವೊಂದರಲ್ಲಿ ಹಫ್ತಾ ಕೇಳಲು ಹೋಗಿ ಕೊರಂಗು ಪೊಲೀಸರಿಗೆ ಸಿಕ್ಕಿಬಿದ್ದ. ಆತನ ಜೊತೆ ಬ್ಯಾಂಡ್ ತುಡುಗಿಯರಿದ್ದರು.

ಅದು ಐದು ವರ್ಷದ ನಂತರದ ಕೊರಂಗುನ ಪ್ರಥಮ ದರ್ಶನವಾಗಿತ್ತು, ಅಲ್ಲಿಂದಾಚೆಗೆ ಕೊರಂಗು ಪ್ರತಿನಿತ್ಯ ಪೊಲೀಸರಿಗೆ ತಲೆನೋವಾಗುತ್ತಲೇ ಬಂದ. ಕೊರಂಗು, ಸುನೀಲ, ಮಾರ್ಕೆಟ್ ವೇದಿ, ಕಾಮಾಕ್ಷಿ ಪಾಳ್ಯದ ಮಚ್ಚ, ಬನಶಂಕರಿಯ ಲಿಂಗ, ವಿದ್ಯಾಪೀಠದ ಕೋಳಿ ರಾಜೇಶ, ಇವರೆಲ್ಲರನ್ನೂ ಸಂಭಾಳಿಸಲು ವೃದ್ಧ ರೌಡಿ ಗೆದ್ದಾನಾಗ.

ತಣ್ಣಗಿದ್ದ ಬೆಂಗಳೂರಿನಲ್ಲಿ ಕೊರಂಗು ಎಂಟ್ರಿ ಎಂಥಾ ಕಲ್ಲೋಲ ಎಬ್ಬಿಸಿತ್ತೆಂದರೆ ಶಿವಮೊಗ್ಗ ನಾಗ ಸರಿಸುಮಾರು ಮುನ್ನೂರು ಮಂದಿಯ ಗ್ಯಾಂಗ್ ಕಟ್ಟಿಕೊಂಡು ಚಾಣಸವಾಡಿಯ ಕೊರಂಗು ಅಡ್ಡೆಯ ಮೇಲೆ ರೇಡುಬಿದ್ದ. ಕೊರಂಗು- ಸುನೀಲರನ್ನು ನೆಚ್ಚಿಕೊಂಡು ಕಾಮಾಕ್ಷಿಪಾಳ್ಯದಲ್ಲಿ ಮಚ್ಚ ಎದ್ದು ನಿಂತ.

ಅಂಥಾ ಮಚ್ಚನನ್ನು ಮಾಜಿ ಕಾರ್ಪೊರೇಟರ್ ಗೋಪಾಲಯ್ಯನ ಗ್ಯಾಂಗ್ ಕೊಚ್ಚಿಹಾಕಿದ್ದೇ ತಡ ಕೊರಂಗು ಮತ್ತು ಮಚ್ಚನ ಬಂಟ ಕೋತಿರಾಮ ಲಗ್ಗೆರೆಯ ಮೇಲೆ ದಂಡೆತ್ತಿ ಬಂದರು. ಮುಲಾಮನ ಮನೆ ಚಿಂದಿ ಮಾಡಿ ಆತನ ಬಂಟ ಮಂಡ್ಯ ಕೃಷ್ಣನನ್ನು ಕೊಂದರು. ಇತ್ತ ಬನಶಂಕರಿಯಲ್ಲಿ ಕೊರಂಗು ಶಿಷ್ಯ ಲಿಂಗ ಮತ್ತು ಕೋಳಿ ರಾಜೇಶ ಚಿಗಿತುಕೊಂಡರು. ಲಿಂಗ ಇಟ್ಟಮಡುವಿನಲ್ಲಿ ಜಗ್ಗನನ್ನು ಕೊಂದ. ಲಿಂಗನ ಬದ್ಧವೈರಿ ಕತ್ರಿಗುಪ್ಪೆ ರಾಮನನ್ನು ಬಳ್ಳನನ್ನು ಛೂಬಿಟ್ಟು ರಾಜೇಶ ಕೊಲ್ಲಿಸಿದ. ಇತ್ತ ಕಲಾಸಿಪಾಳ್ಯದ ಸುನೀಲನ ಬಂಟ ಸುಬ್ಬನ ತಮ್ಮಂದಿರು ಬಸವನಗುಡಿಯಲ್ಲಿ ಸೇತು ಎಂಬಾತನನ್ನು ಕೊಂದರು. ಪೊಲೀಸರು ಇನ್ನೇನು ತನ್ನನ್ನು ಎನ್‌ಕೌಂಟರ್ ಮಾಡಿಬಿಡುತ್ತಾರೆ ಎಂದುಕೊಂಡೇ ಕೊರಂಗು ತನ್ನ ಎನ್‌ಕೌಂಟರ್ ಕತೆ ತೇಲಿಬಿಟ್ಟ.

ಅದು ಆತನ ಕಪಿಚೇಷ್ಟೆಯ ವೈಖರಿ. ಕೊರಂಗು ಹಾವಳಿಗೆ ಪೊಲೀಸರು ರೋಸತ್ತಿರುವಾಗಲೇ ಉದಯ ಟೀವಿಯ ಕ್ರೈಂ ಸ್ಟೋರಿಯಲ್ಲಿ ಪ್ರತ್ಯಕ್ಷನಾಗಿ 'ನನ್ನ ಕಡೆಯ ಒಂದು ತಲೆ ಉರುಳಿದರೆ ಅವರ ಕಡೆ ಇಪ್ಪತ್ತು ತಲೆ ತಗೀತನಿ, ಗಾಂಡು ಮುಲಾಮನನ್ನು ಮುಗಿಸ್ತೀನಿ' ಎಂದು ಮತ್ತೊಂದು ಪಟಾಕಿ ಸಿಡಿಸಿಬಿಟ್ಟ.

ಅಲ್ಲಿಗೆ ಕೊರಂಗು ಎನ್‌ಕೌಂಟರ್ ಗ್ಯಾರಂಟಿಯಾಗಿತ್ತು. ಹಾಗೊಂದು ನಿರ್ಧಾರ ಮಾಡಿಕೊಂಡೇ ಸಿಸಿಬಿಯ ಪೊಲೀಸ್ ಪಡೆ ಮಾರ್ಚ್ ಎಂಟರ ರಾತ್ರಿ ಬೆಂಗಳೂರನ್ನು ಬಿಟ್ಟಿತ್ತು, ಕೊರಂಗು ಅಡಗಿದ್ದ ಪಾಮೂರ್ ಆಂಧ್ರದ ಪ್ರಕಾಶಂ ಜಿಲ್ಲೆಯಲ್ಲಿದೆ.

ಬೆಂಗಳೂರಿನಿಂದ ಆರುನೂರೈವತ್ತು ಕಿ.ಮಿ. ದೂರ. ಸಿಸಿಬಿ ತಂಡ ಪಾಮೂರ್ ತಲುಪುವ ಹೊತ್ತಿಗ ರಾತ್ರಿ ಮೂರೂವರೆಯಾಗಿತ್ತು. ಅದೆಲ್ಲಿಗೋ ಹೋಗಿದ್ದ ಕೊರಂಗು ತನ್ನ ಕ್ವಾಲೀಸ್ ಗಾಡಿಯಲ್ಲಿ ಪೊಲೀಸರ ಎದುರು ದಿಕ್ಕಿನಿಂದ ಬರುತ್ತಿದ್ದ. ಗಾಡಿ ನೋಡಿದ್ದೇ ತಡ ಪೊಲೀಸರು ಬೆನ್ನಟ್ಟಿದ್ದಾರೆ. ಕೊರಂಗು ಇದ್ದಗಾಡಿಯನ್ನು ಸುತ್ತುವರಿದ ಪೊಲೀಸರನ್ನು ಅಲ್ಲಿನ ಗ್ರಾಮಸ್ಥರು ಸುತ್ತುವರಿದ್ದಾರೆ.

ತನ್ನೊಡನೆ ಒಂದಿಬ್ಬರು ಲೋಕಲ್ ಹುಡುಗರನ್ನು ಕೊರಂಗು ಇಟ್ಟುಕೊಂಡಿದ್ದ. ಆ ಹುಡುಗರೇ ಜನರನ್ನು ಸೇರಿಸಿದ್ದು. ಇನ್ನೇನು ಜನ ಪೊಲೀಸರ ಮೇಲೆ ದಾಳಿ ನಡೆಸಿ ಕೊರಂಗುನನ್ನು ಬಿಡಿಸಿಕೊಳ್ಳುತ್ತಾರೆನ್ನುವಾಗಲೇ ಸಿಸಿಬಿ ಪೊಲೀಸರು ಗುಂಡು ಹಾರಿಸಿದ್ದಾರೆ. ಹಾಗೇ ಜನರನ್ನು ಚದುರಿಸಿ ನೆಲ್ಲೂರು ಜಿಲ್ಲೆಯ ಕಾವಲಿ ಎಂಬ ಊರನ್ನು ತಲುಪುತ್ತಿದ್ದಂತೆ ಆಂಧ್ರ ಪೊಲೀಸರು ಸುತ್ತುವರಿದರು.

ಆ ಹೊತ್ತಿಗಾಗಲೇ ಯಾರೋ ನಕ್ಸಲೀಯರು ಗ್ರಾಮಸ್ಥರನ್ನು ಅಪಹರಿಸಿ ಒಯ್ಯುತ್ತಿದ್ದಾರೆ ಎಂಬ ಸುದ್ದಿ ಆಂಧ್ರದ ಎಲ್ಲಾ ಪೊಲೀಸ್ ಠಾಣೆಗಳಿಗೂ ರವಾನೆಯಾಗಿತ್ತು.


ಕಾವಲಿ ಪೊಲೀಸ್ ಠಾಣೆಯಲ್ಲಿ ಎಸಿಪಿ ಶಿವರಾಮ್ ತಮ್ಮ ಲಿಖಿತ ಹೇಳಿಕೆಯನ್ನು ಕೊಟ್ಟ ನಂತರವೇ ಆಂಧ್ರ ಪೊಲೀಸರು ಇಡೀ ತಂಡವನ್ನು ಬಿಟ್ಟು ಕಳಿಸಿದರು. ಯಾವತ್ತು ಆಂಧ್ರ ಪೊಲೀಸರಿಗೆ ಕೊರಂಗು ಮತ್ತು ಆತನ ತಂಡದ ಬಗ್ಗೆ ಲಿಖಿತ ಹೇಳಿಕೆ ಬರೆದುಕೊಟ್ಟರೋ ಅಲ್ಲಿಗೆ ಕೊರಂಗು ಎನ್‌ಕೌಂಟರ್ ಸಾಧ್ಯತೆಯೇ ಕ್ಷೀಣಿಸಿತ್ತು. ಹಾಗೇನಾದರೂ ಆತನ ಎನ್‌ಕೌಂಟರ್ ನಡೆದಿದ್ದರೆ ಆತನನ್ನು ಆಂಧ್ರದಿಂದ ಬಂಧಿಸಿ ಒಯ್ದ ಬಗ್ಗೆ ಆಂಧ್ರ ಪೊಲೀಸರಲ್ಲಿ ದಾಖಲೆಯಿರುತ್ತಿತ್ತು.

ಇದು ಪೊಲೀಸರ ಸಮಜಾಯಿಸಿ. ಸದ್ಯಕ್ಕಂತೂ ಕೊರಂಗು ತಲೆದಂಡ ತಪ್ಪಿದೆ. ಪಾಪಿ ಚಿರಾಯು!

-ರಾ. ಸೋಮನಾಥ್

ಯಡೂರಪ್ಪನ ಬಿ.ಪಿ. ಯಡವಟ್ಟಾದದ್ದು ಯಾವಾಗ?

ನಮ್ಮ ಆಧುನಿಕ ಅಂಧಯುಗದ ಪಿತೃಪರ್ಯರಾದ ದೇವೇಗೌಡರು ಎಲ್ಲರ ನಿರೀಕ್ಷೆಯಂತೆ ತಮ್ಮ ಕುಮಾರ ಕಂಠೀರವನನ್ನು ಮನೆಗೇ ಕರೆಸಿಕೊಂಡು ಆಶೀರ್ವದಿಸಿದ್ದಾರಂತಲ್ಲಾ. ಮಗನನ್ನು ಮನೆಗೆ ಕರೆಯುವ ಮುನ್ನ ಮೂರು ನಾಲ್ಕು ಜನ ವೈದ್ಯರನ್ನು ಮನೆಗೆ ಕರೆಸಿಕೊಂಡು, ಅದು ಇಡೀ ಜನತಾದಳದ ಮೂರ್ಖರಿಗೆಲ್ಲಾ ಗೊತ್ತಾಗುವಂತೆ ಮಾಡಿ, "ಪಾಪ ಅಪ್ಪನಿಗೆ ಹುಷಾರಿಲ್ಲ ಈ ಸಮಯದಲ್ಲಿ ಮಗ ಹೋಗಿ ನೋಡುವುದು ದಳದ ಧರ್ಮ" ಎಂದು ಮಾತನಾಡಿಕೊಳ್ಳುವಂತಹ ವಾತಾವರಣವನ್ನೇ ಸೃಷ್ಟಿ ಮಾಡಿದ್ದರಂತಲ್ಲಾ. ಗೌಡರನ್ನು ಮೂರು ಸುತ್ತು ತಪಾಸಣೆ ಮಾಡಿದ ವೈದ್ಯರು "ಗೌಡರ ದೇಹದ ಬಾಹ್ಯರೂಪದಲ್ಲಿ ಭಯಂಕರ ಕಾಯಿಲೆ ಸೋಗಿದ್ದರೂ, ಅಂತರ್ಯದಲ್ಲಿ ಅಚ್ಚರಿಪಡುವಂತೆ ದೇಹದ ಎಲ್ಲಾ ಪಂಚೇಂದ್ರಿಯಗಳು ಖುಷಿಯಿಂದಲೇ ಕರ್ತವ್ಯ ನಿರ್ವಹಿಸುತ್ತಿವೆ" ಎಂದು ಚರ್ಚಿಸಿಕೊಂಡರಂತಲ್ಲಾ. ಇದನ್ನು ಕೇಳಿಸಿಕೊಂಡ ಗೌಡರು "ಈ ಸಂಗತಿಯನ್ನು ಬಹಿರಂಗಪಡಿಸಬೇಡಿ, ನಿಮ್ಮಲ್ಲೇ ಇರಲಿ. ನೀವು ಸರ್ಕಾರಿ ವೈದ್ಯರಾಗಿದ್ದರೆ ಕೇಳಿದ ಜಾಗಕ್ಕೆ ವರ್ಗ ಮಾಡಿಸುತ್ತೇನೆ. ಖಾಸಗಿ ವೈದ್ಯರಾಗಿದ್ದರೆ ನಿಮ್ಮ ನರ್ಸಿಂಗ್ ಹೋಮಿಗೆ ಸಕಲ ಸವಲತ್ತು ಕರುಣಿಸುವಂತೆ ಕುಮಾರನಿಗೆ ಹೇಳುತ್ತೇನೆ" ಎಂದು ಕೈತುಂಬಾ ಕಾಸು ಕೊಟ್ಟು ಕಳುಹಿಸಿದರಂತಲ್ಲಾ, ಥೂತ್ತೇರಿ!



* * * * * * * * * *

ದೇವೇಗೌಡರ ನಿಜವಾದ ಮಗ ಮನೆಗೆ ಬಂದ ಕೂಡಲೇ ಗೌಡರಿಗೆ ಹೋಗಿ ತಬ್ಬಿಕೊಳ್ಳುವಂತಹ ವ್ಯಾಮೋಹ ಪ್ರಾಪ್ತಿಯಾಯ್ತಂತಲ್ಲಾ. ಇದನ್ನು ಕಂಡು ರೇವಣ್ಣನ ಹೆಂಡತಿ ಗಂಡನನ್ನು ಕರೆದು "ನೀನೇನು ನಿಮ್ಮಪ್ಪನಿಗೆ ಹುಟ್ಟಲಿಲ್ಲವೆ? ನ್ಯಾಯವಾಗಿ ಹಿರಿಮಗ ಮುಖ್ಯಮಂತ್ರಿಯಾಗಬೇಕು ಅಂತ ಹಠ ಹಿಡಿಯಕ್ಕೇ ನಾಗ್ಯದೆ ನಿನಿಗೆ. ನೀನಿಂಗೇ ಸುಮ್ಮನಿದ್ರೆ ನಾನು ನಮ್ಮಪ್ಪನ ಮನೆಗೋಗಿಬುಡ್ತಿನಿ. ಆಗ ಮರಿಯಾದಿ ಹೋಗದು ನಮ್ಮಪ್ಪುಂದಲ್ಲ, ನಿಮ್ಮಪ್ಪುಂದು" ಎಂದಳಂತಲ್ಲಾ. ರೇವಣ್ಣ



ಸೀದಾ ಅಲ್ಲಿಂದ ಬಂದವನೆ ಅಪ್ಪನ ಎದುರು ನಿಂತ ಗುಳುಕಾಯಿ ತರಹ ಕಣ್ಣು ಉರಳಿಸುತ್ತಾ ನೀರು ತುಂಬಿಕೊಂಡಿದ್ದನ್ನು ನೋಡಿದ ದೇವೇಗೌಡರು, "ಕುಮಾರ, ನಿನ್ನ ಅವಧಿ ಮುಗಿದ ನಂತರ ರೇವಣ್ಣನಿಗೆ ಅವಕಾಶ ಮಾಡಿಕೊಡು. ಅದಕ್ಕೆಂದೇ ನಾನೀಗಾಗಲೇ ಆ ಸಿದ್ಧರಾಮ, ಪ್ರಕಾಶ್, ಸಿಂಧ್ಯಾ ಇವರಾರು ನಿಮ್ಮ ಭವಿಷ್ಯಕ್ಕೆ ತೊಂದರೆ ಕೊಡದಂತಹ ಜಾಗದಲ್ಲಿ ಇರಿಸಿದ್ದೇನೆ" ಎಂದಾಗ ಕುಮಾರ ಕೂಡಲೇ ಹೋಗಿ ಸ್ವಜಾತಿ ವಕೀಲರೆದುರು "ಮುಂದಿನ ಮುಖ್ಯಮಂತ್ರಿ ಅಣ್ಣಾ ರೇವಣ್ಣ, ನಿಜವಾಗಿ ಈಗ ಅವನೇ ಆಗಬೇಕಿತ್ತು. ಆ ತಪ್ಪನ್ನು ಮುಂದೆ ಸರಿಪಡಿಸುತ್ತೇನೆ" ಎಂದನಂತಲ್ಲಾ, ಥೂತ್ತೇರಿ!

* * * * * * * * * *

ಒಳ್ಳೆಯವರ ಮಾನ ಹಳ್ಳಿಲೋಯ್ತು, ಅಂತ ಒಳ್ಳೆಯವನಲ್ಲದ ಮಾನ ಸಿಟಲೇ ಹೋಯ್ತಂತಲ್ಲಾ. ನಮ್ಮ ಶಂಕರಮೂರ್ತಿ ಎಂಬ ಅಕ್ಕಿ ಶೆಟ್ಟಿ ಶಿವಮೊಗ್ಗದಲ್ಲಿ ಸನ್ಮಾನ ಸ್ವೀಕರಿಸಲು ಹೋಗಿದ್ದಾಗ ಮೆಳೆ ಹೋತನಂತಹ ಕಾಂಗ್ರೆ ಹುಡುಗರು ಜೋಲೆಗರಿ ಬಂದವಂತಲ್ಲಾ. ಇದರಿಂದ ಕುಪಿತನಾದ ಶಂಕರಮೂರ್ತಿಗಳು "ನಿಮ್ಮ ಕಾಂಗ್ರೆ ಜನರಿಂದ ಬುದ್ಧಿ ಹೇಳಿಸಿಕೊಳ್ಳೋ ಮಟ್ಟದಲ್ಲಿ ನಾವಿಲ್ಲ" ಎಂದರಂತಲ್ಲಾ, ಅದಕ್ಕೆ ಕಾಂಗ್ರೆ ಹುಡುಗರು "ನಾವೂ ಕೂಡ ಅಕ್ಕಿ ಕಳ್ಳ, ಯಣ್ಣೆ ಕಳ್ಳನಿಂದ ಬುದ್ಧಿ ಹೇಳಿಸಿಕೊಳ್ಳೋ ಮಟ್ಟದಲ್ಲಿಲ್ಲ, ಮಂತ್ರಿಯಾಗಿದ್ದಿಯಾ

ಸರಿಯಾಗಿ ಮಾತಾಡು" ಎಂದವಂತಲ್ಲಾ, ಆ ಹುಡುಗರಿಗೆ ಏನೂ ಹೇಳಲಾಗದ ಶೆಟ್ಟಿ ಅಲ್ಲೇ ಅಟೆನ್ಷನಾಗಿಯಂತೆ ನಿಂತಿದ್ದ ಪೊಲೀಸರಿಗೆ ಬೈದನಂತಲ್ಲಾ, ಥೂತ್ತೇರಿ!

* * * * * * * * * *

ಈ ಶಂಕರಮೂರ್ತಿ ಎಂಬ ಶೆಟ್ಟಿ ಮಂತ್ರಿಯಾದ ಅಮಲಿನಲ್ಲಿ ಏನೇನೊ ಮಾತನಾಡುತ್ತಿರಬೇಕಾದರೆ, ಬಿ.ಪಿ. ಏರಿಸಿಕೊಂಡೇ ಕಾಲ ಹಾಕಿದ ಎಡೂರಪ್ಪ ರಾತ್ರಿ ನಿದ್ರೆ ಮಾಡದ ಸ್ಥಿತಿ ತಲುಪಿದ್ದಾರಂತಲ್ಲಾ, ತನ್ನ ನಿದ್ರಾಹೀನ ಬಿ.ಪಿ. ಕಾಯಿಲೆ ಯಾರಿಗೂ ತಿಳಿಯಬಾರದೆಂದು ದಾವಣಗೆರೆ ಕಡೆಯ ಅಕ್ಕಿ ವ್ಯಾಪಾರಿಯ ವೇಷದಲ್ಲಿ ಹೋಗಿ ಆಸ್ಪತ್ರೆಗೆ ಅಡ್‌ಮಿಟ್ಟಾಗಿದ್ದರಂತಲ್ಲಾ, ಅರ್ಧ ರಾತ್ರಿಯಲ್ಲಿ ಬಂದು ಅಡ್‌ಮಿಟ್ಟಾದವನು ನಿಜವಾಗಿಯೂ ನಿಜವಾದ ರೋಗಿಯಲ್ಲ, ಇದರಲ್ಲೇನೊ ಕರಾಮತ್ತಿದೆ. ಅದರಲ್ಲೂ ಕೆಲವು ಬಿ.ಪಿ. ಆಸಾಮಿಗಳು ಹೊತ್ತಿಲ್ಲದ ಹೊತ್ತಿನಲ್ಲಿ ಸಂಭೋಗಕ್ಕೆಂದು ರೆಡಿಯಾದಾಗಲೂ ಬಿ.ಪಿ. ಯದ್ವಾತದ್ವಾ ಏರಿಬಿಡುತ್ತದೆ. ಸದರಿ ಪೇಶಂಟು ಈನಾಡಿ ಬಿ.ಪಿ. ಏರಿಸಿಕೊಂಡು ಬಂದಿರಬೇಕಾದರೆ, ಏನೋ ಯಡ ವಟ್ಟು ಮಾಡಿಕೊಂಡು ಬಂದಿದೆ ಎಂದು ತಾತ್ಸಾರದಿಂದಲೇ ಗುಳಿಗೇ ಬರೆದು ಕೊಟ್ಟರಂತಲ್ಲಾ, ಇದರಿಂದ ಮತ್ತೂ ಬಿ.ಪಿ. ಏರಿಸಿಕೊಂಡ ಎಡೂರಪ್ಪ ಮಲಗಿದ್ದ ಆರೋಗ್ಯ ಸಚಿವನನ್ನು ಎಬ್ಬಿಸಿ ಗಾಢ ನಿದ್ರೆಯಲ್ಲಿದ್ದ ವೈದ್ಯನನ್ನು ಸಸ್ಪೆಂಡ್ ಮಾಡಿಸಿ ನಂತರ ನಿದ್ದೆ ಹೋದರಂತಲ್ಲಾ, ಥೂತ್ತೇರಿ!!



* * * * * * * * * *

ನಮ್ಮ ಹೈಬಿಪಿ ಎಡೂರಪ್ಪನ ಬಗ್ಗೆ ಯೋಚಿಸುತ್ತ ಕುಳಿತಿರಬೇಕಾದರೆ ಫೋನ್ ರಿಂಗಾಯ್ತು. ಮನಸ್ಸಿಲ್ಲದ ಮನಸ್ಸಿನಿಂದ ತೆಗೆದುಕೊಂಡಾಗ,

"ಹಲೋ ಇದು ಲಂಕೇಶ್ ಪತ್ರಿಕೆ ಹೌದಲ್ರಿ ಸರ?"

"ಹೌದು, ತಾವ್ಯಾರು ಸಾರ್?"

"ನಾ ಲಂಕೇಶ್ ಅಭಿಮಾನಿ ಸರ. ಅವರ ಕೂಡ ಅಡ್ಡಾಡಿನಿ."

"ತುಂಬಾ ತಿರುಗಾಡಿದ್ದೀರಾ?"

"ಹೌದರಿ. ಅವ್ರು ಪ್ರಗತಿರಂಗ ಅಂತ ಸಭಾ ಮಾಡಕ್ಕ ಈ ಕಡಿ ಬಂದಾಗ ಒಂದೀಟು ದೂರ ಅವರ ಹಿಂದಾ ಹೋಗಿದ್ನಿ, ಅವರ ಬಗ್ಗೆ ಭಾಳ ತಿಳಕೊಂಡನಿ."

"ಸಂತೋಷ, ಈಗೇನಾಗಬೇಕಾಗಿತ್ತು?"

"ಏನೂ ಆಗಬೇಕಾಗಿಲ್ರಿ. ನಿಮಗ ತಲಿ ಶುದ್ಧಿತಿಲ್ಲೋ ಅಂತ ಕೇಳಾಕ ಫೋನ್ ಮಾಡಿನಿ ಅಷ್ಟ."

"ನಮ್ಮ ತಲೆ ಶುದ್ಧವಾಗೇ ಅದೆ. ಸರಿಯಾಗಿ ಮಾತಾಡು."

"ಇಲ್ರಿ ನಿಮ್ಮ ತಲಿ ಶುದ್ದಿಲ್ಲ ಅಂತ ಗುರತಾಗೇತಿ. ಅದಕ ಬರೋಬ್ಬರಿ ಮಾತಾಡಕತ್ತಿನಿ. ಅಲ್ರಿ ಲಂಕೇಶ್ ಪತ್ರಿಕೆಗೆ ಜುಲೈ ಆರಕ್ಕೆ 27 ವರ್ಷಕ್ಕತಿ. ನಾಲ್ಕು ತಿಂಗಳು ಮೊದಲೇ 27 ವರ್ಷ ಆತು ಅಂತ ಬರದಿರಲ್ಲ, ಯಾಕ ಅಲ್ಲಿಮಟ್ಟ ಇರೂದಿಲ್ಲೇನ ನೀವು?"

"ಈಗ ನಿನ್ನ ತಲೆ ಶುದ್ದಿಲ್ಲ ಅಂತ ಗೊತ್ತಾಯ್ತು ಬುಡು."

"ಇನ್ನ ಒಂದ ತಪ್ಪ ಮಾಡಿರಿ ನೀವೂ."

"ಏನು ಮಾಡಿದ್ದೀವಿ?"

"ಲಂಕೇಶರಿಗೆ 72 ವರ್ಷಾತು ಅಂತ ಬರದಿರಿ. ಅವ್ರಿಗೆ ಬರೊಬ್ಬರಿ 71 ವರ್ಷಾತು ಗುರುತೇನ."

"ನಿನ್ನ ತಲೆ ಸರಿಯಾಗಿಲ್ಲ ಅಂತ ಹೇಳಿದನಲ್ಲ."

"ಯದಕ್ಕ?"

"ನಾವು ಆ ತರ ಬರದಿಲ್ಲ, ನೀನು ಫೋನ್ ಮಾಡಿರದು ಸರಿಯಿಲ್ಲ, ನೀನು ಫೋನ್ ಮಾಡಿರದು ಲಂಕೇಶ್‌ಗೆ. ನೀನೀಗ ಮಾಡಿ ಕೇಳಬೇಕಾದದ್ದು ಲಂಕೇಶ್ ಪತ್ರಿಕೆಗೆ."

"ಸಾರಿ ಸರ."

"ಥೂತ್ತೇರಿ!!!"

-ಯಾತೂ

ಅಂಗಡಿ ತೆಗೆದು ಕುಳಿತಿರುವ ಜೀತೇಂದ್ರ ಗೌರ್ ಎನ್ನುವ ಮಾರ್ವಾಡಿ ಹಲ ವರ್ತಕರನ್ನು ಹಿಡಿದುಕೊಂಡು ಅಡಿಕೆ ಮಾರ್ಕೆಟನ್ನೇ ಹಾಳುಗೆಡುವುತ್ತಾ ಬಂದಿದ್ದಾನೆ.... ಹಲಗಪ್ಪ ಸುಪಾರಿ ಕಂಪನಿಯ ಸೋಮಶೇಖರ್ ಎನ್ನುವವ 5 ಕೋಟಿ ರೂ. ಮೋಸ ಮಾಡಿ, ಚೆಕ್ ಬೌನ್ಸ್ ಪ್ರಕರಣದಲ್ಲಿ ಜೈಲು ಸೇರಿ, ಈಗ ಬೇಲ್ ಮೇಲೆ ಹೊರಬಂದು ಮತ್ತೆ ವಂಚನೆಗೆ ರೆಡಿ ಆಗುತ್ತಿದ್ದಾನೆ. ಎನ್‌ಆರ್‌ಎಚ್‌ಎಸ್ ಟ್ರೇಡರ್ಸ್‌ನ ಓಂಕಾರಪ್ಪನು ಮತ್ತೆ ತನ್ನ ಕರಾಳ ದಂಧೆ ಬಿಡುವುದಿಲ್ಲ, ಅಡಿಕೆಗೆ ಕಳಪೆವಸ್ತು, ಬಣ್ಣಗಳನ್ನು ಬೆರೆಸುವ ಮಿಕ್ಸಿಂಗ್ ದಂಧೆ ಸಹ ಈ ಜಾಲದಲ್ಲಿದೆ. ಮರಿಯಪ್ಪನಂತಹ ಎಷ್ಟೋ ವರ್ತಕರು ತಮ್ಮ ತಮ್ಮ ತೋಟಗಳಲ್ಲೇ ಮಿಕ್ಸಿಂಗ್ ಕಾರ್ಯವನ್ನು ರಾಜಾರೋಷವಾಗಿ ನಡೆಸುತ್ತಿದ್ದಾರೆ. ಎಂ.ಎಸ್. ಟ್ರೇಡರ್ಸ್‌ನ ಎನ್.ಎಂ. ಸುರೇಶ್, ಮಾದೇಶ್ವರ ಬಟಲ್‌ನಟ್ ಏಜನ್ಸಿಯ ವಿನಾಯಕ್‌ಗಳು ಈಗಾಗಲೇ 2-3 ಕೋಟಿ ನಾಮ ಹಾಕಿ ಊರು ಬಿಟ್ಟಿದ್ದಾರೆ.

ವಂಚಕ ವರ್ತಕರು ತಮ್ಮ ದೊಡ್ಡತನ ತೋರಿಸಲು ಖಯಾಲಿಗೆ ಬಿದ್ದು ಸಿಕ್ಕಾಪಟ್ಟೆ ದರ ಏರಿಕೆಗೆ ಕಾರಣವಾಗುತ್ತಾ ಹೋಗುತ್ತಿದ್ದಾರೆ. ಆದರೆ ಇದರಿಂದ ಸಣ್ಣ ಬೆಳೆಗಾರರಿಗೆ ಯಾವ ಪ್ರಯೋಜನವೂ ಇಲ್ಲ. ಮಾರ್ಚ್‌ನಲ್ಲೇ ಬ್ಯಾಂಕ್ ಸಾಲಗಳನ್ನು ತುಂಬಲೆಂದು ಅವರು ಕಳೆದ ತಿಂಗಳೇ ತಮ್ಮ ಬೆಳೆಯನ್ನು ಹಳೆಯ ದರದಲ್ಲಿ ಮಾರಿಯಾಗಿದೆ. ಒಂದಿಷ್ಟು ದೊಡ್ಡ ಬೆಳೆಗಾರರಿಗೆ ಅನುಕೂಲವಾಗಬಹುದಷ್ಟೇ. ಆದರೆ ಇದು ತಾತ್ಕಾಲಿಕ ಏರಿಕೆ, ಮತ್ತೆ ದರ ಕುಸಿತ ಖಂಡಿತ.


ಈ ರೀತಿಯ ಘಟನೆಗಳಿಂದ ಮುಂದೆ ಬೆಳೆಗಾರರಿಗೆ ಅಪಾಯಗಳೇ ಕಾದಿವೆ. ಮುಂದಿನ ದಿನಗಳಲ್ಲಿ ಅಡಿಕೆ ಬೆಳೆ ವಿಫಲವಾದರೆ ಬೆಳೆಗಾರರಿಗೆ ಜನರ, ಸರ್ಕಾರಗಳ ಸಹಾನುಭೂತಿ ಸಹ ಸಿಗುವುದಿಲ್ಲ, ಏಕೆಂದರೆ ಈ ಸಂದರ್ಭ ರೇಟು ನೋಡಿದವರೆಲ್ಲ ಅಡಿಕೆ ಬೆಳೆಗಾರರೆಲ್ಲ 'ಶ್ರೀಮಂತ ರೈತರು' ಎಂದು ಭ್ರಮಿಸಿಬಿಟ್ಟಿದ್ದಾರೆ!

ಕೆಲವೇ ಕೆಲವರ ಶೋಕಿಗಳಿಗೆ, ಕುತಂತ್ರಗಳಿಗೆ ಬಲಿಯಾಗಿ ನಾಶವಾಗುತ್ತಿರುವ ಅಡಿಕೆ ಮಾರ್ಕೆಟನ್ನು ಉಳಿಸಲು ಈ ಸರ್ಕಾರ ಯೋಚಿಸುತ್ತಲೇ ಇಲ್ಲ, ಶಿವಮೊಗ್ಗದ ಬೆಪ್ಪ ಮಂತ್ರಿಗಳು ಕುರ್ಚಿ ಪೂಜೆ ಮಾಡುತ್ತಾ ಎಲೆ-ಅಡಿಕೆ ಮೆಲ್ಲುತ್ತಿದ್ದಾರೆ...!

-ವರದಿಗಾರ

ಅಡಿಕೆ ಟ್ರಾನ್ಸ್‌ಪೋರ್ಟಿಗೆ ಮುತ್ತಪ್ಪ ರೈ

ಈಗ ಶಿವಮೊಗ್ಗ, ಸಾಗರ, ಭೀಮಸಮುದ್ರ ಮುಂತಾದ ಅಡಿಕೆ ಮಾರ್ಕೆಟ್ಟುಗಳಲ್ಲಿ ಮುತ್ತಪ್ಪ ರೈ ಹೆಸರು ನಿತ್ಯ ಓಡಾಡುತ್ತಲೇ ಇದೆ. ಉತ್ತರ ಭಾರತದ ಗುಟ್ಕಾ ಕಂಪನಿಗಳಿಗೆ ಇಲ್ಲಿಂದ ಅಡಿಕೆ ಟ್ರಾನ್ಸ್‌ಪೋರ್ಟ್ ಮಾಡುವ ಬಿಸಿನೆಸ್ ವಿಶಾಲ ವ್ಯಾಪ್ತಿ ಹೊಂದಿದೆ. ಇಲ್ಲಿ ಹರಿದಾಡುವ ಹಣವೂ ಅಷ್ಟೇ ದೊಡ್ಡ ಪ್ರಮಾಣದಲ್ಲಿದೆ. ಇಂಥ ಲಾಭಕರ ಟ್ರಾನ್ಸ್‌ಪೋರ್ಟ್‌ನಲ್ಲಿ ಮುತ್ತಪ್ಪ ರೈಯೂ ಕೈ ಇಟ್ಟಿರುವಂತಿದೆ. MRT (ಮುತ್ತಪ್ಪ ರೈ ಟ್ರಾನ್ಸ್‌ಪೋರ್ಟ್) ಎಂಬ ಸಾರಿಗೆ ಸಂಸ್ಥೆಯ ಲಾರಿಗಳೀಗ ಮಲೆನಾಡಿನಲ್ಲಿ ಓಡಾಡುತ್ತಿವೆ. ಇದು ರೈದೇ ಎಂಬ ಸುದ್ದಿ ಇದೆ. ಶಿವಮೊಗ್ಗ ಅಡಿಕೆ ಮಂಡಿಗಳಿಂದ ಉತ್ತರ ಭಾರತದ ನಗರಗಳಿಗೆ ಅಡಿಕೆ ಸಾಗಾಣಿಕೆ ಮಾಡುವ ವ್ಯವಹಾರವಿದು.



ಹಿಂದೊಮ್ಮೆ ದಶಕಗಳ ಕಾಲ ಭೂಗತಲೋಕದಲ್ಲಿದ್ದು ಹಲವಾರು ಕೇಸುಗಳನ್ನು ಹಾಕಿಸಿಕೊಂಡು ದುಬೈ ಪಾಲಾಗಿದ್ದ ಮುತ್ತಪ್ಪ ರೈ ನಂತರ ಏಕಾಏಕಿ ಬೆಂಗಳೂರು ಪೊಲೀಸರಿಗೆ ಶರಣಾಗಿ ಹಲವು ಕೇಸ್‌ಗಳಿಂದ ಮುಕ್ತವಾಗಿ ಈಗ ಲ್ಯಾಂಡ್ ಬಿಸಿನೆಸ್‌ನಲ್ಲಿದ್ದಾನೆ. ತನ್ನ ಹೆಸರಲ್ಲಿ ಬೇರೆ ಪುಡಿ ಪಾತಕಿಗಳು ಲ್ಯಾಂಡ್ ಡೀಲಿಂಗ್ಸ್ ಮಾಡುತ್ತಾರೆಂದು ಆಕ್ಷೇಪಿಸುತ್ತಿದ್ದ ರೈ ಹೆಸರು ಈಗ ಅಡಿಕೆ ಟ್ರಾನ್ಸ್‌ಪೋರ್ಟ್‌ನಲ್ಲಿ ಓಡಾಡುತ್ತಿದೆ.

ಶಿವಮೊಗ್ಗದಲ್ಲಂತೂ ರೈ ಕುರಿತು ಜನಕ್ಕೆ ಒಂಚೂರು ಕುತೂಹಲ ಶುರುವಾಗಿದೆ. ತೀರಾ ಮೊನ್ನೆ ಶಿವಮೊಗ್ಗದಲ್ಲಿ ಕಾಣಿಸಿಕೊಂಡಿದ್ದ ರೈ ಶಾಲೆಯೊಂದಕ್ಕೆ ಕಂಪ್ಯೂಟರ್ ಕೊಡುಗೆ ನೀಡಿದ್ದಾನೆ. ಸೇಲ್ಸ್ ಟ್ಯಾಕ್ಸ್‌ನವರು ಲಾರಿಯೊಂದನ್ನು ತಡೆದು ನಿಲ್ಲಿಸಿದಾಗ ಲಾರಿಯಲ್ಲಿದ್ದವರು 'ಇದು ಮುತ್ತಪ್ಪ ರೈಗೆ ಸೇರಿದ ಲಾರಿ" ಎಂದು ದಬಾಯಿಸಿದ್ದರೆಂಬ ಸುದ್ದಿಯೂ ಶಿವಮೊಗ್ಗದಲ್ಲಿ ಕೇಳಿ ಬರುತ್ತಿದೆ.

ಜೆಡಿಎಸ್ ಸೀಟು ಮೂರ್ತಿಗೆ: ಬಿಜೆಪಿ ಸೀಟು ಬಿಕರಿಗೆ!

ರಾಜ್ಯಸಭಾ ಚುನಾವಣೆ

ನಾಲ್ಕನೇ ಸೀಟು ಯಾರಿಗೆ? ಇದು ಬರುವ ಮಾರ್ಚ್ 17ರ ಮಧ್ಯಾಹ್ನದ ಹೊತ್ತಿಗೆ ಇತ್ಯರ್ಥವಾಗಲಿರುವ ಕುತೂಹಲಕಾರಿ ಪ್ರಶ್ನೆ....

ಪ್ರತಿಸಾರಿ ಕರ್ನಾಟಕದ ವಿಧಾನ ಸಭೆಯಿಂದ ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆ ಜರುಗಿದಾಗಲೂ ತಲೆಯೆತ್ತುತ್ತ ಬಂದಿರುವ ಇಂತಹ ಪ್ರಶ್ನೆಗೆ ಯಥಾಪ್ರಕಾರ ಖಚಿತ, ಪ್ರಾಮಾಣಿಕ ಉತ್ತರ ನೀಡಲಿಕ್ಕಾಗದೆಯೇ ತಿಣುಕುತ್ತಿವೆ ನಮ್ಮ ಪ್ರಮುಖ ಪಾರ್ಟಿಗಳು!



ರಾಜಶೇಖರಮೂರ್ತಿ

ಉಚ್ಚಾಟಿತ ಜೆಡಿಎಸ್ ಶಾಸಕಾಂಗ ಪಕ್ಷಕ್ಕೆ "ಉಚ್ಚಾಟನಾಧೀಶ್ವರ" ದೇವೇಗೌಡರು ಆರಿಸಿದ ಅಭ್ಯರ್ಥಿಯೇ ಅನಿವಾರ್ಯ ಆಶೀರ್ವಾದವಂತೆ!!

ಹಾಗಾಗಿ ಇನ್ನೂ ಆರು ತಿಂಗಳು ಸದಸ್ಯತ್ವ ಅವಧಿ ಬಾಕಿಯಿರುವಂತೆಯೇ ರಾಜ್ಯಸಭೆಗೂ ಹಾಗೂ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ಕೊಡಿಸಿ

ರವೀಂದ್ರ ರೇಶ್ಮೆ

ಮುಂದಿನ ಮುಖ್ಯಮಂತ್ರಿ ಎಂಬ ಸುಂದರ ಸ್ವಪ್ನದೊಂದಿಗೆ ಜೆಡಿಎಸ್‌ಗೆ ಕರೆತರಲಾದ ಹಿರಿಯ ನಾಯಕ ಎಂ.ರಾಜಶೇಖರಮೂರ್ತಿಯವರಿಗೇ ಇದೀಗ ಪ್ರೋತ್ಸಾಹಕರ ಅರ್ಥಾತ್ ಪರಿಹಾರಾರ್ಥ ಬಹುಮಾನ... ಸಿಎಂ ಆಗದಿದ್ದರೇನಂತೆ ಎಂಪಿಯಾಗಿ ವಾನಪ್ರಸ್ಥಾಶ್ರಮ ಸೇರಿಕೊಳ್ಳಿ ಎಂಬ consolation prize...

ವಯಸ್ಸು, ಸೇವಾಹಿರಿತನ, ರಾಜಕೀಯ ಪ್ರಬುದ್ಧತೆಯ ಜತೆಗೆ ದೀರ್ಘಕಾಲದ ಕಾಂಗ್ರೆಸ್ ದ್ವೇಷದ ಫಲವಾಗಿ ಕುಮಾರಸ್ವಾಮಿಯ ಕ್ರಾಂತಿಗೆ ಕ್ಷಣಾರ್ಧದಲ್ಲೇ ಅನುಮೋದನೆ ನೀಡಿದ ರಾಜಶೇಖರಮೂರ್ತಿಯವರದ್ದು ಜೆಡಿಎಸ್‌ನ ಪ್ರಸ್ತುತ ಸಂದಿಗ್ಧಮಯ ರಾಜಕಾರಣಕ್ಕೆ ಏಕೈಕ ಆಯ್ಕೆ ಎನಿಸಿತ್ತು.

ದಳಪರಿವಾರದ ಹಲವು ಮೂಲ ನಿವಾಸಿ ಲಿಂಗಾಯತ ನಾಯಕಮಣಿಗಳು "ಅವರಿಗೆ ವಯಸ್ಸಾಗಿದೆ... ಆರೋಗ್ಯ ಕೆಡ್ತಾಯಿದೆ ಜತೆಗೆ ನಮ್ಮ ಪಾರ್ಟಿಗೆ ಅವರೇನು ತ್ಯಾಗ ಮಾಡಿದ್ದಾರೇಂತ ಅವರಿಗೇ ಟಿಕೆಟ್ಟು ಕೊಡಬೇಕಿತ್ತು" ಎಂದು ಮೂರ್ತಿಯವರ ಚಾಯ್ಸ್ ಬಗ್ಗೆ ಖಾಸಗಿಯಾಗಿ ಅಪಸ್ವರವೆತ್ತಿದ್ದೂ ನಿಜವೇ.... ಆದರೆ ಈ ಅಪಸ್ವರ ಪೀಡಿತರೂ ಕೂಡ ಸಾಕಷ್ಟು ವಯಸ್ಸಾದವರೂ , ಪಾರ್ಟಿಗೂ, ಸಮಾಜಕ್ಕೂ ತ್ಯಾಗಕ್ಕಿಂತ ಭೋಗದ ಕಾಣಿಕೆಯನ್ನೇ ನೀಡಿದವರಾದ್ದರಿಂದ ಅವರ ಆಕ್ಷೇಪಣೆಗಳೆಲ್ಲ ಅಲ್ಲಲ್ಲೇ ತಣ್ಣಗಾಗಿಬಿಟ್ಟವು.

ಕಾಮ್ರೇಡ್ ಶ್ಯಾಣಪ್ಪನಿಗೆ ಕೇಸರಿ ಟೋಪಿ

ಹಿಂದೆ 1996ರಲ್ಲಿ ಸಮಾಜವಾದಿ ಜೆ.ಎಚ್. ಪಟೇಲರು ಕರ್ನಾಟಕದ ಮುಖ್ಯಮಂತ್ರಿಯಾಗಿ ಮಂತ್ರಿಮಂಡಲ ರಚಿಸಿಕೊಂಡಾಗ ಅಂದಿನ ಪ್ರಧಾನಿ ಗೌಡರ ಕೋಟಾ ಮತ್ತು ಅಂದಿನ ರೆಬೆಲ್‌ಸ್ಟಾರ್ ರಾಮಕೃಷ್ಣ ಹೆಗಡೆಯವರ ಕೋಟಾಗಳನ್ನು ಹೊರತುಪಡಿಸಿ ತಮ್ಮದೇ ಆದ ಪರ್ಸನಲ್ ಕೋಟಾದಲ್ಲಿ ಇಬ್ಬರನ್ನು ಕ್ಯಾಬಿನೆಟ್ ಮಂತ್ರಿ ಮಾಡಿದ್ದರು.

ಈ ಪಟೇಲ್ ಕೋಟಾ ಮಂತ್ರಿಗಳ ಪೈಕಿ ಒಬ್ಬರು ಬಂಟ್ವಾಳದ ಸಜ್ಜನ ಬಿ.ಎ. ಮೊಹಿದ್ದೀನ್ ಹಾಗೂ ಮತ್ತೊಬ್ಬರು ಗುಲ್ಬರ್ಗಾದ ಮಾಜಿ ಕಮ್ಯುನಿಸ್ಟರಾದ ಕೆ.ಬಿ. ಶ್ಯಾಣಪ್ಪ....

ನೇರವಾಗಿ ಅಬ್ಕಾರಿ ಇಲಾಖೆಯನ್ನೇ ಗಿಟ್ಟಿಸಿ ಕೃತಾರ್ಥರಾದ ಶ್ಯಾಣಪ್ಪ ಪಟೇಲರು ಅಧಿಕಾರದಲ್ಲಿರುವಷ್ಟೂ ದಿನ ಅವರ ಜೊತೆ ಡ್ರಿಂಕ್ಸ್ ಪಾರ್ಟಿಗಳನ್ನು ಮಾಡುತ್ತ ಕಾಲಕಳೆದು ತದನಂತರ 1999ರಲ್ಲಿ "ಮುಳುಗುವ ಹಡಗು" ಎಂದು ಖಚಿತವಾಗುತ್ತಿದ್ದಂತೆ ಪಟೇಲರಿಗೆ ಕೈಕೊಟ್ಟು ಚೆಡ್ಡಿ ಪಾರ್ಟಿಗೆ ಗುಳೆ ಹೋದರು.

ಶ್ಯಾಣಪ್ಪನವರ ಶಾಣ್ಯತನವೆಂತಹದ್ದೆಂದು ಇಂದಿಗೂ ನೆನಪಿಸಿಕೊಳ್ಳುವ ಅವರ ಅಂದಿನ ಜನತಾದಳ ಮಿತ್ರರುಗಳು "ಪಟೇಲ್ರ ಹತ್ರ 15 "ವರಹ"ಗಳನ್ನು ಕಲೆಕ್ಟ್ ಮಾಡಿಕೊಂಡ ಮರುದಿನವೇ ಪರಾರಿಯಾಗಿಬಿಟ್ರು ನೋಡ್ರಿ... " ಎಂದು ಇವತ್ತಿಗೂ ಹೊಟ್ಟೆಯುರಿಯಿಂದ ಕರುಬುತ್ತಾರೆ....



ರಾಜೀವ್

ಕರ್ನಾಟಕದ ಬಿಜೆಪಿಯ ಸೀನಿಯರ್‌ಮೋಸ್ಟ್ ದಲಿತ ನಾಯಕ, ಚಿಕ್ಕೋಡಿಯ 4ನೇ ಅವಧಿ ಸಂಸದ, ದಿ. ಹೆಗಡೆಯವರ ದರಬಾರಿನ ಸಾರಾಯಿ ಬಾಟ್ಲಿಂಗ್ ಹಗರಣ ಸಂದರ್ಭದ ಅನುಯಾಯಿ ರಮೇಶ್ ಜಿಗಜಿಣಗಿಯವರ "ವಜನ್ನಿ"ನಿಂದಾಗಿಯೆ ಕಾಮ್ರೇಡ್ ಶ್ಯಾಣಪ್ಪನವರಿಗೆ ರಾಜ್ಯಸಭೆಯ ಎಂಟ್ರಿ ಪಾಸ್ ದಕ್ಕಿರುವುದು ನಿಚ್ಚಳ ಸತ್ಯ.... ಅವರು ಸದ್ಯದ ಭಗ್ನಹೃದಯಿ ಲೀಡರ್ ಅನಂತಕುಮಾರರ ಕೋಟಾ ಎಂಬ ಅಪಾಯದ ಅರಿವಿದ್ದ ಡಿಸಿಎಂ ಯಡಿಯೂರಪ್ಪ ಸಾಹೇಬ್ರು ಕಡೇ ಗಳಿಗೆಯಲ್ಲಿ 'ರಾಜಗುರು' ಜಸ್ಟೀಸ್ ರಾಮಾಜೋಯಿಸ್‌ರ ಹೆಸರನ್ನು ಮುಂದೊಡ್ಡಿದರೂ ದಿಲ್ಲಿ ದರಬಾರಿನಲ್ಲಿ ಅನಂತರಿಗಿದ್ದ ವರ್ಚಸ್ಸಿನಿಂದಾಗಿ ಶ್ಯಾಣಪ್ಪ ಸೀಟು ಅಬಾಧಿತವಾಗಿಬಿಟ್ಟಿತು.

ಕಾಂಗ್ರೆಸ್ ತೊಳಲಾಟ: ಶರೀಫ್ ಯಾ ಖಾನ್?

64 ಎಮ್ಮೆಲ್ಲೆಗಳ ಖಾತ್ರಿ ಬೆಂಬಲವುಳ್ಳ ಈ ಮಾಜಿ ರೂಲಿಂಗ್ ಪಾರ್ಟಿಗೆ ಒಂದೂ ಕಾಲು ಅಥವಾ ಹೆಚ್ಚೆಂದರೆ ಒಂದೂವರೆ ಸೀಟಿನ ಮೇಲೆ ಕಬ್ಜಾ ಮಾಡಬಹುದಾದಷ್ಟು ತಾಕತ್ತು ಉಳಿದುಕೊಂಡಿದೆ.



ಶಾಣಪ್ಪ

ಆದರೆ ಕನಿಷ್ಠ ಒಂದು ಡಜನ್‌ನಷ್ಟಾದರೂ ಸಂಸತ್ತಿನ ಹಿರಿಯರ ಸಭೆಗೆ ಅರ್ಹರಾದ ಘಟಾನುಘಟಿ ವಯೋವೃದ್ಧ ಅಥವಾ ಮಧ್ಯವಯಸ್ಕ ನಾಯಕರುಗಳ ತಾರಾಮಂಡಲವೇ ಇದ್ದರೂ, ಕೇವಲ 45 ಮತಗಳ ಅಗತ್ಯವಿರುವ ಒಂದನೇ ಸೀಟಿಗೆ ತನ್ನ ಅಭ್ಯರ್ಥಿಯನ್ನಾರಿಸಿಲಿಕ್ಕಾಗದೆಯೇ ಇನ್ನು ಪರದಾಡುತ್ತಿದೆ ಈ ಸೋನಿಯಾ ಕಾಂಗ್ರೆಸ್ ಎಂಬ 127 ವರ್ಷ ವಯಸ್ಸಿನ ಪುರಾತನ ಪಾರ್ಟಿ!!

ಕೇವಲ ಮೆರಿಟ್ ಕೋಟ್ಟಾ ಎಂದರೆ ಮಾಜಿ ಕೇಂದ್ರ ಸಚಿವ ಹಾಗೂ ಗ್ರಾಸ್‌ರೂಟ್ಸ್ ನಾಯಕ ಜನಾಬ್ ಜಾಫರ್ ಶರೀಫರಾಗಬೇಕಿತ್ತು... ಮೆರಿಟ್‌ಕಮ್ ಮೈನಾರಿಟಿ ಕೋಟಾ ಕಮ್ ಮಹಿಳಾ ಕೋಟಾ ಎಂದಾದಲ್ಲಿ ಹೈಕಮಾಂಡ್ ಪರಿಚಾರಿಕೆ ಮೇಡಂ ಮಾರ್ಗರೇಟ್ ಆಳ್ವ ಗ್ಯಾರಂಟಿ... ಪೇಮೆಂಟ್ ಕಮ್ ಮ್ಯಾನೇಜ್‌ಮೆಂಟ್ ಕೋಟಾನೆ ಆದಲ್ಲಿ ಹಾಲಿ ರಾಜ್ಯಸಭಾ ಡೆಪ್ಯುಟಿ ಚೇರ್ಮನ್ ಹಾಗೂ ಅಮಾನತ್ ಬ್ಯಾಂಕ್ ಮುಳುಗಡೆ ವೀರ ರೆಹಮಾನ್ ಖಾನ್ ಸಾಹೇಬ್ರಿಗೇ ರಿಟರ್ನ್ ಟಿಕೆಟ್!



ಜಾಫರ್ ಶರೀಫ್

ಇವರ್‍ನ ಬಿಟ್ರೆ ಇನ್ಯಾರು ಎಂಬ ಪ್ರಶ್ನೆ ಹೈಕಮಾಂಡ್ ಸುತ್ತ ಸುಳಿದಾಡುತ್ತಲಿದ್ದಲ್ಲಿ ಅದಕ್ಕೆ ಕಾರಣಕರ್ತರಿನ್ನಾರೂ ಅಲ್ಲ... ಮಹಾರಾಷ್ಟ್ರದ ಘನತೆವೆತ್ತ ಗವರ್ನರ್ ಎಸ್ಸೆಮ್ ಕೃಷ್ಣಾ ಸಾಹೇಬರಿಗೆ ಅರ್ಜೆಂಟಾಗಿ ಆ ರಾಜಭವನದ ಘನತೆ-ಗಿನತೆ ಎಲ್ಲಾ ಬಿಟ್ಟು ಮತ್ತೆ ಸಕ್ರಿಯ ರಾಜಕೀಯಕ್ಕೆ ಮರಳುವ ಅವಸರವಂತೆ. ತಮ್ಮ ಫಾದರ್-ಇನ್-ಲಾ ಕೃಷ್ಣಾರವರ ಟಿಕೆಟ್ ಬುಕಿಂಗ್ ಗೋಸ್ಕರವೆಂದೇ ಅಳಿಯ ಕಾಫಿ ಡೇ ಸಿದ್ಧಾರ್ಥ ವಾರಗಟ್ಟಲೇ ದಿಲ್ಲಿ ಮುಕ್ಕಾಂ ಮುಂದುವರಿಸಿದ್ದಾರಂತೆ... ಹಾಗೆಯೇ ಕೃಷ್ಣರ ಭಕ್ತಾಗ್ರೇಸರ ಡಿಕೆಶಿಯವರೂ ಸಹ ತಮ್ಮ ಭಗವಂತನ ಪರ ರಾಜ್ಯಸಭಾ ಟಿಕೆಟ್‌ಗಾಗಿ ಹೈಕಮಾಂಡ್ ಎದುರು ಹೋರಾಟ(?) ನಡೆಸುತ್ತಿದ್ದಾರೆ.

4ನೇ ಬಿಜೆಪಿ ಸೀಟು ಬಿಪಿಎಲ್ ಬಿಡ್ಡರ್-ಗೆ

ಹಾಲಿ ಕೋ-ಜಾ ಮೈತ್ರಿಕೂಟದ ಅಗ್ರಪಾಲುದಾರ ಬಿಜೆಪಿಗೆ ಇನ್ನುಳಿದ ನಾಲ್ಕನೇ ಸೀಟನ್ನು ಕಬಳಿಸಬೇಕೆಂಬ ಉಮ್ಮಳಿಕೆ...

ತನ್ನ 78 ಎಮ್ಮೆಲ್ಲೆಗಳ ಪೈಕಿ 45 ಮಂದಿಯ ಓಟನಿಂದ ಮೊದಲ ಅಧಿಕೃತ ಅಭ್ಯರ್ಥಿ ಶ್ಯಾಣಪ್ಪನವರನ್ನು ಗೆಲ್ಲಿಸಬಹುದಾದ ಈ ಹಾಫ್ ರೂಲಿಂಗ್ ಪಾರ್ಟಿಗೆ ಬಾಕಿ ಉಳಿಯುವ 33 ಪ್ಲಸ್ ಜೆಡಿಯುನ 5 ಮತಗಳನ್ನು ಸೇರಿಸಿಕೊಂಡರೆ ಇನ್ನು ಕೇವಲ 9 ಓಟುಗಳನ್ನು ಮಾತ್ರ ಖರೀದಿಸಬೇಕಾದ (ಅ)ನೈತಿಕ ಜವಾಬ್ದಾರಿ...

ಆ 9 ಅಮೂಲ್ಯ ಮತಗಳನ್ನು ನೈತಿಕವಾಗಿ ಕ್ರೋಢೀಕರಿಸಬಲ್ಲ (ಖರೀದಿಸಬಲ್ಲ?) ಬಲಿಷ್ಠ ಬಿಡ್ಡರ್‌ನ ಹುಡುಕಾಟದಲ್ಲಿದ್ದ ಬಿಜೆಪಿಗೆ ಕಡೆಗೂ ಅಂತಹ ಅನುರೂಪ ಆಸಾಮಿಯೊಬ್ಬ ದಕ್ಕಿದ್ದಾರಂತೆ...ಆತನೇ ಬಿಪಿಎಲ್ ಕಮ್ಯೂನಿಕೇಶನ್ ಎಂಬ ಕಂಪನಿಯನ್ನು ಕಳೆದ ಜುಲೈನಲ್ಲಷ್ಟೇ ಎಸ್ಸಾರ್-ಹಚಿನ್‌ಸನ್ ಎಂಬ ಮತ್ತೊಂದು ಕಂಪನಿಗೆ 4400 ಕೋಟಿ ರೂಪಾಯಿಗೆ ಮಾರಿಕೊಂಡ ರಾಜೀವ್ ಚಂದ್ರಶೇಖರ ಎಂಬ ಹೊಸ ತಲೆಮಾರಿನ ಪ್ರಳಯಾಂತಕ ಬಿಸಿನೆಸ್ ಮ್ಯಾನ್....

ಕೇರಳ ಮೂಲದ ಸುಪ್ರಸಿದ್ಧ ಬಿಪಿಎಲ್ ಎಲೆಕ್ಟ್ರಾನಿಕ್ಸ್ ಕಂಪನಿ ಸಮುಚ್ಚಯದ ಸಂಸ್ಥಾಪಕ ಟಿ.ಜಿ.ಪಿ. ನಂಬಿಯಾರ್‌ನ ಅಳಿಯನಾದ ಈ ರಾಜೀವ್ ಚಂದ್ರಶೇಖರ್ ತನ್ನ ಮಾವನ ಬುಡಕ್ಕೆಯೇ ನೀರುಬಿಟ್ಟು ತನ್ನದೇ ಆದ ಸ್ವಂತ ಸಾಮ್ರಾಜ್ಯ ನಿರ್ಮಿಸಿಕೊಂಡ ಕಾರ್ಪೊರೇಟ್ ಲೋಕದ ವೀಲಿಂಗ್-ಡೀಲಿಂಗ್ ಕುಳ....

ಮೊದಲು ಬಿಪಿಎಲ್ ಕಮ್ಯೂನಿಕೇಷನ್ಸ್‌ನ ಚೇರ್ಮನ್ ಹಾಗೂ ಸಿಇಓ ಆಗಿದ್ದ ರಾಜೀವ್ ಆ ಕಂಪನಿಯನ್ನು ಬಿರ್ಲಾ ಗ್ರೂಪ್‌ನ ಎಟಿ ಅಂಡ್ ಟಿ ಹಾಗೂ ಟಾಟಾ ಟೆಲಿಕಾಂಗಳ ಜತೆ 2003ರಲ್ಲೇ ಬೆರಕೆ ಮಾಡಿಕೊಂಡು ಬಟಾಟಾಸ್ (Batatas) ಎಂಬ ಹೈಬ್ರಿಡ್ ಕಂಪನಿಯನ್ನು ಸೃಷ್ಟಿಸಿಕೊಂಡ... ತದನಂತರ ಮರುವರ್ಷದಲ್ಲಿಯೇ ಎಸ್ಸಾರ್-ಹಚ್‌ಗೆ ಅದನ್ನ ಮಾರಿ ಇದೀಗ ಒಟ್ಟು 11 ಸಾವಿರ ಕೋಟಿ ರೂಪಾಯಿಗಳ ನಿಧಿ ನಿಕ್ಷೇಪವನ್ನಿಟ್ಟುಕೊಂಡು ರಾಜ್ಯ ಬಿಜೆಪಿಯಿಂದ ರಾಜ್ಯಸಭಾ ಟಿಕೆಟ್‌ಗೆ ಟೆಂಡರ್ ಹಾಕಿದ್ದಾನಂತೆ.

ಕಳೆದ ಬಾರಿ 2004ರಲ್ಲಿ ರಾಜ್ಯಸಭೆಗೆ ಚುನಾವಣೆ ನಡೆದಾಗ ಆಗ ತಾನೆ ಅಧಿಕಾರಕ್ಕೇರಿದ ಹುಮ್ಮಸ್ಸಿನಲ್ಲಿದ್ದ ಜೆಡಿಎಸ್‌ನ ದೇವೇಗೌಡರು ತನ್ನ ಪಾರ್ಟಿಯ ಪಾಲಿಗೆ ದಕ್ಕಿದ ಸೀಟನ್ನು "ಪ್ರಾಮಾಣಿಕವಾಗಿಯೇ" ತಮ್ಮ ಪಾರ್ಟಿಯನ್ನು "ಆರ್ಥಿಕ ಸಂಕಷ್ಟದಿಂದ ಪಾರು ಮಾಡಿದ" ತಮಿಳ್ನಾಡಿನ ರೇಸ್‌ಹಾರ್ಸ್ ಕಿಂಗ್ ಎಂ.ಎ.ಎಂ. ರಾಮಸ್ವಾಮಿಗೆ ಅರ್ಪಿಸಿ ಕೃತಾರ್ಥರಾಗಿದ್ದರು! ಅದಕ್ಕೂ ಪೂರ್ವದಲ್ಲಿ ಅಂದರೆ Y2K ವರ್ಷದಲ್ಲಿ (ಸನ್ 2000ರಲ್ಲಿ) ನಡೆದ ಚುನಾವಣೆಯಲ್ಲಿ ಅಂದಿನ ಜೆಡಿಯು ಪಾರ್ಟಿಯ 21 ಮಂದಿ ಹಾಗೂ ಜೆಡಿಎಸ್‌ನ 4 ಮಂದಿ ಎಮ್ಮೆಲ್ಲೆಗಳ ಸಮೇತ ಒಟ್ಟು 46 ಪ್ರತಿಪಕ್ಷ -ಆಳುವ ಪಕ್ಷ ಹಾಗೂ ಪಕ್ಷೇತರ ಓಟುಗಳನ್ನು ಕಬ್ಜಾ ಮಾಡಿಕೊಂಡ ಕಿಂಗ್‌ಫಿಶರ್-ವಿಜಯಮಲ್ಯ ಕಿಂಗ್ ಆಗಿಬಿಟ್ಟರು!!

ಹೀಗೆ ಪ್ರತಿಸಾರಿಯೂ ಅನಿಶ್ಚಿತ ಬಹುಮತವುಳ್ಳ ಕಡೆಯ ಸೀಟನ್ನು ಅತ್ಯಧಿಕ ಬಂಡವಾಳ ಹೂಡಿಕೆಯ ಸಾಮರ್ಥ್ಯವುಳ್ಳ ಹಣವಂತ ಆಸಾಮಿಗೇ ಧಾರೆಯೆರೆಯುವ ಮೂಲಕ ಕರ್ನಾಟಕದ ಪ್ರತಿಷ್ಠಿತ ರಾಜಕೀಯ ನಾಯಕರೆಲ್ಲ ರಾಜ್ಯಸಭೆಯ ಪ್ರಾತಿನಿಧ್ಯವನ್ನೇ ನಿರರ್ಥಕಗೊಳಿಸುತ್ತ ಬಂದಿದ್ದಾರಲ್ಲವೆ?

ಹೋದ ಸಲ ಇಂತಹ ಜನದ್ರೋಹ, ಕನ್ನಡ ದ್ರೋಹದ ಕೆಲಸ ಜೆಡಿಎಸ್‌ದಾಗಿತ್ತು... ಬಹುಶಃ ಈ ಸಲ ಅದು ಅನಿರೀಕ್ಷಿತವಾಗಿ ಅಧಿಕಾರ ಗಿಟ್ಟಿಸಿಕೊಂಡ ಬಿಜೆಪಿಯ ಕೈಂಕರ್ಯವಾಗಲಿದೆ.

ಅಂದಹಾಗೆ ದೇವೇಗೌಡಾಜೀ ತಮ್ಮ ಇಂದಿನ ವೈರಾಗ್ಯಪರ್ವದಲ್ಲೂ ಬಳ್ಳಾರಿಯ ತೋರಣಗಲ್ಲಿನಲ್ಲಿ ಐರನ್ ಅಂಡ್ ಸ್ಟೀಲ್ ಕಂಪನಿಯ ಮಾಲೀಕ ಅರ್ಜುನ್ ಜಿಂದಾಲ್ ಎಂಬ ಚಂಡೀಗಢ್ ಮೂಲದ ಕುಬೇರನನ್ನೇ ನಿಲ್ಲಿಸಬಾರದೇಕೆಂಬ ಲಹರಿಯನ್ನು ತೇಲಿಬಿಟ್ಟಿದ್ದರು ನಿಜ.. ಆದರೆ ಆಗತ್ಯ ಸಂಖ್ಯಾಬಲದ ಖಾತರಿಯಿಲ್ಲದ್ದರಿಂದ 'ಜಿಂದಾಲ್ ಸಾರೀ' ಎನ್ನಬೇಕಾಗಿ ಬಂತು.

ದೇವೇಗೌಡ ನಾಟಕ ಮಂಡಳಿ

ದೇವೇಗೌಡ-ಕುಮಾರಸ್ವಾಮಿ ಮಂಡಳಿಯ 'ರಾಜ್ಯಸಭಾ ಎಲೆಕ್ಷನ್' ಎಂಬ ಹೊಸ ನಾಟಕ ಈಗ ಚಾಲೂ ಆಗಿದೆ.

"ದೇವೇಗೌಡರು ಯಿಲ್ಲಿಸೋ ಅಭ್ಯರ್ಥಿಗೆ ನಾವು ಓಟು ಹಾಕುವುದಾಗಿ" 40 ಉಚ್ಚಾಟಿತ ಜೆಡಿಎಸ್ ಶಾಸಕರ ಪರವಾಗಿ ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ಪಿತೃನಿಷ್ಠೆ ಪ್ರದರ್ಶಿಸಿದ್ದಾರೆ. ಈ ಬೆಂಬಲವನ್ನು ಪಡೆಯುವ ಮೊದಲು ಮಾನ್ಯ ದೇವೇಗೌಡರು ಕರ್ನಾಟಕದ ಜನತೆಗೆ ಕೆಲವು ಸ್ಪಷ್ಟನೆ ನೀಡಬೇಕಾಗುತ್ತದೆ.

58 ಶಾಸಕರ ಬಲವಿದ್ದ ಜಾತ್ಯತೀತ ಜನತಾದಳ ಈಗ ಮೂರು ಹೋಳಾಗಿದ್ದು ಸಿದ್ದರಾಮಯ್ಯ ಬಣದಲ್ಲಿ 10 ಶಾಸಕರಿದ್ದಾರೆ. ಇವರು ಎಬಿಪಿಜೆಡಿ ಪಾರ್ಟಿ ರಚಿಸಿಕೊಂಡಿದ್ದರೂ ಸಹ ತಾಂತ್ರಿಕವಾಗಿ ಈಗಲೂ ಜೆಡಿಎಸ್‌ನವರೆ. ದೇವೇಗೌಡರೇನಾದರೂ ವಿಪ್ ನೀಡಿದರೆ, ಸಿದ್ದು ಬಣದವರ ಶಾಸಕತ್ವ ಉಳಿಯಬೇಕೆಂದರೆ ಜೆಡಿಎಸ್ ಅಭ್ಯರ್ಥಿಗೇ ಅವರು ಮತ ನೀಡಬೇಕಾಗುತ್ತದೆ. ಒಂದು ವೇಳೆ ವಿಪ್ ನೀಡದಿದ್ದರೆ ಪ್ರಾಣ ಹೋದರೂ ಸಿದ್ದು ಬಣ ಗೌಡರ ಕ್ಯಾಂಡಿಡೇಟಿಗೆ ಮತ ನೀಡುವುದಿಲ್ಲ, ಇದು ಖಚಿತ.



ಇನ್ನು ಜೆಡಿಎಸ್‌ನಲ್ಲಿ ಉಳಿದಿದ್ದ 48 ಶಾಸಕರ ಪೈಕಿ 40 ಜನರನ್ನು ಸೆಕ್ಯುಲರಿಸಂ ಕಾರಣಕ್ಕಾಗಿ ಗೌಡರು ಈಗಾಗಲೇ ಉಚ್ಚಾಟಿಸಿದ್ದಾರೆ. ಈಗ ಅವರ ಜೊತೆ ಇರುವವರು ಕೇವಲ 8 ಶಾಸಕರು ಮಾತ್ರ. ಬುದ್ಧಿ ನೆಟ್ಟಗಿರುವ ಯಾರಾದರೂ ಸರಿ, 46 ಪ್ರಥಮ ಪ್ರಾಶಸ್ತ್ಯದ ಮತ ಬೇಕಿರುವ ರಾಜ್ಯಸಭಾ ಎಲೆಕ್ಷನ್‌ಗೆ ಜುಜುಬಿ 8 ಶಾಸಕರ ಬೆಂಬಲದೊಂದಿಗೆ ಅಭ್ಯರ್ಥಿಯನ್ನು ಆರಿಸಿ ಕಣಕ್ಕಿಳಿಸುತ್ತಾರಾ? ಯಾರ ಬೆಂಬಲ ನಂಬಿಕೊಂಡು ಹಾಗೆ ಮಾಡಬಹುದು? 64 ಶಾಸಕರಿರುವ ಕಾಂಗ್ರೆಸ್‌ನೊಂದಿಗೆ ಗೌಡರು ಮುನಿಸಿಕೊಂಡಿದ್ದಾರೆ! 79 ಶಾಸಕರಿರುವ ಕೋಮುವಾದಿ ಬಿಜೆಪಿಯೊಂದಿಗೆ ಸೆಕ್ಯುಲರ್ ಗೌಡರಿಗೆ ಸೈದ್ಧಾಂತಿಕ ದ್ವೇಷ!! 40 ಶಾಸಕರೊಂದಿಗೆ ಮಗ ಕುಮಾರಸ್ವಾಮಿಯನ್ನೇ ಗೌಡರು ಪಾರ್ಟಿ ಬಿಟ್ಟು ಓಡಿಸಿದ್ದಾರೆ!!

ಇನ್ನು 10 ಶಾಸಕರ ಸಿದ್ದು ಬಣ, 5 ಶಾಸಕರ ಜೆಡಿಯು ಗೌಡರಿಂದ ದೂರವಿದ್ದಾರೆ. ಹಾಗಾದರೆ ಯಾರ ಮತಗಳನ್ನು ನಂಬಿ ಕ್ಯಾಂಡಿಡೇಟ್ ಹಾಕುತ್ತಾರೆ ಈ ದೇವೇಗೌಡರು? ಪರಿಸ್ಥಿತಿ ಹೀಗಿದ್ದಾಗಲೂ ಸೆಕ್ಯುಲರ್‌ವಾದದ ಚಾಂಪಿಯನ್ ದೇವೇಗೌಡರು ಈಗ ಆ ಕೆಲಸ ಮಾಡಲು ಹೊರಟಿದ್ದಾರೆ. ದೇವೇಗೌಡರಲ್ಲಿ ಸತ್ಯ-ಪ್ರಾಮಾಣಿಕತೆಗಳೇನಾದರೂ ಇನ್ನೂ ಉಳಿದಿದ್ದರೆ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಅವರು ಬಿಜೆಪಿ, ಜೆಡಿಯು ಹಾಗೂ ಕುಮಾರಸ್ವಾಮಿ ಗುಂಪಿನ ಶಾಸಕರ ಬೆಂಬಲ ಪಡೆಯಬಾರದಲ್ಲವೆ?

ಅಷ್ಟೇ ಅಲ್ಲ ಒಂದು ವೇಳೆ ಗೌಡರು ಅಭ್ಯರ್ಥಿ ಆರಿಸದೆ ಕುಮಾರಸ್ವಾಮಿ ಗುಂಪಿನಿಂದಲೇ ಯಾರೋ ಒಬ್ಬರು ರಾಜ್ಯಸಭೆಗೆ ಸ್ಪರ್ಧಿಸಿದರೂ ಆ ಅಭ್ಯರ್ಥಿಯ ವಿರುದ್ಧ ಮತ ಹಾಕುವಂತೆ ಗೌಡರು ವಿಪ್ ನೀಡಲೇಬೇಕಲ್ಲವೆ?

ಹಾಗೇ ನೋಡುತ್ತೀರಿ, ಗೌಡರು ಈ ಯಾವ ಪಟ್ಟುಗಳಿಗೂ ಸಿಗದಂತೆ ರಂಗೋಲಿ ಕೆಳಗೆ ತೂರಿಕೊಳ್ಳುತ್ತಾರೆ. ಗೌಡ-ಕುಮಾರಸ್ವಾಮಿ ಇಬ್ಬರೂ ತಮ್ಮ ಇಷ್ಟಾರ್ಥ ಈಡೇರಿಸಿಕೊಳ್ಳುತ್ತಾರೆ. ಈ ದೇವೇಗೌಡ-ಕುಮಾರಸ್ವಾಮಿ ಜಂಟಿ ನಾಟಕ ಮಂಡಳಿಯ ಕರಾಮತ್ತುಗಳು ಹೀಗೇ ಇರುತ್ತವೆ.

ಬೇರೆಯವರು ಸಿಟ್ಟಿಗೆದ್ದರೂ ನೀವು ಸಿಟ್ಟಿಗೇಳಬೇಡಿ-ಶಿಂಟೋ ಧರ್ಮ

ರಿಯಲ್ ಡಾನ್ ದೇವಿ!


ವಜನ್ ತಮಿಳು ರೌಡಿಗಳು. ಇಬ್ಬರು ಮ್ಮೆಳೆಗಳು ಮತ್ತು ಬೆಂಗಳೂರು ಮಹಾನಗರ ಓರ್ವ ಪಕ್ಷಾಪ ಕೌನ್ಸಿಲರ್, ಒಬ್ಬೇ ಊಟಕ್ಕೆ ಕುಂತರೆ ಹೇಗಿರುತ್ತೆ?

ಕೊಲೆ ಕೇಸಿನಿಂದ ಕಾಲಾಪತ್ಥರ್ ಬಚಾವಾಗಿ, ರಾಜೇಂದ್ರನ ಕೊಲೆ ಕೇಸಿನಿಂದ ಸುನೀಲನ ಯಾಗಿ ಮತ್ತು ಯಶವಂತಪುರದ ಆರ್.ಎಂ.ಸಿ. ಪಕ್ಕದ ಮೂರೆಕರೆಯ ಸ್ಲಮ್ಮು ವಾಲೆ ಎಂಬ ದೊಗ್ಗೆ ನಾಯಕನ ಪಾಲಾಯಿತೆಂದರೆ ಲ್ಲರೂ ಸೇರಿದ್ದಕ್ಕೂ ಸಾರ್ಥಕ: ಬೆಂಗಳೂರಿಗೂ


ಥಾದ್ದೊಂದು ದುಷ್ಟಕೂಟದ ಅಧಿನಾಯಕನ ಮಾರ್ಕೆಟ್ ದೇವಿ ಉರ್ಫ್ ಆರ್.ವಿ. ದೇವರಾಜ್. ಆತ ಪಾತಕ ಲೋಕದ ಲೇಟೆಸ್ಟ್ ಧೂಮಕೇತು. ರೌಡಿಗಳ ಖಯಾಲಿ ಆತನಿಗೆ ಹೊಸದೇನಲ್ಲ. ಕಾಂಗ್ರೆಸ್ ಪುಢಾರಿ ಬೇರೆ. ಆತನ ರೌಡಿ ಸಂಗವೇನಿದ್ದರೂ ಓಟಗಷ್ಟೇ ಸೀಮಿತ ಎಂಬುದು ನಿನ್ನೆತನಕದ ನಂಬಿಕೆಯಾಗಿತ್ತು. ಅದೇ ಕಾರಣಕ್ಕಾಗಿ ಕಳೆದ ಚಾಮರಾಜಪೇಟೆ ಉಪಚುನಾವಣೆಯಲ್ಲಿ ಜನ ಸೋಲಿಸಿದ್ದಾರೆ. ಆದರೆ ದೇವಿಗೆ ಮಾತ್ರ ಬುದ್ಧಿ ಬಂದಿಲ್ಲ.




...ೀಲ



...ಪತ್ತರ್




...ಳನಿ



...ೇಂದ್ರ

ಆತನಿಗೀಗ ಬೆಂಗಳೂರಿನ ಡಾನ್ ಆಗುವ ಹುಚ್ಚು. ಅಧಿಕಾರ ವಿಲ್ಲದಿದ್ದರೇನಂತೆ ರೌಡಿಗಳಿದ್ದಾರಲ್ಲ. ಸದ್ಯ ಮಾರ್ಕೆಟ್ ದೇವಿಯ ಸುತ್ತ ಕಂಗೊಳಿಸುತ್ತಿರುವ ಶ್ರೀರಾಂಪುರದ ಚಕ್ರಿ ಮತ್ತು ಕಾಟನ್ ಪೇಟೆ ಪುಷ್ಪ ಎಂಬಿಬ್ಬರು ಪುರಾತನ ರೌಡಿಗಳು ಹೇಳಿಕೇಳಿ ತಮಿಳು ರೌಡಿಗಳ ಪಾಲಿನ ಡಾನ್ ಕಾಲಾಪತ್ಥರ್‌ನ ಆಪ್ತರು. ಇತ್ತೀಚೆಗೆ ಜೆ.ಸಿ. ರಸ್ತೆಯ ದೇವಿ ಅಡ್ಡೆಯಲ್ಲಿ ನಡೆದ ಡೀಲ್ ಒಂದರ ಪ್ರಕಾರ, ಹಾಸ್‌ಮ್ಯಾಟ್ ಆಸ್ಪತ್ರೆಗೆ ನುಗ್ಗಿ ವಿವೇಕ್‌ನಗರದ ರೌಡಿ ಪಳನಿಯನ್ನು ಕೊಂದ ಕೇಸಿನಿಂದ ಕಾಲಾಪತ್ಥರ್‌ನನ್ನು ಬಚಾವು ಮಾಡುವುದಕ್ಕೆಂದು ಚಕ್ರಿ ಮತ್ತು ಪುಷ್ಪ ದೇವಿಯ ...ದು ಲಕ್ಷ ರೂಪಾಯಿಗಳ ವ್ಯವಹಾರ ಕುದು...!

...ಮತ್ತು ಪುಷ್ಪ ಆ ಕಾಲದಿಂದಲೂ ದೇವಿಯ ...ರು. ಕಾಲಾಪತ್ಥರ್ ಗೆಳೆತನ ದೇವಿಗೆ ಹೊಸದೇ ...ಸಿ ಕೊಲೆ ಕೇಸಿನಲ್ಲಿ ವಿವೇಕ್‌ನಗರ ಪೋಲೀಸರು ಈಗಾಗಲೇ ಕಾಲಾಪತ್ಥರ್‌ನನ್ನು ಆರೋಪಿಯನ್ನಾಗಿಸಿದ್ದಾರೆ. ಕಾಲಾಪತ್ಥರ್ ಬಂಧನಕ್ಕಾಗಿ ಪೋಲೀಸ್ ಕಾರ್ಯಾಚರಣೆ ಮುಂದುವರಿದಿದೆ. ಅದಿಷ್ಟೇ ಆಗಿದ್ದರೆ ಕಾಲಾಪತ್ಥರ್ ಚಿಂತಿಸುತ್ತಿರಲಿಲ್ಲ. ಸಲೀಸಾಗಿ ಸರೆಂಡರ್ ಆಗಿ ಜೈಲು ಸೇರಿಕೊಂಡಿರುತ್ತಿದ್ದ. ಆದರೆ ಕಾಲಾಪತ್ಥರ್‌ನನ್ನು ಕಾಡುತ್ತಿರುವುದು ಎಲ್ಲಿ ತನ್ನನ್ನು ಎನ್‌ಕೌಂಟರ್ ಮಾಡಿಬಿಡುತ್ತಾರೋ ಎಂಬ ಭೀತಿ. ಒಂದು ಮೂಲದ ಪ್ರಕಾರ ಬೆಂಗಳೂರಿನ ತಮಿಳು ರೌಡಿಗಳೆಲ್ಲರ ಸದ್ದಡಗಡಬೇಕೆಂದರೆ ಅದಕ್ಕೆ ಕಾಲಾಪತ್ಥರ್‌ನನ್ನು ನಿಕಾಲಿ ಮಾಡುವುದೊಂದೇ ದಾರಿ ಅಂತ ಕೆಲ ಪೋಲೀಸ್ ಅಧಿಕಾರಿಗಳು ನಿರ್ಧರಿಸಿದ್ದಾರಂತೆ.



ವಾಲೆ ಮಂಜ



ಯಶವಂತಪುರದ ಗಜಾನನ ಸ್ಲಂ


ಅದು ಕಾಲಾಪತ್ಥರ್‌ಗೂ ಗೊತ್ತಾಗಿದೆ. ಅದಕ್ಕೆ ತನಗೂ ದೇವಿಗೂ ಆಪ್ತರಾದ ಚಕ್ರಿ ಮತ್ತು ಪುಷ್ಪರನ್ನು ಡೀಲಿಗೆ ಬಿಟ್ಟಿದ್ದಾನೆ. ಸದ್ಯ ಕಾಲಾಪತ್ಥರ್‌ನನ್ನು ಸೇಫಾಗಿ ಸರೆಂಡರ್ ಮಾಡಿಸಲು ದೇವಿ ಐದು ಲಕ್ಷ ಹಿಡಿದುಕೊಂಡೇ ಓಡಾಡುತ್ತಿದ್ದಾರೆ ಎಂಬುದನ್ನು ಪೋಲೀಸ್ ಮೂಲಗಳೇ ಸಮರ್ಥಿಸುತ್ತಿವೆ.

ಇದಿಷ್ಟೇ ಆಗಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ದೇವಿ ಕೈ ಹಾಕಿರುವುದು ಇದಕ್ಕಿಂತಲೂ ಅಪಾಯಕಾರಿಯಾದ ಮತ್ತೊಂದು ಕೆಲಸಕ್ಕೆ. ಅದಕ್ಕೂ ಚಕ್ರಿ ಮತ್ತು ಪುಷ್ಪ ಜೋಡಿಯೇ ಕಾರಣ ಕರ್ತರು ಎಂಬುದು ಮಾತ್ರ ಗಮನಾರ್ಹ. ಅದು ಬೆಕ್ಕಿನ್‌ಕಣ್ ರಾಜೇಂದ್ರನ ಕೊಲೆ ಕೇಸಿನಿಂದ ಕಿಲ್ಲರ್ ಸುನೀಲನನ್ನು ಬಚಾವು ಮಾಡುವ ಡೇಂಜರಸ್ ಡೀಲು!

ಸದ್ಯ ಬೆಕ್ಕಿನ್‌ಕಣ್ ರಾಜೇಂದ್ರನ ಕೊಲೆ ಕೇಸಿನಲ್ಲಿ ಇಡೀ ಸುನೀಲನ ಗ್ಯಾಂಗ್ ಜೈಲಲ್ಲಿದೆ. ಸಿಟಿ ಸೆಷನ್ಸ್ ಕೋರ್ಟ್‌ನ ಫಾಸ್ಟ್ ಟ್ರ್ಯಾಕ್ ಕೋರ್ಟಿನಲ್ಲಿ ಮೊಕದ್ದಮೆಯ ವಿಚಾರಣೆ ಬರದಿಂದ ಸಾಗಿದೆ. ರಾಜೇಂದ್ರನನ್ನು ಚಾಲುಕ್ಯ ಹೋಟೆಲ್ ಆವರಣದಲ್ಲಿ ಅಟ್ಟಾಡಿಸಿ ಕೊಚ್ಚಿ ಹಾಕಿದಾಗ ಆತನ ಜೊತೆಗಿದ್ದವರು ಅರಕಲಗೂಡಿನ ಮಾಜಿ ಶಾಸಕ ವಾಲೆ ಮಂಜು, ಆರ್‌ಪಿಸಿ ಲೇಔಟಿನ ಕೌನ್ಸಿಲರ್ ಜಯರಾಮ್ ಮತ್ತು ಮಾಜಿ ಸೆನೆಟ್ ಸದಸ್ಯ ಬಸವರಾಜು. ಅವರೇ ರಾಜೇಂದ್ರನ ಕೊಲೆಗೆ ಪ್ರತ್ಯಕ್ಷದರ್ಶಿಗಳು.

ವಿಚಿತ್ರವೆಂದರೆ ಇದೇ ಮಾರ್ಚ್ ಏಳಕ್ಕೆ ಕೋರ್ಟಿಗೆ ಬಂದು ಸಾಕ್ಷಿ ಹೇಳಬೇಕಿದ್ದ ವಾಲೆ ಮಂಜು ಉಲ್ಟಾ ಹೊಡೆದರು. ಸುನೀಲನನ್ನು ಆವತ್ತು ತಾನು ನೋಡೇ ಇಲ್ಲ ಎಂದು ಪ್ರಮಾಣ ಮಾಡಿಬಿಟ್ಟರು. ಅದಕ್ಕೂ ಮುನ್ನ ಕೌನ್ಸಿಲರ್ ಜಯರಾಮ್ ತಾನು ರಾಜೇಂದ್ರ ಕೊಲೆಯಾಗಿದ್ದನ್ನು ನೋಡೇ ಇಲ್ಲ ಎಂದಿದ್ದ. ಅಲ್ಲಿಗೆ ಇಡೀ ಬೆಕ್ಕಿನ್‌ಕಣ್ ರಾಜೇಂದ್ರನ ಕೊಲೆ ಕೇಸೇ ಹಳ್ಳ ಹಿಡಿದಿತ್ತು.

ಹಕೀಕತ್ತೇನೆಂದರೆ ಹಾಗೆ ರಾಜೇಂದ್ರನ ಹಂತಕರ ವಿರುದ್ಧ ಸಾಕ್ಷಿ ಹೇಳದಂತೆ ತಾಕೀತು ಮಾಡಿದ್ದು ಮಾರ್ಕೆಟ್ ದೇವಿ! ಅದು ಚಕ್ರಿ ಮತ್ತು ಪುಷ್ಪರ ಒತ್ತಾಸೆಯಷ್ಟೇ ಆಗಿರಲಿಲ್ಲ. ವಾಲೆ ಮಂಜು ಮತ್ತು ದೇವಿ ಇಬ್ಬರೂ ಕೋಟಿಯ ಲ್ಯಾಂಡ್ ಡೀಲ್ ಒಂದಕ್ಕೆ ಕೈಹಾಕಿದ್ದೇ ಕಾರಣವಾಗಿತ್ತು.




ಅದು ಯಶವಂತಪುರದ, ಗಜಾನನ ಸ್ಲಂ ಅನ್ನು ಖಾಲಿ ಮಾಡಿಸುವ ಡೀಲು. ಯಶವಂತಪುರದ ಉಲ್ಲಾಸ್ ಟಾಕೀಸ್ ಎದುರಿನ ಗಜಾನನ ಸ್ಲಂ ಮೂರೂವರೆ ಎಕರೆಯಷ್ಟು ವಿಶಾಲವಾದ ಕೊಳೆಗೇರಿ. ಮೂಲತಃ ಅದು ಬಸವನಗುಡಿಯ ಮಕ್ಬೂಲ್ ಹಸನ್ ಎಂಬಾತನಿಗೆ ಸೇರಿದ್ದು. ಇನ್ನೂರಕ್ಕೂ ಅಧಿಕ ಗುಡಿಸಲುಗಳಿವೆ. ಏನೆಲ್ಲಾ ಸರ್ಕಸ್ ಮಾಡಿಯೂ ಮಕ್ಬೂಲ್ ಹಸನ್‌ನಿಂದ ಸ್ಲಂ ಖಾಲಿ ಮಾಡಿಸಲಾಗಲಿಲ್ಲ. ಅದನ್ನು ಬೆಕ್ಕಿನ್‌ಕಣ್ ರಾಜೇಂದ್ರನಿಗೆ ಒಪ್ಪಿಸಿದ. ಆ ಹೊತ್ತಿಗೆ ವಾಲೇ ಮಂಜು ಅರಕಲಗೂಡಿನ ಶಾಸಕ. ರಾಜೇಂದ್ರ ಮತ್ತು ವಾಲೆ ಮಂಜು ಚೆಡ್ಡಿ ದೋಸ್ತಿಗಳಂತಿದ್ದರು. ರಾಜೇಂದ್ರನೇ ನಿಂತು ಅದನ್ನು ವಾಲೆ ಮಂಜುವಿಗೆ


(ಮುಂದಿನ ಪುಟಕ್ಕೆ)

ಸಾಕಿದ ರೌಡಿಗಳೇ ತಿರುಗಿಬಿದ್ದರು

1992 ರಲ್ಲಿ ಜಯರಾಜ್ ಕೊಲೆ ಕೇಸಿನಿಂದ ಹೊರಬರುತ್ತಿದ್ದಂತೆ ರಾಜೇಂದ್ರ ಕಾಣಿಸಿಕೊಂಡಿದ್ದು ದೇವಿಯ ಅಡ್ಡೆಯಲ್ಲಿ. ಆಗ ದುರ್ಗಾ ಟ್ರಾವಲ್ಸ್ ಮಾಲೀಕನಾಗಿದ್ದ ಉಪಾಧ್ಯಯನಿಗೆ ಪುಷ್ಪ ಮತ್ತು ರಾಜೇಂದ್ರ ಪಾರ್ಟನರ್‌ಗಳಾಗಿ ಸೇರ್ಪಡೆಯಾಗಿದ್ದರು. ದೇವಿಯೇ ಕೈಯಾರೆ ದುರ್ಗಾ ಟ್ರಾವಲ್ಸ್ ಉದ್ಘಾಟಿಸಿದ್ದರು. ಅದೇ ಹೊತ್ತಿಗೆ ಕೆಎಸ್ಸಾರ್ಟಿಸಿಗೆ ಛೇರ್ಮನ್ ಆಗಿದ್ದ ದೇವಿಯ ಛೇಂಬರಿನಲ್ಲಿ ಪುಷ್ಪ-ರಾಜೇಂದ್ರ ಕೂತಿರುತ್ತಿದ್ದರೆ, ದೇವಿ ಆಗ ಸಾರಿಗೆ ಸಂಸ್ಥೆಯ ವಿಜಿಲೆನ್ಸ್ ಮುಖ್ಯಸ್ಥರಾಗಿದ್ದ ಕೋದಂಡರಾಮಯ್ಯನವರನ್ನು ಕರೆಸಿ 'ನಮ್ಮ ಸ್ನೇಹಿತರಿಗೆ ಎಳನೀರು ತರಿಸ್ರೀ' ಎಂದಿದ್ದರು!



ಕದಿರೇಶ್



ಮುಂದೆ ಕೋದಂಡರಾಮಯ್ಯ ಬೆಂಗಳೂರಿನ ಪೋಲೀಸ್ ಕಮೀಷನರ್ ಆದರು. ಪುಷ್ಪ ಬೆಂಗಳೂರನ್ನೇ ಬಿಟ್ಟು, ರಾಜೇಂದ್ರ ಜೈಲು ತೋಕ್ಕ ಕೂತ. ಇಲ್ಲಿವರೆಗೆ ಇಬ್ಬರೂ ಉಳಿಯುತ್ತಿರಲಿಲ್ಲವೇನೊ. ದೇವಿ ಮಾತ್ರ ತನ್ನ ಅನುಕೂಲಕ್ಕೆ ತಕ್ಕಂತೆ ರೌಡಿಗಳನ್ನು ಬೆಳೆಸಿದ. ಬೇಡ ಎನಿಸಿದಾಗ ಕೈಬಿಡುತ್ತಿದ್ದ. ರೌಡಿಗಳಿಗೆ ದೇವಿಯ ಬುದ್ಧಿ ಗೊತ್ತಾಗುವುದು ಎಷ್ಟು ಹೊತ್ತು? ಕಳೆದ ಚುನಾವಣೆಯಲ್ಲಿ ದೇವಿ... [illegible]

ಸಕಲ ರೌಡಿಗಳೆಲ್ಲರಿಗೂ ಗಾಡ್‌ಫಾದರ್?

...ಸ್‌ಮ್ಯಾಟ್ ಆಸ್ಪತ್ರೆಯಲ್ಲಿ ಹತ್ಯೆಯಾಗುತ್ತಿದ್ದಂತೆ ಇದ್ದಬದ್ದ ರೌಡಿಗಳನ್ನೆಲ್ಲ ...ಮಾಡಿ ಎಂದು ಕಮೀಷನರ್ ಅಜಯ್‌ಕುಮಾರ್ ಸಿಂಗ್ ಆದೇಶಿಸಿದ್ದೇನೋ ...ಕ್ಕ ರೌಡಿಗಳನ್ನೆಲ್ಲ ಪೋಲೀಸರು ಹಿಡಿದು ತಂದು ರಿಪೇರಿ ಮಾಡಿದ ನಂತರ ...ಹಾಕುವ ರೌಡಿಗಳ್ಯಾರೂ ಕಾಲಾಪತ್ಥರ್, ಮಣಿಭಾರತಿ, ಚಕ್ರಿ, ಪುಷ್ಪನಂಥ ...

...ರಕ್ಕೂ ಅಧಿಕ ರೌಡಿಗಳನ್ನು ಹಿಡಿದು ತಂದು ರಿಪೇರಿ ಮಾಡಲಾಯಿತೆಂದು ...ನರ್ ಸಿಂಗ್ ಸಾಹೇಬರೇ ಹೇಳಿಕೆ ಕೊಡುತ್ತಾರೆ. ಕೆದಕಿ ನೋಡಿದರೆ ದೊಡ್ಡ ...ರನ್ನೂ ಪೋಲೀಸರು ಮುಟ್ಟಿಲ್ಲ. ಈ ಪೈಕಿ ಅನೇಕ ರೌಡಿಗಳಿಗೆ ಮಾರ್ಕೆಟ್ ...ೇ ಗಾಡ್‌ಫಾದರ್. ಕಲಾಸಿಪಾಳ್ಯದ ಸುತ್ತಮುತ್ತಲ ಆಂಜನಪ್ಪ ಗಾರ್ಡನ್, ...ರ್ಡನ್, ಪೆಂಚನ್ ಮೊಹಲ್ಲಾ, ಕೆ.ಎಸ್. ಗಾರ್ಡನ್, ರಾಮಣ್ಣ ಗಾರ್ಡನ್, ...ನಗರ, ಟಿಪ್ಪು ನಗರ, ಬಂಡಿ ಮೋಡ್ ಮುಂತಾದ ಕೊಂಪೆಗಳಿಂದ ...ಂದ ರೌಡಿಗಳೇನು ಸಾಮಾನ್ಯರಲ್ಲ! ಗಾರ್ಡನ್ ...ೊಲೆಯಾಗುವ ಹೊತ್ತಿಗೆ ದೇವಿ ಸೇವಾದಳದ ... ಮಣಿಯನ್ನು ಕೊಂದ ಕುಟ್ಟಿರಾಜಾ ಮತ್ತು ...ಜ ಬಗಿದು ಕೊಳ್ಳುವ ಹೊತ್ತಿಗೆ ದೇವಿ ...ಪೇಟೆಯ ಶಾಸಕನಾಗಿದ್ದ. ದೇವಿಯ ತಂದೆಗೆ ...ದಿಂದಲೂ ಕಲಾಸಿಪಾಳ್ಯದಲ್ಲಿ ತರಕಾರಿ ...ತ್ತು, ಅದೇ ಮಾರ್ಕೆಟ್ ರೌಡಿಗಳಾದ ಕೋಟೆ ... ಮತ್ತು ಮಾರ್ಕೆಟ್ ರಾಜ ದೇವಿಯ ... ಕಾರ್ಯಕರ್ತರಾಗಿದ್ದರು. ಮುಂದೆ ... ಹೊಸಹಳ್ಳದ ರೌಡಿ ಅಶೋಕ್ ಮತ್ತು ... [illegible] ... ದೇವಿಗೆ ... [illegible] ... ರಾಜೇಂದ್ರ, ... [illegible] ... ಗಾಡ್‌ಫಾದರ್ ಆಗಿದ್ದ.



[illegible]

ದೇವಿ ಆತ ಕೊಲೆಯಾದ ಮರುಕ್ಷಣವೇ ಹಂತಕ ಕದಿರೇಶನ ಬೆನ್ನಿಗೆ ನಿಂತಿದ್ದ.

ಕದಿರೇಶನ ವಿರುದ್ಧ ಸಾಕ್ಷಿ ಹೇಳದಂತೆ ಜೋಪ್ಡಿ ರಾಜೇಂದ್ರನ ಪತ್ನಿಗೆ ಧಮಕಿ ಹಾಕಿಸಿ ದುಡ್ಡು ಕೊಟ್ಟದ್ದೂ ದೇವಿಯೇ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗುತ್ತಿದ್ದಂತೆ ದೇವಿ ಅಕ್ಷರಶಃ ಡಾನ್ ಪಾತ್ರವನ್ನೇ ನಿರ್ವಹಿಸಿದ. ಕ್ರೈಮ್ ಡಿಸಿಪಿಯಾಗಿದ್ದ ರವೀಂದ್ರ ಪ್ರಸಾದ್ ದೇವಿಯ ರಕ್ತ ಸಂಬಂಧಿ. ಕಲಾಸಿಪಾಳ್ಯ ಮಾರ್ಕೆಟ್, ಸೆಂಟ್ರಲ್, ಎನ್.ಟಿ. ಪೇಟೆ, ಚಿಕ್ಕಪೇಟೆ, ಕಾಟನ್ ಪೇಟೆ, ಅಲಸೂರು ಗೇಟ್, ಸಿಲ್ವರ್ ಜ್ಯೂಬಲಿ ಪಾರ್ಕ್‌ನಂಥ ಅಧಿಕ ಇಳುವರಿಯ ಪೋಲೀಸ್ ಠಾಣೆಗಳಿಗೆ ಇನ್ಸ್‌ಪೆಕ್ಟರ್‌ಗಳಾಗಿದ್ದವರೆಲ್ಲ ದೇವಿಯ ಏಜಂಟರೆ.

ಯಾರೆಲ್ಲ ರೌಡಿಗಳು ತನಗೆ ಮಣಿಯುವುದಿಲ್ಲವೋ ಅಂಥವರನ್ನು ಪೋಲೀಸರನ್ನು ಛೂಬಿಟ್ಟೇ ದೇವಿ ಬಗ್ಗಿಸಿದ. ಪಾರ್ವತಿ ಪುರದ ಮಾದೇಶನಂಥವರು ಪೋಲೀಸ್ ಕಾಟಕ್ಕೆ ಹೆದರಿ ದೇವಿಗೆ ಶರಣಾದರೆ ಕಾಟನ್ ಪೇಟೆ ಪುಷ್ಪ, ತಕ್ಕಾಳಿ ಬಾಬು, ರಾಜಶೇಖರ, ಗುಪ್ಪ, ಮುಗ್ಯಾಂಬೋ ಥರದವರು ದೇವಿಯ ಎಡಗೈ ಬಲಗೈನಂತಿದ್ದ ಪೂಣೆ-ಲೋಕಿಗೆ ಶರಣಾದರು. ರೌಡಿ ಪ್ರವೀಣ ದೇವಿಯ ಅಡ್ಡೆಯಲ್ಲೇ ಸ್ಥಾಪಿತನಾಗಿದ್ದ. ಕಾಲಾಪತ್ಥರ್ ಪದೇಪದೇ ವಿಸಿಟ್ ಹಾಕುತ್ತಿದ್ದ. ಆದರೆ ಖಾಯಮ್ಮಾಗಿ ದೇವಿಯ ಜೊತೆಗಿದ್ದವನು ಬೆಕ್ಕಿನ ಕಣ್ ರಾಜೇಂದ್ರನೆ. ದೇವಿಯನ್ನು ಮುಂದಿಟ್ಟು ಕೊಂಡೇ ಕಾರ್ಪೋರೇಷನ್ ಕಾಂಟ್ರ್ಯಾಕ್ಟಿಗೆ ಕೈಯಿಟ್ಟದ್ದ ರಾಜೇಂದ್ರ ಕೊಲೆಯಾಗುವ ಕಡೆ ಗಳಿಗೆಯ ತನಕ ದೇವಿಗೆ ಶಿಷ್ಯನಾಗಿಯೇ ಇದ್ದ. ಈಗ ರಾಜೇಂದ್ರನ ಆಪ್ತರಾದ ಚಕ್ರಿ, ಪುಷ್ಪ ಮತ್ತು ದೇವಿಯೇ ಆತನ ಹಂತಕರ ರಕ್ಷಣೆಗೆ ನಿಂತಿದ್ದಾರೆಂದರೆ ... [illegible]?

ತ್ರೈ ... ಅಹಂಕಾರ ಜೊತೆಗೆ ... ಸಾಹೇಬರ ಡ್ರೈವರ್ ಎಂಬ ರಣ ... ವಿದ್ಯೆಗಳಿಂದ ಕಟ್ಟಿಕೊಂಡವಳನ್ನು ಕಾಡಿ, ... ಇಟ್ಟುಕೊಂಡವಳಿಗಾಗಿ ಬಡಿದಾಡಿ, ಕೊನೆಗೆ ಅವಳಾಡಿದ ಬಲೆಯಲ್ಲಿ ಬಿದ್ದು ಬರ್ಬರವಾಗಿ ಕೊಲೆಯಾಗಿ ಹೋದ ಧೂರ್ತನ ಹೆಸರು ಚಂದ್ರಶೆಟ್ಟಿ

ಅವನ ಹೆಣ ಉರುಳಿ ಬಿದ್ದಿದೆ. ನೋಡಲು ಎಷ್ಟು ಭಯಂಕರವಾಗಿದೆ ಎಂದರೆ ಅವನು ಹೀಗಲ್ಲದೆ ಮತ್ತೇಗೂ ಸಾಯಲು ಸಾಧ್ಯವೇ ಇರಲಿಲ್ಲ! ಕಳೆದ ಎರಡು ವರ್ಷಗಳ ಹಿಂದೆ ಬೀಳ ಬೇಕಾಗಿದ್ದ ಹೆಣ ಈಗ ಬಿದ್ದಿದೆ. ಪೀಡೆ ತೊಲಗಿತು! ಅವನ ಕಾಮತೃಷೆಗೆ ಅವನು ಬಲಿಯಾದ ಎಂದು ಪೊಲೀಸ್ ಇಲಾಖೆಯ ಸಹದ್ಯೋಗಿಗಳೇ ಆಕ್ರೋಶ ವ್ಯಕ್ತಪಡಿಸುತ್ತಾರೆ.



ನಾಗರತ್ನ

ಅದು ಪೊಲೀಸ್ ಕ್ವಾರ್ಟರ್ಸ್

ಕಳೆದ 12 ವರ್ಷಗಳಿಂದ ಹಾಸನಕ್ಕೆ ಬಂದು ಹೋದ ಎಸ್ಪಿಗಳಿಗೆಲ್ಲ ಚಂದ್ರಶೆಟ್ಟಿ ಕಾರು ಚಾಲಕ. ಆತ ಹಾಸನದ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ವಾಸವಿದ್ದ. ಚೆಂದದ ಹೆಂಡತಿ, ಹೆಸರು ರಾಧಾ, ಮುದ್ದಾದ ಆರು ವರ್ಷದ ಮಗಳು. ಸುಖ ಸಂಸಾರವಾಗಿರಬೇಕಿದ್ದ ಚಂದ್ರಶೆಟ್ಟಿಗೆ ಎಸ್ಪಿ ಸಾಹೇಬರ ಕಾರು ಚಾಲಕ ಎಂಬ ಅಹಂಕಾರ ಆತನನ್ನು ಈ ದುರ್ಗತಿಗೆ ತಂದು ನಿಲ್ಲಿಸಿದೆ. ಮಾಡದ ತಪ್ಪಿಗೆ ತಮ್ಮ ಬದುಕು ಕಳೆದುಕೊಳ್ಳಲೇ ಬೇಕಾದ ಅನಿವಾರ್ಯ ಸ್ಥಿತಿ ಚಂದ್ರಶೆಟ್ಟಿ ಹೆಂಡತಿ ರಾಧಾ ಹಾಗೂ ಆಕೆಯ ಮಗಳದ್ದು.

ಅಂಟಿಕೊಂಡ ಸೆರಗು ಕಾಯಿಲೆ

ಯಾವ ಕಾಯಿಲೆ, ಖಯ್ಯಾಲಿ ಬಂದರೂ ತಡೆಯ ಬಹುದು. ಆದರೆ ಹೆಣ್ಣು ಎನ್ನುವ ಹುಚ್ಚು ಕುದುರೆ ತಡೆಯಲು ಹೇಗೆ ಸಾಧ್ಯ? ನಗರ ಟ್ರಾಫಿಕ್ ಠಾಣೆಯಲ್ಲಿ ಕಾನ್ಸ್‌ಟೇಬಲ್ ಆಗಿದ್ದ ಮಂಜೇಗೌಡ ಕೂಡ ಚಂದ್ರಶೆಟ್ಟಿ ಇದ್ದ ಕ್ವಾರ್ಟರ್ಸ್ ಪಕ್ಕದಲ್ಲಿದ್ದ.

ಹಾಗಾಗಿ ಮಂಜೇಗೌಡನ ಮನೆಗೆ ಹೋಗಿ ಬರುತ್ತಿದ್ದ ಶೆಟ್ಟಿ ಸ್ನೇಹಿತನ ಪತ್ನಿ ಮೇಲೆ ತನ್ನ ಕಾಮ ವಿದ್ಯೆಗಳನ್ನು ಬಳಸಿ ತನ್ನ ಬಲೆಗೆ ಬಳಸಿಕೊಳ್ಳುವಲ್ಲಿ ಸಫಲನಾದ.

ಶೆಟ್ಟಿಯ ಅವತಾರ

ಯಾವಾಗ ಮಂಜೇಗೌಡನ ಹೆಂಡತಿ ನಾಗರತ್ನ ಶೆಟ್ಟಿ ಬಲೆಗೆ ಬಿದ್ದಳೋ ಅಂದಿನಿಂದ ತನ್ನ ಹೆಂಡತಿ ರಾಧಾಗೆ ಚಿತ್ರಹಿಂಸೆ ನೀಡತೊಡಗಿದ. ಮಂಜೇಗೌಡ ಡ್ಯೂಟಿಯಲ್ಲಿದ್ದಾಗ, ಶೆಟ್ಟಿ ಮಂಜೇಗೌಡನ ಹೆಂಡತಿಗೆ ಡ್ಯೂಟಿ ಕಲಿಸುತ್ತಿದ್ದ. ಡ್ಯೂಟಿ ಮುಗಿಸಿ ಮನೆಗೆ ಬಂದ ಮಂಜೇಗೌಡನ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ ಶೆಟ್ಟಿ. ಅಂದು ಮಂಜೇಗೌಡನ ಅಂಗಿ ಬಿಚ್ಚಿ ಬಡಿದು ತನ್ನ ಪೌರುಷ ಸಾರಿದ. ತನ್ನ ತಾಕತ್ತು ತೋರಿಸುತ್ತೇನೆ ಎಂದು ಅಬ್ಬರಿಸಿದ. ಮಂಜೇಗೌಡ ಚಂದ್ರಶೆಟ್ಟಿಯ ನಿತ್ಯ ಕಾಟ ತಾಳಲಾರದೆ ಕ್ವಾರ್ಟರ್ಸ್ ಖಾಲಿ ಮಾಡಿ ಉದಯಗಿರಿಯ ಬಡಾವಣೆ ಮನೆಗೆ ಬಂದರೆ ಅಲ್ಲಿಯೂ ಬೆನ್ನು ಹತ್ತಿದ ಬೇತಾಳದಂತೆ ಕಾಡಿದ ಚಂದ್ರಶೆಟ್ಟಿ. ಮಂಜೇಗೌಡ ಡ್ಯೂಟಿಯಲ್ಲಿದ್ದಾಗಲೇ ಒಮ್ಮೆ ಸಾರ್ವಜನಿಕರ ಮುಂದೆ ಊರಿನವರಿಗೆಲ್ಲಾ ನನ್ನ ಮೇಲೆ ಕಂಪ್ಲೇಂಟ್ ಮಾಡುತ್ತೀಯಾ ಎಂದು ಹಿಗ್ಗಾಮುಗ್ಗಾ ಥಳಿಸಿ ತನ್ನ ರೌದ್ರಾವತಾರ ಪ್ರದರ್ಶಿಸಿದ.

ಹಾಸನ

ರಾಜಿಯಲ್ಲಿ ಅಂತ್ಯಗೊಂಡ ಕೇಸು

ಒಂದೆಡೆ ತನ್ನ ಹೆಂಡತಿ ರಾಧಾಗೆ ಚಿತ್ರಹಿಂಸೆ ನೀಡುತ್ತಾ ಮತ್ತೊಂದೆಡೆ ತಾನು ಅನೈತಿಕ ಸಂಬಂಧ ಹೊಂದಿದ್ದ ನಾಗರತ್ನಳ ಗಂಡ ಮಂಜೇಗೌಡನಿಗೆ ಹಿಂಸೆ ಕೊಡುತ್ತಿದ್ದ ಚಂದ್ರಶೆಟ್ಟಿಯ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ಅನುಭವಿಸಿ ಬೇಸತ್ತ ಮಂಜೇಗೌಡ ಅಂತಿಮ ಮರ್ಯಾದೆ ಹರಾಜಾಗುವುದನ್ನು ತಪ್ಪಿಸಲು ಮಂಜೇಗೌಡ ಹೆಂಡತಿಯನ್ನು ಹಾಸನಕ್ಕೆ ಕಳುಹಿಸಿ ಉದಯಗಿರಿ ಬಡಾವಣೆಯಲ್ಲಿ ಇರಿಸಿದ.

ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿತ್ತು ಶೆಟ್ಟಿಗೆ. ಮಂಜೇಗೌಡ ಚೆನ್ನರಾಯಪಟ್ಟದಲ್ಲಿ ಡ್ಯೂಟಿ ಪ್ರಾರಂಭಿಸಿದರೆ ಚಂದ್ರಶೆಟ್ಟಿ ಉದಯಗಿರಿ ಮನೆಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುತ್ತಿದ್ದ. ಇದೆಲ್ಲದರಿಂದ ಇಡೀ ಬಡಾವಣೆಯ ನಾಗರೀಕರು ರೋಸಿ ಹೋಗಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಮಂಜೇಗೌಡ ತನ್ನ ತಾಳ್ಮೆ ಕಳೆದುಕೊಂಡ.

ಚಂದ್ರಶೆಟ್ಟಿಗೆ ಚರಮಗೀತೆ

ತನ್ನ ಮನೆಯಿಂದಲೇ ತನ್ನನ್ನು ಹೊರದಬ್ಬಿ ತನ್ನ ಹೆಂಡತಿಯೊಂದಿಗೆ ಮಲಗುವುದನ್ನು ಅವನಾದರೂ ಹೇಗೆ ಸಹಿಸಿಯಾನು!

ರಾತ್ರಿ ಸಾಮಾನ್ಯವಾಗಿ ಮಂಜೇಗೌಡನ ಮನೆಗೆ ಬರುವ ಚಂದ್ರಶೆಟ್ಟಿಯನ್ನು ಮುಗಿಸಲು ಸಂಚು ಹೆಣೆದಿದ್ದಾನೆ. ಮೊದಲೇ ನಿರ್ಧರಿಸಿದಂತೆ ಮಂಜೇಗೌಡ ಶುಕ್ರವಾರ ರಾತ್ರಿ ಚೆನ್ನರಾಯಪಟ್ಟಣ ಸ್ಟೇಷನ್ ಸೆಂಟ್ರಿಯಾಗಿ ಕೆಲಸ ಮಾಡಿದ್ದಾನೆ. ಅಣ್ಣನ ಕಷ್ಟಗಳಿಗೆ ಇತಿಶ್ರೀ ಹಾಡಲು ಆತನ ತಮ್ಮ ಗಿರೀಶ ಹಾಗೂ ಅವನ ಬಾವ ಮೈದುನ ಸತೀಶ ತಾವೇ ಮುಗಿಸುವುದಾಗಿ ಭರವಸೆ ನೀಡಿ ಮನೆ ಹೊಕ್ಕಿದ್ದಾರೆ.

ಎಂದಿನಂತೆ ಮೊನ್ನೆ ಶುಕ್ರವಾರ ರಾತ್ರಿ ಮಂಜೇಗೌಡನ ಮನೆ ಹೊಕ್ಕ ಚಂದ್ರಶೆಟ್ಟಿ ಕಣ್ಣಿಗೆ ಒಂದು ಕೆಜಿಯಷ್ಟು ಮೆಣಸಿನ ಪುಡಿಯನ್ನು ಎರಚಿದ್ದಾರೆ ಅಷ್ಟೇ! ಮೊದಲೇ ಯೋಜಿಸಿದಂತೆ ಸತೀಶ ಹಾಗೂ ಗಿರೀಶ ಕುರಿ ಕತ್ತರಿಸುವ ಮಚ್ಚುಗಳಿಂದ ಶೆಟ್ಟಿಯ ಕಾಲು ಕೈಗಳು, ತಲೆ, ಕುತ್ತಿಗೆ ಹೀಗೆ ಎಲ್ಲೆಂದರಲ್ಲಿ ಕೊಚ್ಚಿದ್ದಾರೆ. ಕೊಚ್ಚಿದ ರಭಸಕ್ಕೆ ಚಿಪ್ಪು ಹಾರಿ ಬಿದ್ದಿದೆ. ಮೆದುಳು ಅನತಿ ದೂರದಲ್ಲಿ ಬಿದ್ದಿದೆ. ಕಿವಿ ಭಾಗ ತುಂಡಾಗಿ ನೇತಾಡಿದೆ. ಒಂದು ಕಣ್ಣಿನ ಭಾಗ ಅರ್ಧ ತುಂಡಾಗಿ ತಲೆ ಎರಡು ಹೋಳಾಗಿದೆ. ಮುಖದ ಛಾಯೆಯೇ ಗುರುತು ಸಿಗದಂತಾಗಿದೆ. ಮನೆಯ ಹಾಲ್‌ನಲ್ಲಿ ರಕ್ತ ದೋಕುಳಿ ಹರಿದಿದೆ. ಚಂದ್ರಶೆಟ್ಟಿ ಎಂಬ ದೈತ್ಯ ದೇಹ ತನ್ನ ಅಹಂಕಾರ, ವಿಕೃತ ಕಾಮಗಳಿಂದ ಬೇಸತ್ತು, ಮಚ್ಚಿನೇಟಿಗೆ ಮನಸೋತು ಮಾಂಸ ಮುಂಡೆಯಾಗಿದೆ.

ಸರಿ ರಾತ್ರಿ ಸರೆಂಡರ್

ಈ ಘಟನೆ ಆದಾಗ ಸಮಯ ಮೂರು ಗಂಟೆ. ಕೈಯಲ್ಲೊಂದು ಮಚ್ಚು ಹಿಡಿದುಕೊಂಡು ರಕ್ತಸಿಕ್ತವಾದ ಬಟ್ಟೆತೊಟ್ಟು ಬಡಾ... ಠಾಣೆಗೆ ಬಂದ ಮಂಜೇಗೌಡನ ಹೆ... ನಾಗರತ್ನ ತಾನು ಎಸ್ಪಿ ಕಾರ್ ಡ್ರೈ... ಚಂದ್ರಶೆಟ್ಟಿಯನ್ನು ಕೊಲೆ ಮಾ... ಬಂದಿದ್ದೇನೆ ಎಂದು ತನ್ನ ಪಾಪಗ... ಪ್ರಾಯಶ್ಚಿತ ಮಾಡಿ ಕೊಳ್ಳಲು ಕೊನೆ ಪ್ರಯತ್ನ ನಡೆಸಿದ್ದಾಳೆ. ಆದರೆ ... ನೋಡಿದ ಪೊಲೀಸರು ಇದು ... ಕೆಲಸವಲ್ಲ, ನಿಜ ಹೇಳು ಎಂದಾ... ಸತ್ಯ ಹೊರಬಿದ್ದಿದೆ. ಮಂಜೇಗೌಡ ... ಹೆಂಡತಿಯೊಂದಿಗೆ ಜೈಲಿಗಾದ... ಒಟ್ಟಿಗೆ ಹೊರಟಿದ್ದಾನೆ.



ಮಂಜೇಗೌಡ


ಜೂನಿಯರ್ ಎಸ್ಪಿ

ಕಳೆದ 12 ವರ್ಷಗಳಿಂದ ಹಾ... ಬಂದು ಹೋಗಿರುವ ಎಸ್ಪಿ ಸಾ... ಬರುಗಳಿಗೆ ಕಾರು ಚಾಲಕನಾಗಿ ... ಚಂದ್ರಶೆಟ್ಟಿ ಕಳೆದ ಮೂರು ವ... ಗಳಿಂದ ಪಾಂಡುರಂಗ ರಾಣೆ ... ಎಸ್ಪಿಯವರನ್ನು ತನ್ನ ಮೇಲೆ ಯಾ... ಕ್ರಮಕೈಗೊಳ್ಳದಂತೆ ಅಸಹಾ... ಪರಿಸ್ಥಿತಿಗೆ ತಂದು ನಿಲ್ಲಿಸಿ ಜೂನಿ... ಎಸ್ಪಿ ಆಗಿದ್ದ. ಪಿ.ಸಿ.ಗಳಿಗೆ, ಕಾ... ಸ್ಟೇಬಲ್‌ಗಳಿಗೆ, ಅಸಿಸ್ಟೆಂಟ್ ಇನ್ಸ್‌ಪೆಕ್ಟರ್‌ಗಳಿಗೆ, ಕೊ... ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಎ... ವರೇ ನಾಚುವಂತೆ ಗದ... ಧಿಮಾಕು ಹೊಡೆಯು... ಯಾರಿಗೂ ಕ್ಯಾರೆ ಎ... ಉಡಾಫೆಯಿಂದ ವರ್ತಿಸು... ತಿರುಗಿ ಬಿದ್ದವರ ವಿರುದ್ಧ ... ಸಾಹೇಬರುಗಳಿಗೆ ಚಾಡಿ ಹೇಳಿಯೇ ಸೇಡು ತೀ... ಕೊಳ್ಳುತ್ತಿದ್ದ. ಒಟ್ಟಾರೆ ಅವನೊಬ್ಬ ಸತ್ತನೆಂದ ... ಉಸಿರು ಬಿಟ್ಟದ್ದು ಅದೇ ಇಲಾಖೆಯ ಸಹದ್ಯೋಗಿ...

ಕಾಮಕ್ಕೆ ಬಲಿಯಾದ ಎಸ್ಪಿ ಡ್ರೈವರ್

ವಾಗಿ ಹಾಸನದ ಎಸ್ಪಿ ಪಾಂಡುರಂಗ ರಾಣೆಯವರಿಗೆ ತನ್ನ ಅಹವಾಲು ಹೇಳಿಕೊಂಡರೆ, ಪತಿಯ ಹಿಂಸೆ ತಾಳಲಾರದೆ ಚಂದ್ರಶೆಟ್ಟಿ ಹೆಂಡತಿ ರಾಧಾ ಸಹ ದೂರು ನೀಡಿದ್ದಳು.

ಚಂದ್ರಶೆಟ್ಟಿ ಉರುಫ್ ಎಸ್ಪಿ ಕಾರು ಡ್ರೈವರ್ ಮೇಲೆ ಆಲಿಗೇಷನ್ ಬಂದ ತಕ್ಷಣ ಎರಡು ಕುಟುಂಬಗಳನ್ನು ಕರೆಸಿದ ಎಸ್ಪಿ ರಾಣೆ ಸಾಹೇಬರು ಇನ್ನು ಮುಂದೆ ಯಾರೂ ಯಾರ ತಂಟೆಗೆ ಹೋಗದಂತೆ ಮುಚ್ಚಳಿಕೆ ಬರೆಸಿ, ಪ್ಯಾದೆತನ ಪ್ರದರ್ಶಿಸಿದರು.



ಕೊಲೆಯಾದ ಚಂದ್ರಶೆಟ್ಟಿ ಮತ್ತು ಪತ್ನಿ ರಾಧಾ

ಉತ್ತೇಜಿತನಾದ ಶೆಟ್ಟಿ

ಎಸ್ಪಿ ಸಾಹೇಬರ ಉದಾರತೆ ಕಂಡು ಚಂದ್ರಶೆಟ್ಟಿ ತನ್ನ ಹೆಂಡತಿಗೆ ನೀಡುತ್ತಿದ್ದ ಹಿಂಸೆಯನ್ನು ದ್ವಿಗುಣಗೊಳಿಸಿ ಮಂಜೇಗೌಡನ ಮನೆಗೆ ರಾತ್ರಿ ಸಮಯದಲ್ಲಿ ನುಗ್ಗಿ ಮಂಜೇಗೌಡನನ್ನು ಅವನ ಮನೆಯಿಂದಲೇ ಹೊರ ಹಾಕಿ ಮನೆ ಹೊಕ್ಕಲು ಪ್ರಾರಂಭಿಸಿದ.

ಇದರಿಂದ ತೀವ್ರ ಬೇಸರಗೊಂಡ ಮಂಜೇಗೌಡ ಎಸ್ಪಿ ಸಾಹೇಬರಿಗೆ ದುಂಬಾಲು ಬಿದ್ದರೆ ಅವರದ್ದು ಅಸಹಾಯಕತೆ. ನೀನೇ ಟ್ರಾನ್ಸ್‌ಫರ್ ತಗೋ ಎಂದು ಚೆನ್ನರಾಯಪಟ್ಟಣಕ್ಕೆ ಮಂಜೇಗೌಡನನ್ನು ವರ್ಗಾಯಿಸಿ ಕುಟುಂಬ ಸಮೇತ ಶಿಫ್ಟ್ ಮಾಡಿಕೊಳ್ಳಲು ಉಪದೇಶ ನೀಡಿದರು.

ಅವರ ಮಾತನ್ನು ಅಕ್ಷರಶಃ ಪಾಲಿಸಿದ ಮಂಜೇಗೌಡನಿಗೆ ಚಂದ್ರಶೆಟ್ಟಿ ಮಾತ್ರ ಕಾಡುವುದನ್ನು ನಿಲ್ಲಿಸಲಿಲ್ಲ, ಅರ್ಧ ರಾತ್ರಿಯಲ್ಲಿ ಚೆನ್ನರಾಯಪಟ್ಟಣದ ಮಂಜೇಗೌಡನ ಮನೆಗೆ ನುಗ್ಗಿ ಬಡಿದು ಬರುತ್ತಿದ್ದ. ಎಲ್ಲಾ ಕಡೆ ತನ್ನ




ಚಂದ್ರಶೆಟ್ಟಿ ಕೊಲೆಯಾದ ಸ್ಥಳ

ಎಸ್ಪಿ ಪಾಂಡುರಂಗ ರಾಣೆಯವರು ತುಂಬಾ ಒ... ವರು. ಯಾರಿಗೂ ತೊಂದರೆ ಕೊಡದೆ ಇರಬೇ... ವುದು ಅವರ ಆಸೆ! ಹಾಗಾಗಿಯೇ ಜಿಲ್ಲೆಯಲ್ಲಿ ಸಾ... ಯಾವ ಪ್ರಕರಣಗಳೂ ಮುಕ್ತಿ ಪಡೆದಿಲ್ಲ, ... ಒತ್ತಟ್ಟಿಗಿರಲಿ ಆದರೆ ಅವರ ಇಲಾಖೆಯ ಸಣ್ಣ ನೌಕ... ಕೇಳುತ್ತಿರುವ ಪ್ರಶ್ನೆಗೆ ಸಾಹೇಬರು ಉತ್ತರಿಸಲೇಬೇ... ತಮ್ಮ ಬಳಿ ಇದ್ದ ಒಬ್ಬ ಡ್ರೈವರ್‌ನನ್ನು ತಮ್ಮ ಅಧೀ... ಲ್ಲಿಟ್ಟುಕೊಳ್ಳಲಾಗದವರು ಇನ್ನೂ ಈ ಜಿಲ್ಲೆಯನ್ನು ... ಸರಿಪಡಿಸುತ್ತಾರೆ? ಯಾವ ಪ್ರಕರಣ ಬೇಧಿಸುತ್ತಾ... ಸಾಹೇಬರು ಉತ್ತರಿಸುತ್ತಾರೋ ಬಿಡುತ್ತಾರೋ ಮ... ಮಸ್ತಕಾಭಿಷೇಕ ಕಾರ್ಯಕ್ರಮಗಳಿಂದ ಸಂತೃಪ್ತಗೊಂ... ಸಾಹೇಬರು ಮಾತ್ರ ಮೊನ್ನೆ ತೀವ್ರ ನಿರಾಶೆಗೊಂಡ...

-ವರದಿಗಾ...

ಎಸ್ಪಿ ಚೇಲಾ ಪಿಂಪ್ ಆಗಿದ್ದ ಗೊತ್ತ...

ಅವನ ಹೆಸರು ಕೇಶವಮೂರ್ತಿ. ಎಸ್ಪಿ ಸಾಹೇ... ಪರ್ಸನಲ್ ಆಫೀಸ್ ಗಾರ್ಡ್... ಸಾಹೇಬರ ಆಫೀಸ್‌ಗೆ ಹೊ... ಬಂದು ಸೆಲ್ಯೂಟ್ ಕುಕ್ಕಿಯೇ ... ಕಾರಿಗಳನ್ನು ತನ್ನ ಹಿಡಿತದಲ್ಲಿ... ಕೊಂಡಿದ್ದ. ಸಾಹೇಬರು ನಿಮ್ಮ ... ಬೇಸರವಾಗಿ ಮಾತಾಡ್ತಿದ್ರು ... ಗಿಮಿಕ್ಕು ಮಾಡಿ ಐನೂರು ಸಾ... ಕಿತ್ತದ್ದುಂಟು. ಕೇಶವಮೂರ್ತಿ ... ಸಾಹೇಬರ ಬಗಲಲ್ಲಿ ಆ ಕೆ... ಮಾಡಿದರೆ ಅವರ ಹಿಂದೆ ಮ... ನತ್ತು ಸರಬರಾಜು ಮಾಡು... ಖಯ್ಯಾಲಿ ಪ್ರಾರಂಭಿಸಿದ್ದ. ಅದ... ನಗರದ ರಕ್ಷಣಾಪುರಂನಲ್ಲಿ ಒಂದು ಮನೆ ಮಾ... ಅಲ್ಲಿ ವಾರಕ್ಕೊಮ್ಮೆ ತಾಜಾ ಮೂಗುನತ್ತುಗಳನ್ನು... ಅದನ್ನು ಕೇಳಿದವರಿಗೆ ಸರಿಯಾದ ಸಮಯ... ಸರಬರಾಜು ಮಾಡುವ ವ್ಯವಸ್ಥೆ ಪ್ರಾರಂಭಿಸಿದ್ದ. ಆತ... ಹೆಚ್ಚಿನ ಬೇಡಿಕೆಯಿದ್ದದ್ದು ಮಾತ್ರ ಅದೇ ಇಲಾ... ಯಲ್ಲಿ. ಇದನ್ನು ಸಾಹೇಬರಿಗೆ ಹೇಳಲು ಆ... ಸಹಿಸಿಕೊಳ್ಳಲು ಆಗದೆ ಒದ್ದಾಡುತ್ತಿದ್ದ ಸಭ್ಯರ ಗು... ಅದೇ ಎಸ್ಪಿ ಸಾಹೇಬರ ಕಚೇರಿಯಲ್ಲಿಯೇ ಇ... ಅಂತಿಮವಾಗಿ ಪತ್ರಕರ್ತರೋರ್ವರ ಸಹಾಯ ಕೇ... ಗುಂಪು ಆಗ ತಾನೇ ಠಾಣಾಧಿಕಾರಿಯಾಗಿ ಬಂ... ಬಡಾವಣೆಯ ಠಾಣಾ ಸಬ್‌ಇನ್ಸ್‌ಪೆಕ್ಟರ್‌ಗೆ ಅದ್ಯಾ... ವೇಶ್ಯಾ ವಾಟಿಕೆ ನಡೆಸುತ್ತಿದ್ದು ರೇಡ್ ಮಾಡು... ಒತ್ತಡ ಹೇರಿತು. ಅದ್ಯಾರದೆಂದು ಅರಿಯದ ... ಇನ್ಸ್‌ಪೆಕ್ಟರ್ ಮುನಿಯಪ್ಪ ರೇಡು ಬಿದ್ದಾಗ ಗೊತ್ತಾ... ಅದು ಎಸ್ಪಿ ಸಾಹೇಬರ ಸನ್ನಿದಾನದಲ್ಲಿರುವ ಕೇ... ಮೂರ್ತಿಯದ್ದು ಅಂತ. ಕೂಡಲೇ ಸಾಹೇಬರಿಗೆ ... ಗೊತ್ತಾಗಿ, ಕೇಶವಮೂರ್ತಿಯನ್ನು ಹೊರ ಹಾಕಿ...



ಎಸ್ಪಿ ಪಾಂಡುರಂಗ ರಾಣೆ

ಡಾನ್ ದೇವಿ

(ಹಿಂದಿನ ಪುಟದಿಂದ)

ಅಗ್ರಿಮೆಂಟ್ ಮಾಡಿಸಿ ಕೊಟ್ಟ. ತಾನೇ ನಿಂತು ಎರಡೆಕರೆ ಸ್ಲಂ ಅನ್ನು ಖಾಲಿ ಮಾಡಿಸಿದ. ಉಳಿಕೆ ಒಂದೆಕರೆಯ ... ಮಾತ್ರ ಖಾಲಿ ಮಾಡಲು ಒಪ್ಪಲಿಲ್ಲ ಅಥವಾ ಒಪ್ಪುತ್ತಿಲ್ಲ ಎಂದು ರಾಜೇಂದ್ರ ಮಂಜುವನ್ನು ನಂಬಿದ್ದ. ಬಹುಶಃ ಖಾಲಿ ಮಾಡಿಸುವ ನೆಪದಲ್ಲಿ ರಾಜೇಂದ್ರ ... ದುಡ್ಡಿಗಾಗಿ ಡಿಮ್ಯಾಂಡ್ ಇಟ್ಟಿದ್ದ!

ಮಂಜುವಿಗೆ ಅದನ್ನು ಶತಾಯಗತಾಯ ಖಾಲಿ ಮಾಡಿಸಲೇಬೇಕಿತ್ತು, ಅಷ್ಟರ ಮಧ್ಯೆಯೇ ರಾಜೇಂದ್ರನ ಕೊಲೆ ನಡೆದು ಹೋಯಿತು. ಕೊಲೆ ನಡೆದದ್ದು 2004 ರ ನವೆಂಬರ್ ಏಳರಂದು. ಅವತ್ತು ವಾಲೆ ಮಂಜು ಮತ್ತು ಕೌನ್ಸಿಲರ್ ಜಯರಾಮ್ ಜೊತೆ ... ಆನಂತರ ಚಾಲುಕ್ಯ ಹೋಟೆಲಿಗೆ ಬಂದಿದ್ದ. ಕೊಲೆ ಕೇಸಿಗೆ ಮಂಜು ಪ್ರತ್ಯಕ್ಷ ಸಾಕ್ಷಿ ಕೂಡ ಆಗಿದ್ದ. ಈಗ ಉಲ್ಟಾ ಹೊಡೆಯುತ್ತಿದ್ದಾನೆ ಎಂದರೆ ಏನರ್ಥ?

ಒಂದು ಮೂಲದ ಪ್ರಕಾರ ಯಾವತ್ತು ಚಿಕ್ಕನ್‌ಕಣ್ ರಾಜೇಂದ್ರನಿಂದ ಮೊದಲೇ ಮಾತಾಗಿದ್ದ ರೇಟಿಗೆ ಸ್ಲಂ ಖಾಲಿ ಮಾಡಿಸುವುದು ಸಾಧ್ಯವಿಲ್ಲ ಎಂದು ಮಂಜುವಿಗೆ ಮನದಟ್ಟಾಯಿತೋ, ಅದನ್ನು ಬೇರೊಬ್ಬ ರೌಡಿಗೆ ಒಪ್ಪಿಸಿದ್ದಾನೆ. ಅದು ಚಕ್ರಿಯಾ? ಅಥವಾ ಮಾರ್ಕೆಟ್ ದೇವಿಯಾ?


ಈಗ ದೇವಿಯೇ ಮುಂದೆ ನಿಂತು ಗಜಾನನ ಸ್ಲಂ ಅನ್ನು ಖಾಲಿ ಮಾಡಿಸುತ್ತೇನೆಂದು ಒಪ್ಪಿಕೊಂಡಿದ್ದಾನೆ. ಅದಕ್ಕಾತ ಹಾಕಿದ ಷರತ್ತು ಸುನೀಲನ ವಿರುದ್ಧ ಸಾಕ್ಷಿ ಹೇಳಕೂಡದು ಎಂದು!

... ಪ್ರಕಾರ ಚಿಕ್ಕನ್‌ಕಣ್ ರಾಜೇಂದ್ರನ ಕೊಲೆ ಕೇಸಿಗೆ ಮಂಜು ಸಾಕ್ಷಿ ಹೇಳದೇ ಸುನೀಲನನ್ನು ಬಚಾವು ಮಾಡಬೇಕು. ಮತ್ತು ಸುನೀಲ ಬಿಡುಗಡೆಯಾಗಿದ್ದೇ ಗಜಾನನ ಸ್ಲಮ್ಮಿನ ಉಳಿಕೆ ಒಂದೆಕರೆಯನ್ನು ಖಾಲಿ ಮಾಡಿಸಿಕೊಡಬೇಕು!

ಇದು ಮಾರ್ಕೆಟ್ ದೇವಿ ಕುದುರಿಸಿದ ಡೀಲು. ಅಲ್ಲಿಗೆ ಚಿಕ್ಕನ್‌ಕಣ್ ರಾಜೇಂದ್ರನ ಕೊಲೆ ಕೇಸೂ ಖತಂ, ಸುನೀಲನೂ ಬಚಾವು ಮತ್ತು ವಾಲೆ ಮಂಜು ಬಾಯಿಗೆ ಗಜಾನನ ಸ್ಲಮ್ಮು ಗ್ಯಾರಂಟಿ. ಪ್ರಶ್ನೆಯೆಂದರೆ ಬೆಂಗಳೂರಿನ ಅಸಲೀ ಡಾನ್ ಯಾರು? ಮಾರ್ಕೆಟ್ ದೇವಿಗೆ ಅಧಿಕಾರವಿಲ್ಲ, ಪೊಲೀಸರ ಭಯವಿಲ್ಲ, ಆತನ ಲೀಡರ್ ಕೃಷ್ಣ ಕಿವಿ ಹಿಂಡುವ ಸ್ಥಿತಿಯಲ್ಲಂತೂ ಮೊದಲೇ ಇಲ್ಲ, ದೇವಿಯಂಥ ರೌಡಿ ರಾಜಕಾರಣಿಯೊಬ್ಬ ಹೇಗೆ ಬೆಂಗಳೂರಿಗೆ ಕಂಟಕನಾಗುತ್ತಾನೆಂಬುದಕ್ಕೆ ಇದಕ್ಕಿಂತ ಬೇಕೆ?

-ವರದಿಗಾರ

ವಾಯುವ್ಯ ಸಾರಿಗೆ



ಸರ್ಕಾರಕ್ಕೆ ಲಾಸು- ಅಧಿಕಾರಿಗಳಿಗೆ ಕಾಸು

ಐದು ಜಿಲ್ಲೆಗಳ ವ್ಯಾಪ್ತಿಯಲ್ಲಿ ...ರುವ ವಾಯುವ್ಯ ಸಾರಿಗೆ ...ಸ್ಥೆಯಿಂದ ಜನರಿಗೂ ಸುಖಕರ ...ಯಾಣವಿಲ್ಲ, ಸರ್ಕಾರಕ್ಕೂ ಲಾಭ ...ವೇ ಇಲ್ಲ... "ಏ ಇವನವ್ವ ... ಬಸ್ಸುಗಳ ಹಣೆ ಬರಹಾನೇ ...ಟು ಬಿಡು..... ಕೆಂಪ್ ಬಣ್ಣ ...ಮ್ಮ ಅಗ್ರೈತಿ ಅನ್ನೋದ್ ಬಿಟ್ರೆ, ...ಕ್ಕ ಹೊಡೆಯೋ ಆಫಿಸರ್ಸ್ ...ಗಾ ಅದಾರ... " ಎನ್ನುತ್ತಲೇ ...ರಿದ ಬಸ್‌ಗಳಲ್ಲಿ ಜನ ...ಯಾಣಿಸುತ್ತಾರೆ. ಆದರೂ ...ಾಯುವ್ಯ ಸಾರಿಗೆ ಸಂಸ್ಥೆ ಮಾತ್ರ ...ರ್ಸ್‌ನಲ್ಲೇ ಜರ್ನಿ ಮಾಡುತ್ತಲೇ ...ದೆ. ಹಾಗಾದರೆ ತುಂಬ ...ಳುಕುವ ಬಸ್‌ಗಳಲ್ಲಿ ಕಲೆಕ್ಟ್ ...ಗುವ ಹಣವನ್ನು ಕಂಡಕ್ಟರ್, ...ವರ್‌ಗಳೇ ಮನೆಗೊಯ್ಯುವರೇ? ...ಲ್ಲಿನ ಪೊಗದಸ್ತಾಗಿ ಉಬ್ಬರುವ ...ಧಿಕಾರಿಗಳನ್ನೊಮ್ಮೆ ನೋಡಿದರೆ ...ಕು, ಉತ್ತರ ನಿಮ್ಮೆದುರೇ ...ರುತ್ತದೆ. ಈ ಪೊಗದಸ್ತು ...ಂಡಗಳ ಹಿಂದೆ ಇರುವವರು ...ಲ್ಲು ಪಾಲಿಟಿಕ್ಸ್ ಮಾಡುವ ...ೋಕಲ್ ಪುಂಡರು!

ಸೋರುತಿಹುದು ಬಸ್ಸು ಟಾಪು...

ಸರ್ಕಾರದ 'ಜಾಣ' ಅಜ್ಞಾನದಿಂದಲೇ ವಾಯುವ್ಯ ...ರಿಗೆ ಸಂಸ್ಥೆಯ ಆದಾಯ ಸೋರಿಕೆಯಾಗುತ್ತಲೇ ...ದೆ ; ಅಧಿಕಾರಿಗಳ ಕಿಸೆ ತುಂಬಿ ತುಳುಕ್ತಿವೆ, ಅರ್ಧರ್ಧ ...ಜನ್ ಎಟಿಎಂ ಕಾರ್ಡ್‌ಗಳು ಸವೆ ಸವೆದು ...ೋಗುತ್ತಿವೆ! ಈ ವಾಯುವ್ಯ ಸಾರಿಗೆ ಸಂಸ್ಥೆ ಆದಾಯ ... ಕೋಟಿ 50 ಲಕ್ಷ.... ಖರ್ಚು ಎಷ್ಟಪ್ಪಾ ಅಂದ್ರೆ ...ವಲ 2 ಕೋಟಿ 50 ಲಕ್ಷ.... ತುಂಬ ತುಳುಕುವ ...್‌ಗಳಲ್ಲಿನ ಟಿಕೆಟ್ ರೊಕ್ಕ ಎಲ್ಲಿ ಹೋಯ್ತು ಅಂತಾ ...ಾರಿಸಿದರೆ ಕಳ್ಳ ಅಧಿಕಾರಿಗಳ ಕರಾಮತ್ತು ಎದ್ದು ...ುತ್ತದೆ. ವಲಯ ಕಚೇರಿ (ಡಿವಿಜನ್ ಆಫೀಸ್)ಯ ...ರ್ಷಿಕ ಖರ್ಚು ಕೇವಲ 50 ಲಕ್ಷ ರೂ ಮಾತ್ರವಂತೆ! ...ೆಲ್ಲದರ ಮಧ್ಯೆ ಖಾಸಗೀಕರಣದ ದೆವ್ವ ಸುಮ್ಮನಿರುತ್ತಾ? ...ದರಿಂದ ಈ ಸಾರಿಗೆ ...ಸ್ಥೆಗೆ ನಷ್ಟ ಓನ್ಲಿ ಫಿಫ್ಟಿ ...ಕ್ ಎಗೇನ್!!

...ಧಾರವಾಡ, ಗದಗ, ...ವೇರಿ, ...ಗಲಕೋಟೆ, ...ಗಾವಿ ಜಿಲ್ಲೆಗಳ 8 ...ಾಗಗಳು ಸಾಮಾನ್ಯ ...ರ ಪ್ರಯಾಣಕ್ಕೆ ...ಾಯಕವಾಗುವುದರ ...ಲು ಮಾರಕ ...ುತ್ತಿವೆ. ಸುಮಾರು ...800 ಕಾರ್ಮಿಕರನ್ನು ಹೊಂದಿದ ಈ ಸಂಸ್ಥೆಯಲ್ಲಿ ...ಕಾರಿ ಒಡೆತನದ 3600 ಬಸ್, ಗುತ್ತಿಗೆ ಆಧಾರದ ...0 ಬಸ್‌ಗಳಿದ್ದರೂ ಪ್ರಯಾಣಿಕರಿಗೂ ಸುಖವಿಲ್ಲ, ...ರಕ್ಕೂ ಆದಾಯವಿಲ್ಲ... ಚೋರ್‌ಗಳು ಮಾತ್ರ ...ೋರ್ ಜೋರ್!

...ಗುತ್ತಿಗೆ ಬಸ್‌ಗಳಲ್ಲಿ ಸಿಂಹಪಾಲು ಪಡೆದವರು ...ಯ ನಿರ್ದೇಶಕರಾದ ನಾರ್ವೆಕರ್, ಸತೀಶ್ ಮೆಹರ ...... ಇವರೆಂತಹ ದುಷ್ಟರು ಕಮ್ ಗೂಂಡಾಗಳು ...ದು ಗಲ್ಲಿ ಗಲ್ಲಿಗೆ ಗೊತ್ತು, ಸದ್ಯದ ವಿಭಾಗೀಯ ...ಂತ್ರಣಾಧಿಕಾರಿ ಕೆ. ಆದೀಶನ ಆಸೆಬುರುಕುತನಕ್ಕೂ ...-ಅಂತ್ಯಗಳೇ ಇಲ್ಲ... ಆದೀಶ ತನ್ನ ಅಳಿಯನ ...ರಲ್ಲಿ ಹಲವಾರು ಬಸ್ ಬಿಟ್ಟಿದ್ದಾನೆ; "ನನ್ನದೇನೂ ...ಲ್ಲಾ" ಅಂತಾ ರೈಲೂ ಬಿಡುತ್ತಾನೆ. ನಿವೃತ್ತಿ ಹೊಂದಿದ ...ಕಾರಿಗಳೂ ಇಲ್ಲಿ ಗುತ್ತಿಗೆ ಬಸ್ ಬಿಡುತ್ತಾ ಪಾಶ್ ...ಹೋಗಿದ್ದಾರೆ. ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ...ರ್ಸ್ ಯೂನಿಯನ್ನಿನ ಹಿಂದಿನ ಅಧ್ಯಕ್ಷ ಬಣ ...ೂ 'ದಸ್ ಬಸ್‌ಗಳ' (ಹತ್ತು ಬಸ್ಸು) ಬಾಸ್ ...ಹೋಗಿದ್ದಾನೆ!

ಅಡ್ನಾಡಿ ಅಧಿಕಾರಿಗಳು, ಪಾಪಿ ಪುಢಾರಿಗಳು

...28 ಸಾವಿರದಷ್ಟು ಕಾರ್ಮಿಕರು ತಮ್ಮ ತಮ್ಮ ...ನ್ನು ಕಾಷ್ಟ ದೂಡುತ್ತಾ ಹೋಗುತ್ತಿದ್ದಾರೆ. ಆದರೆ ...ರ್‌ಗಳಾಗಿಬಿಟ್ಟಿರುವ ಸಂಸ್ಥೆಯ ಅಧಿಕಾರಿಗಳು, ...ಕಲ್ ಪುಢಾರಿಗಳು ಸಂಸ್ಥೆಯನ್ನು ಮುಕ್ಕಿ ಮುಕ್ಕಿ ...ತ್ತಿವೆ. ಇದಕ್ಕೊಂದು ಸಣ್ಣ ಉದಾಹರಣೆ ನೋಡಿ...

ಹುಬ್ಬಳ್ಳಿ ಡಿಪೋ 2ರಲ್ಲಿ 120 ಡ್ರೈವರ್; 120 ಕಂಡಕ್ಟರ್‌ಗಳಿದ್ದಾರೆ. ಇವರ ಮೇಲೆ ಒಬ್ಬ ಡಿಪೋ ಮ್ಯಾನೇಜರ್, ಒಬ್ಬ ಎ.ಡಬ್ಲ್ಯೂ.ಎಸ್, ಒಬ್ಬ ಎ.ಟಿ.ಎಸ್., ಇಬ್ಬರು ಕಂಟ್ರೋಲರ್, ಒಬ್ಬ ಅಸಿಸ್ಟೆಂಟ್ ಟ್ರಾಫಿಕ್ ಇನ್ಸ್‌ಪೆಕ್ಟರ್, ಒಬ್ಬ ಹೆಡ್ ಮೆಕ್ಯಾನಿಕ್‌ಗಳಿದ್ದಾರೆ. ಈ ಪುಣ್ಯಾತ್ಮರ ಸಂಬಳವೇ ಲಕ್ಷ ರೂ. ದಾಟುತ್ತದೆ. ಸಂಸ್ಥೆಯ ಅಧಿಕಾರಿಗಳಿಗಾಗಿ ಇರುವ ವಾಹನಗಳೆಷ್ಟು? ಬಸ್ ಏಕ್ ಸೋ...! (100 ವಾಹನಗಳು ಮಾತ್ರ!). ಸಂಸ್ಥೆಯ ಡ್ರೈವರ್‌ಗಳೇ ಈ ಅಧಿಕಾರಿಗಳ ವಾಹನಗಳಿಗೂ ಡ್ರೈವರ್‌ಗಳೇ! ತಮ್ಮ ವಾಹನಗಳ ಡ್ರೈವರ್‌ಗಳ ಸಂಬಳಕ್ಕೆಂದೇ 4 ಲಕ್ಷ ರೂ ಖರ್ಚಾಯ್ತು ಎಂದು ಮಂಥ್ಲಿ



ಸತೀಶ್ ಮೆಹರವಾಡೆ | RTO ಕರೀಮಬೇಗ | ನಾರಾಯಣ ನಡುಮನಿ | ಕೆ. ಆದೀಶ | ಇಸೂಫ ಸವಣೂರ

ಬಿಲ್ ಹೆಕ್ಕುತ್ತಾರೆ ಈ ಅಡ್ನಾಡಿ ಅಧಿಕಾರಿಗಳು.

ವಿಭಾಗೀಯ ನಿಯಂತ್ರಣಾಧಿಕಾರಿ ಆದೀಶ್ ಸಾಹೇಬ ಎಸ್.ಎಸ್.ಎಲ್.ಸಿ. ಪಾಸಾದ ಡ್ರೈವರ್‌ಗಳಿಗೆ ಕಂಡಕ್ಟರ್ ಲೈಸೆನ್ಸು ಕೊಡಿಸಿ 'ಪ್ರಮೋಷನ್' ಮಾಡಿಬಿಟ್ಟಿದ್ದಾನೆ! ಕಾರ್ಮಿಕರ ನೋವುಗಳಿಗೆ ಸ್ಪಂದಿಸಬೇಕಾದ ಕೆಂಬಾವುಟದ ನಾಯಕ ಎಂ.ಜಿ. ದೊಡ್ಡಗೌಡನಿಗೆ ಇಸ್ಪೀಟು ಆಡಲು ಟೈಮೇ ಸಾಲುತ್ತಿಲ್ಲ; ಇನ್ನೊಬ್ಬ ಲೀಡರು ಕವಳಿಕಾಯಿ ಮಂಗಳೂರಲ್ಲಿ ಕೆಲಸದ ಹೆಸರಲ್ಲಿ ಸಂಬಳ ಪಡೆಯುತ್ತಾ, ಹುಬ್ಬಳ್ಳಿಯಲ್ಲಿ ತನ್ನ ಸಖಿಯರೊಂದಿಗೆ ಸಲ್ಲಾಪದಲ್ಲಿ ಮುಳುಗುತ್ತಲೇ ತನ್ನದೇ ಟೆಂಪೋ ದಂಧೆ ನಡೆಸುತ್ತಾನೆ. ಅದಕ್ಕೇ ಮೊನ್ನೆ ನಡೆದ ಸಹಕಾರಿ ಸಂಘ (ಸೊಸೈಟಿ) ಚುನಾವಣೆಯಲ್ಲಿ ತಕ್ಕಡಿ ಗುರುತಿನ ನಾಯಕರ ಮುಖಕ್ಕೆ ಕಾರ್ಮಿಕರು ಸರಿಯಾಗಿ ಗುದ್ದಿ ಮೂಲೆಗೆ ದಬ್ಬಿದ್ದಾರೆ.

ಹಲವು ತಿಂಗಳ ಹಿಂದೆ ಸಂಸ್ಥೆಯ ಗದಗ ಕಾರ್ಯಾಗಾರ (ವರ್ಕ್‌ಶಾಪ್)ದಲ್ಲಿ ನಡೆದ ಕಳುವಿನ ಪ್ರಕರಣದಲ್ಲಿ ಭಾಗಿಯಾಗಿದ್ದ ಉಪ ಮುಖ್ಯ ಭದ್ರತಾ ಅಧಿಕಾರಿ ಎಸ್.ಕೆ. ಬೆಳ್ಳಟ್ಟಿ, ಸಹಾಯಕ ಭದ್ರತಾ ಅಧಿಕಾರಿ ಮೇಟಿ ಸೇರಿದಂತೆ ಏಳು ಎಡವಟ್ಟು ನನ್ ಮಕ್ಳನ್ನು ಸಸ್ಪೆಂಡ್ ಮಾಡಲಾಗಿತ್ತು, ವರ್ಕ್‌ಶಾಪ್‌ಗಳಲ್ಲಿನ ಅಲ್ಯುಮಿನಿಯಂ ಶೀಟ್‌ಗಳನ್ನೂ ಕದಿಯುವ ಚಿಲ್ರೆ ಚೋರ್‌ಗಳು ಹುಬ್ಬಳ್ಳಿ ವರ್ಕ್‌ಶಾಪ್‌ನಲ್ಲೂ ಇದ್ದಾರೆ.

ಇಲ್ಲಿ 31.10.2005ರಂದು 10'X3' ಅಳತೆಯ 20 ಅಲ್ಯುಮಿನಿಯಂ ಶೀಟ್‌ಗಳು ಕಳುವಾಗಿದ್ದರ ಬಗ್ಗೆ 'ಪತ್ರಿಕೆ' ವಿಚಾರಿಸಿದಾಗ "ಆಂತರಿಕ ತನಿಖೆ ನಡೆಸು... [illegible]

ಕಳುವಿನಲ್ಲಿ ನೇರವಾಗಿ ಭಾಗಿಯಾಗಿರುವ ಉಪ ಮುಖ್ಯ ಭದ್ರತಾ ಅಧಿಕಾರಿ ಚೂರಿಯನ್ನು ಇನ್ನೂ ಸಸ್ಪೆಂಡ್ ಮಾಡಿಲ್ಲ. ಸಂಸ್ಥೆಯ ಬೆನ್ನಿಗೇ ಚೂರಿ ಹಾಕುವ ಇಂತಹ ಹಲವಾರು 'ಚೂರಿಗಳು' ಕಾರ್ಯಾಗಾರದಲ್ಲಿವೆ. ವರ್ಕ್‌ಶಾಪ್‌ನ ಮುಖ್ಯ ಅಧಿಕಾರಿ ಟಿ.ಜೆ. ಕೆಂಪ ನಂಜಯ್ಯನೂ ಒಂದಿಷ್ಟು ನೆಂಜಿಕೊಂಡಿರುವ ಗುಮಾನಿಗಳಿವೆ. ಪ್ರತಿ ಎರಡು ತಿಂಗಳಿಗೊಮ್ಮೆ ಬಹಿರಂಗ ಹರಾಜಿನ ಮೂಲಕ ಸುಮಾರು ಒಂದು ಕೋಟಿ ರೂಪಾಯಿ ಮೌಲ್ಯದ ಸ್ಕ್ರ್ಯಾಪ್ ಹೊರಹೋಗುತ್ತಿದೆ. ಈ ಕಂತ್ರಿ ಹರಾಜಿನಲ್ಲಿ ಟಿ.ಜೆ. ಕೆಂಪನಂಜಯ್ಯ ಚೂರಿಗಳಿಗೂ ಒಂದಿಷ್ಟು ಸಗಣಿ ಸಂದಾಯವಾಗುತ್ತಲೇ ಇರುತ್ತದೆ. ಮೊನ್ನೆ ಅಂಜುಮನ್ ಎಲೆಕ್ಷನ್ನಿನಲ್ಲಿ ಹೊನ್ನಳ್ಳಿ ವಿರುದ್ಧ ಗುಂಪಿನಲ್ಲಿದ್ದ ಈಸೂಫ್ ಸವಣೂರು (ಮೊದಲೆಲ್ಲ ಹೊನ್ನಾಳಿ ಮಿತ್ರ) ಎಂಬ ಸ್ಕ್ರ್ಯಾಪ್ ವ್ಯಾಪಾರಿಗೆ ಹರಾಜಿನಲ್ಲಿ ಸಿಂಹಪಾಲು ಸಿಗುತ್ತಲೇ ಇರುತ್ತದೆ. ಆದಕ್ಕೇ ಹೊನ್ನಳ್ಳಿಯ ಬಾಲಗಳಾದ ಸಂಸ್ಥೆಯ ನಿರ್ದೇಶಕರಾದ ನಾರ್ವೆಕರ್, ಸತೀಶ್ ಮೆಹರವಾಡೆಗಳಿಗೆ ಈ ಈಸೂಫ್ ಕ್ಲೋಜೋ ಕ್ಲೋಜು!

ವರ್ಕ್‌ಶಾಪ್ ಅವ್ಯವಹಾರಗಳ ಕುರಿತು ತನಿಖೆಯಾದರೆ ಈಸೂಫ್ ಸವಣೂರು, ಕೆಂಪ ನಂಜಯ್ಯ ಚೂರಿ, ನಾರ್ವೆಕರ್, ಸತೀಶ್ ಮೆಹರವಾಡೆಗಳೆಲ್ಲ ಜೈಲು ಸೇರಿ ಸ್ಕ್ರ್ಯಾಪ್ ಬಾಡಿಗಳಾಗಿ ಹೋಗಲಿದ್ದಾರೆ. ಸಾರಿಗೆ ಮಂತ್ರಿಯಾಗಿ 'ಚೆಲುವ' ಎಂಬ ದರೋಡೆಗಾರನೇ ಇರುವುದರಿಂದ ವಾಯುವ್ಯ ಸಾರಿಗೆಯ ಕಳ್ಳಕಾಕರಿಗೆ ಯಾವ ಭಯವೂ ಇಲ್ಲ.... ಕಳುವಾದ ಅಲ್ಯುಮಿನಿಯಂ ಶೀಟ್‌ಗಳನ್ನು 6 ತಿಂಗಳಿಂದ ಹುಡುಕುತ್ತಲೇ ಇದ್ದಾನೆ ಎಂ.ಡಿ.ಇ. ರಾಧಾಕೃಷ್ಣ ಎಂಬ ಚೋರಗುರು!

-ವರದಿಗಾರ

ಡ್ರೈವರ್, ಕಂಡಕ್ಟರ್‌ಗಳ ಬೆವರು, ಬವಣೆ

ಬಸ್ ತಯಾರಿಸಿದ ಕಂಪನಿಯೇ ಪ್ರತಿ ಲೀಟರ್ ಡಿಸೇಲ್‌ಗೆ 4.70 ಕಿ.ಮೀ. ದೂರ ಕ್ರಮಿಸುತ್ತದೆ ಅಂಥ ಹೇಳಿದರೆ ಪ್ರತಿ ಲೀಟರ್ ಡೀಸೆಲ್‌ಗೆ 6.00 ಕಿ.ಮೀ. ಓಡಿಸಿ ಎಂದು ಸಂಸ್ಥೆ ಆದೇಶಿಸುತ್ತೆ, ಇಲ್ಲಾ ನಮ್ಮ ಕೈಯಲ್ಲಿ ಆಗುವುದಿಲ್ಲ ಪ್ರತಿ ಲೀಟರ್‌ಗೆ 5 ಕೀ.ಮಿ. ಕೊಡುತ್ತೇವೆ ಅನ್ನುತ್ತಾರೆ ಡ್ರೈವರುಗಳು. ಹಾಗಾದರೆ ನಿಮ್ಮ ಪಗಾರದಲ್ಲಿ ಹೆಚ್ಚುವರಿ ಡೀಸೆಲ್ ಬಳಸಿದ್ದಕ್ಕೆ ಕಡಿತಗೊಳಿಸುತ್ತೇವೆ ಅನ್ನುತ್ತೆ ಸಂಸ್ಥೆ. ಈ ಹಿಂದೆ ಕೆ.ಎಂ.ಪಿ.ಎಲ್. ಅವಾರ್ಡ್ ಅಂಥ ಆಯಿಲ್ ಕಾರ್ಪೊರೇಷನ್‌ದವರು ಡೀಸೆಲ್ ಮಿತವ್ಯಯಗೊಳಿಸಿದ ಡ್ರೈವರುಗಳಿಗೆ ಪ್ರತಿ ತಿಂಗಳು ರೂ. 50 ರಿಂದ 100 ರೂ. ಕೊಡುತ್ತಿದ್ದರು. ಮೂರು ವರ್ಷಗಳಿಂದ ಅದು ಬಂದಾಗಿದೆ. ಬದಲಾಗಿ ಹೆಚ್ಚು ಡಿಸೇಲ್ ಬಳಸಿದ್ದೀರಿ ಅಂತ ವೇತನದಲ್ಲಿ ಕಡಿತಗೊಳಿಸುತ್ತಿದ್ದಾರೆ ಎನ್ನುತ್ತಾರೆ ಡ್ರೈವರ್‌ಗಳು. ವ್ಯವಸ್ಥೆ ತಿರುಗು ಮುರುಗಾಗಿದೆ. ಒತ್ತಾಯದ ಡ್ಯೂಟಿ ಬೇರೆ. ಓವರ್‌ಟೈಂ ಕೆಲಸಕ್ಕೆ ಭತ್ಯೆ ಇಲ್ಲಾ, ಅದಕ್ಕಾಗಿ ವಿಶ್ರಾಂತಿ-ರಜೆ.

ಮೋಟಾರ್ ವಾಹನ ಕಾಯ್ದೆ ಪ್ರಕಾರ ಶಹರದಲ್ಲಿ ಪ್ರತಿ ಗಂಟೆಗೆ 20 ಕಿ.ಮೀ. ಓಡಿಸಬೇಕು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಇಲ್ಲಿಯ ಅಧಿಕಾರಿಗಳು ವೇಗದ ಮಿತಿಯನ್ನು ನಿಗದಿಗೊಳಿಸಿದ್ದಾರೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಮಧ್ಯದಲ್ಲಿ ಸಂಚರಿಸುವ ವೇಗದೂತ ಬಸ್‌ಗಳು 30 ನಿಮಿಷಕ್ಕೆ ತಲುಪಬೇಕು, ಸಾಮಾನ್ಯ ಬಸ್‌ಗಳು 45 ನಿಮಿಷದಲ್ಲಿ ತಲುಪಬೇಕು. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಮಧ್ಯದ ದೂರವೇ 25 ಕಿ.ಮೀ.

ಇನ್ನೂ ಮಹಾನಗರ ಮಿತಿಯಲ್ಲಿ 6 ಕಿ.ಮೀ.ಗೆ 25 ನಿಮಿಷ, 12 ಕಿ.ಮೀ. 35 ನಿಮಿಷ, 9 ಕಿ.ಮೀ. 30 ನಿಮಿಷ ನಿಗದಿಗೊಳಿಸಿದ್ದಾರೆ. ಇದು ಅಸಾಧ್ಯ ಎಂಬುದು ಒಂದೆಡೆಯಾದರೆ ಇಂತಹ ಅವೈಜ್ಞಾನಿಕ ಸಂಚಾರಿ ವೇಳೆ ನಿಗದಿಗೊಳಿಸುವುದು ಅಪಘಾತಕ್ಕೆ ಆಹ್ವಾನ ನೀಡಿದಂತಾಗುತ್ತದೆ. ಇವರು ರೂಪಿಸಿದ ಇಂತಹ ಕಾನೂನು ಉಲ್ಲಂಘನೆಗೆ ವೇತನ ಇಲ್ಲವೇ ಇನ್‌ಕ್ರಿಮೆಂಟ್ ಕಡಿತದಂತಹ ಶಿಕ್ಷೆಗೊಳಗಾಗುತ್ತಿದ್ದಾರೆ ಡ್ರೈವರ್‌ಗಳು.

ಸರ್ಕಾರದ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಪತ್ರಕರ್ತರನ್ನು, ವಿದ್ಯಾರ್ಥಿಗಳನ್ನು, ಅಂಗವಿಕಲರನ್ನು, ವೃದ್ಧರನ್ನು, ಪೋಲೀಸರನ್ನು, ಅಪರಾಧಿಗಳನ್ನು ಪ್ರತಿನಿತ್ಯ ಕರೆದುಕೊಂಡು ಹೋಗುವುದು ಒಂದು ಕಡೆಯಾದರೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಮಧ್ಯದಲ್ಲಿಯು, ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳಿಗೆ ಓಡಾಡುತ್ತಿರುವ ಅನಧಿಕೃತ ಮ್ಯಾಕ್ಸಿ ಕ್ಯಾಬ್‌ಗಳು, ಟಾಮ್ ಟಾಮ್ ರಿಕ್ಷಾಗಳು (10 ರಿಂದ 15 ಜನರು ಹೊತ್ತುವುದು), ಆರ್‌ಆರ್. ಸಾಮ್ರಾಟ್, ಬೇಂದ್ರೆ, ಅಂತಹ ಖಾಸಗಿ ಬಸ್‌ಗಳ ಪೈಪೋಟಿ ಇನ್ನೊಂದೆಡೆ. ಇದೆಲ್ಲದರಿಂದ ಸಂಸ್ಥೆಗೆ ಆದಾಯ ಬರುವುದು ಕಡಿಮೆಯಾಗಿದೆ.

ಪ್ರಾದೇಶಿಕ ಸಾರಿಗೆ ಕಚೇರಿ, ಪೋಲೀಸರ ಶಾಮೀಲಿನಿಂದಾಗಿ ಅನಧಿಕೃತವಾಗಿ ಹುಬ್ಬಳ್ಳಿ-ಧಾರವಾಡ ಮಧ್ಯದಲ್ಲಿ ಸಂಚರಿಸುತ್ತಿರುವ ಪ್ರತಿ ಮ್ಯಾಕ್ಸಿ ಕ್ಯಾಬ್‌ಗಳು ರೂ.2000 ವರೆಗೆ ಮಾಮೂಲಿ ನೀಡುತ್ತಿದ್ದಾರೆ. ಇನ್ನೂ ಬೇಂದ್ರೆ ಬಂದ ನಂತರ ಅವರೂ ಕೂಡ ಪ್ರತಿ ವಾಹನಕ್ಕೆ ತಿಂಗಳೊಂದಕ್ಕೆ ರೂ. 5,000 ಮಾಮೂಲಿ ನೀಡುತ್ತಿದ್ದಾರೆ.

ಇದೆಲ್ಲದರ ಮಧ್ಯೆ ಬಡ ಕಂಡಕ್ಟರ್ ಆದಾಯ ತರಲು ಸಾಧ್ಯವೇ?

ಬೇಂದ್ರೆ, ಸಾರಿಗೆ ಅವಾಂತರ

ಮಾರ್ಚ್ 7ಕ್ಕೆ [illegible]

[illegible]

ಉಡುಪಿ: ಮಗನ ರಕ್ತ ಕುಡಿದ ಅಪ್ಪ!

ಉಡುಪಿ ಜಿಲ್ಲೆಗೆ ಎಸ್. ಮುರುಗನ್ ಎಸ್‌ಪಿಯಾಗಿ ಬಂದ ಬಳಿಕ ನಡೆದ ಅಮಾಯಕರ ಕೊಲೆಗಳಿಗೆ ಲೆಕ್ಕವಿಲ್ಲ. ಎರಡು ವರ್ಷ ಪ್ರಾಯದ ಮಿಥುನ್ ಎಂಬ ಬಾಲಕನ ಕೊಲೆ ಮುರುಗನ್‌ರವರ ಸಾಧನೆಗಳ ಪಟ್ಟಿಗೆ ಇತ್ತೀಚಿನ ಸೇರ್ಪಡೆ.

ಎರಡು ವರ್ಷದ ಹರೆಯದ ಮಿಥುನ್‌ನನ್ನು ಕೊಂದವನು ಆತನ ಅಪ್ಪನೇ ವಿನಃ ಬೇರಾರೂ ಅಲ್ಲ. ಚಂದ್ರಹಾಸ ಶೆಟ್ಟಿ ಎಂಬ ಹೆಸರಿನ ಈ 'ಅಪ್ಪ' ಈಗ ಎಲ್ಲಿದ್ದಾನೆನ್ನುವುದು ಗೊತ್ತಿಲ್ಲ. ಮಗನ ಕುತ್ತಿಗೆಗೆ ಚೂರಿ ಎಳೆದು, ಕೈ ಹಿಡಿದ ಪತ್ನಿಯನ್ನೂ ಚೂರಿಯಿಂದ ತಿವಿದು ಗಂಭೀರವಾಗಿ ಗಾಯಗೊಳಿಸಿದ ಚಂದ್ರಹಾಸ ಶೆಟ್ಟಿ ನಂತರ ಪರಾರಿಯಾಗಿದ್ದಾನೆ.


ಮುರುಗನ್‌ರವರ ಅವಧಿಯಲ್ಲಿ ನಡೆದ ಅಷ್ಟೂ ಕೊಲೆ ಪ್ರಕರಣಗಳ ಆರೋಪಿಗಳು ತಲೆಮರೆಸಿಕೊಂಡಿರುವಂತೆ ಈ ಚಂದ್ರಹಾಸ ಶೆಟ್ಟಿಯೂ ಉಡುಪಿಯಿಂದ ಪರಾರಿಯಾಗಿ ಭೂಗತನಾಗಿದ್ದಾನೆ.

ತಮಗಾಗದವರನ್ನು ಕೊಲೆ ಮಾಡಲು ನಿರ್ಧರಿಸಿದವರೆಲ್ಲರೂ ಇತ್ತೀಚೆಗಿನ ಕೆಲವು ವರ್ಷಗಳಲ್ಲಿ ಉಡುಪಿಗೆ ಬಂದು ಅಪರಾಧ ಕೃತ್ಯಗಳನ್ನೆಸಗಿ ಆರಾಮವಾಗಿ ತಪ್ಪಿಸಿಕೊಳ್ಳುತ್ತಿರುವುದನ್ನು ನೋಡಿದರೆ ಇಲ್ಲಿ ಪೊಲೀಸ್ ಅಧಿಕಾರಿಗಳಿಗೂ, ಅಪರಾಧಿಗಳಿಗೂ ಮುಂಚಿತವಾಗಿಯೇ ಏನಾದರೂ ಒಪ್ಪಂದವೇರ್ಪಟ್ಟು ಹೀಗಾಗುತ್ತಿದೆಯೇ ಎಂಬ ಸಂಶಯ ಕಾಡುವುದು ಸಹಜ.

ಮಗನನ್ನೇ ಕೊಂದ ಚಂದ್ರಹಾಸ ಶೆಟ್ಟಿ ಮೂಲತಃ ಉಡುಪಿ ಜಿಲ್ಲೆಯವನೇ. ಕಳೆದ ಅನೇಕ ವರ್ಷಗಳಿಂದ ಮುಂಬಯಿಯಲ್ಲಿ ಬದುಕು ಕಂಡುಕೊಂಡವನು. ಥಾಣೆಯ ಹೋಟೇಲೊಂದರಲ್ಲಿ ದುಡಿಯುತ್ತಿದ್ದವನು.

ಇಂತಹ ಚಂದ್ರಹಾಸ ಶೆಟ್ಟಿಗೆ ಗಂಟು ಬಿದ್ದವಳು ಆಶಾ. ಚಿಕ್ಕಂದಿನಿಂದಲೇ ಹೆತ್ತವರನ್ನು ಕಳೆದುಕೊಂಡು, ಥಾಣೆ ಜಿಲ್ಲೆಯ ಐಕೋಳಿನಲ್ಲಿ ಅಪ್ಪನ ಮನೆಯಲ್ಲಿ ಬೆಳೆದು, ಯೌವನಕ್ಕೆ ಕಾಲಿಡುತ್ತಲೇ ಒಂದು ಹೊತ್ತಿನ ಊಟಕ್ಕಾಗಿ ಸ್ಥಳೀಯ ಬಾರ್‌ನಲ್ಲಿ ಡ್ಯಾನ್ಸರ್ ಆಗಿ ಕೆಲಸಕ್ಕೆ ಸೇರಿ ಬೆವರು ಸುರಿಸುತ್ತಿದ್ದವಳು.

ಬಡತನದ ನಡುವೆ ಪ್ರೀತಿ ಇಲ್ಲದ ಜನರ ಮಧ್ಯೆ ಬದುಕು ಸಾಗಿಸುತ್ತಿದ್ದ ಆಶಾ (26)ಳಿಗೆ ಚಂದ್ರಹಾಸ ಶೆಟ್ಟಿಯ ಪರಿಚಯವಾಯಿತು. ಸ್ನೇಹ ಪ್ರೇಮಕ್ಕೆ ತಿರುಗಿತು. ಮದುವೆಯೂ ನಡೆದುಹೋಯಿತು.



ಆಸ್ಪತ್ರೆಯಲ್ಲಿ ಆಶಾ

ಜೀವನ ಸಾಗಿತ್ತು. ಮಿಥುನ್‌ನ ರಂಗಪ್ರವೇಶವೂ ಆಗಿತ್ತು. ಎರಡನೇ ಬಾರಿ ಆಶಾ ಗರ್ಭಿಣಿಯೂ ಆಗಿಬಿಟ್ಟಳು. ಅಷ್ಟರವರೆಗೆ ಚೆನ್ನಾಗಿಯೇ ಇದ್ದ ದಾಂಪತ್ಯ ಜೀವನ ನಿಧಾನವಾಗಿ ಹಳಸಲಾರಂಭಿಸಿತು.

ಚಂದ್ರಹಾಸ ಶೆಟ್ಟಿಗೆ ಆಶಾ ಬೇಡವಾಗಿದ್ದಳು. ಇನ್ನೊಬ್ಬಾಕೆಯ ಪರಿಚಯ, ಸ್ನೇಹ, ಪ್ರೇಮದಲ್ಲಿ ಮುಂದುವರಿದು, ವಿವಾಹದ ಹತ್ತಿರವೂ ಬಂದು ಮುಟ್ಟಿತ್ತು. ಮಗ್ಗುಲ ಮುಳ್ಳಾಗಿದ್ದ ಆಶಾಳನ್ನು ಮುಗಿಸಿ ಬಿಡಲು ತೀರ್ಮಾನಿಸಿದ್ದ ಚಂದ್ರಹಾಸ ಶೆಟ್ಟಿ.



ರಕ್ತದ ಮಡುವಿನಲ್ಲಿ ಸತ್ತು ಬಿದ್ದಿರುವ ಮಿಥುನ್

ಅದಕ್ಕೆ ಮುಹೂರ್ತ ನಿಶ್ಚಯಿಸಿಯೇ ಚಂದ್ರಹಾಸ ಶೆಟ್ಟಿ ಆಶಾಳನ್ನು ಹೆರಿಗೆಗಾಗಿ ಊರಿಗೆ ಕರೆದೊಯ್ಯುವುದಾಗಿ ನಂಬಿಸಿ ಉಡುಪಿಗೆ ಕರೆದುಕೊಂಡು ಬಂದಿದ್ದ.

ಇಂದ್ರಾಳಿ ರೈಲು ನಿಲ್ದಾಣದಲ್ಲಿ ಪತ್ನಿ ಹಾಗೂ ಮಗನೊಂದಿಗೆ ಬಂದಿಳಿದ ಚಂದ್ರ ಹಿರಿಯಡ್ಕ ಸಮೀಪದ ಕೊಂಡಾಡಿ ಬಳಿಯ ನಿರ್ಜನ ಕಾಡು ಪ್ರದೇಶದಲ್ಲಿ ಆಶಾಳೊಂದಿಗೆ ಮಾತಿಗೆ ಮಾತು ಬೆಳೆಸಿದ್ದಾನೆ. ಜಗಳ ಶುರು ಮಾಡಿದ್ದಾನೆ. ಬಳಿಕ ದಯೆ-ದಾಕ್ಷಿಣ್ಯ ತೋರದೆ ಆಶಾಳ ಮೇಲೆ ಚೂರಿಯಿಂದ ದಾಳಿ ನಡೆಸಿದ್ದಾನೆ. ಚೂರಿಯಿಂದ ತಿವಿತಕ್ಕೊಳಗಾದ ಆಶಾ ಕ್ಷಣಾರ್ಧದಲ್ಲಿ ತಪ್ಪಿಸಿಕೊಂಡು ಒಂದಷ್ಟು ದೂರ ಓಡಿ ಹೋಗಿ ಬಿದ್ದು ಬಿಟ್ಟಿದ್ದಾಳೆ.

ಇತ್ತ ಎರಡು ವರ್ಷದ ಮಿಥುನ್ ಅಮ್ಮಾ... ಎಂದು ಬೊಬ್ಬೆ ಇಟ್ಟಿದ್ದಾನೆ. ಆಶಾಳಿಗೆ ಇರಿದ ಅದೇ ಚೂರಿಯಿಂದ ಮಿಥುನ್‌ನ ಕತ್ತು ಕತ್ತರಿಸಿ ಹಾಕಿದ್ದಾನೆ. ಆನಂತರ ಅಲ್ಲಿ ನಿಲ್ಲದೆ ನಿರ್ಗಮಿಸಿದ್ದಾನೆ.

ಧಾರಾಕಾರ ರಕ್ತ ಸ್ರಾವವಾಗುತ್ತಿದ್ದಂತೆ ಮೈ ಎಳೆದುಕೊಂಡು ಆಶಾ ಮನೆಯೊಂದರ ಎದುರಿಗೆ ಹೋಗಿ ನೀರು ಕೇಳಿದ್ದಾಳೆ. ಆದರೆ ನೀರು ಕೊಡುವಷ್ಟು ಮಾನವೀಯತೆ ಆ ಮನೆಯವರಲ್ಲಿರಲಿಲ್ಲ! ಮರುದಿನ ಬೆಳಿಗ್ಗೆ ಪ್ರಜ್ಞೆ ಇಲ್ಲದೆ ಬಿದ್ದಿದ್ದ ಆಶಾಳನ್ನು ಊರಿನ ಕೆಲವು ಜನರು ನೋಡಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಸಾಗಿಸಿ ದಾಖಲಿಸಿದ್ದಾರೆ. ಹಾಗಾಗಿ ಆಶಾಳ ಜೀವವೊಂದು ಉಳಿದಿದೆ.

ಮಗನ ಕೊಲೆ ಮತ್ತು ಪತ್ನಿಯ ಕೊಲೆ ಯತ್ನ ಪ್ರಕರಣ ದಾಖಲಿಸಿದ ಹಿರಿಯಡ್ಕ ಪೊಲೀಸರು ಚಂದ್ರಹಾಸ ಶೆಟ್ಟಿಯ ಪತ್ತೆಗಾಗಿ ಮುಂಬಯಿಗೆ ಹೊರಟ ಬೆನ್ನಿಗೆ ಆಶಾ ಅನಾಥೆ ಎನ್ನುವುದು ಕೆಎಂಸಿಯ ವೈದ್ಯರಿಗೆ ಗೊತ್ತಾಗಿಬಿಟ್ಟಿದೆ. ತಕ್ಷಣವೇ ಆಶಾಳನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿ ಗೇಟ್ ಪಾಸ್ ಕೊಟ್ಟು 'ಮಾನವೀಯತೆ' ಮೆರೆದಿದ್ದಾರೆ!

ಆಶಾಳಿಗೆ ಕನ್ನಡ ಬರುವುದಿಲ್ಲ. ತನ್ನವರೆಂಬುವರ ಉಡುಪಿಯಲ್ಲಿ ಈಕೆಗೆ ಯಾರೂ ಇಲ್ಲ. ಇದೀಗ ಎಂಟು ತಿಂಗಳ ಗರ್ಭಹೊತ್ತು ಆಶಾ ಇನ್ನೊಬ್ಬ ಮಿಥುನ್‌ನ ಕನಸು ಕಾಣುತ್ತಾ ಮಹಿಳೆಯರ ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿದ್ದಾಳೆ.

-ಶ್ರೀರಾಮ ದಿವಾಣ

ಕೊಪ್ಪಳ ಜಿಲ್ಲೆ: ಹಳ್ಳಿಹಳ್ಳಿಯಾಗ ಖೋಟಾನೋಟು!

ಕೊಪ್ಪಳ ಜಿಲ್ಲೆಯಲ್ಲಿ ಈಗ ಹೊರ ನೋಟಕ್ಕೆ ನಿಂತೇ ಹೋಗಿದೆ ಎನ್ನುವಂತಿದ್ದ ಖೋಟಾನೋಟು ಜಾಲ ಜೀವಂತ ಎನ್ನುವುದು ಪತ್ತೆಯಾಗಿದೆ. ಹಿಂದೆಯೂ ಖೋಟಾನೋಟು ಸಿಕ್ಕಾಗ ಸುಟ್ಟು ಹಾಕುವುದು, ಪೊಲೀಸರ ಬಾಯಿಗೆ ಬೀಗ ಹಾಕಿದ್ದು ನಡೆದೇ ಇತ್ತು.



ಖೋಟಾ ನೋಟಿನ ಜಾಲದಲ್ಲಿ ಸಿಕ್ಕಿಕೊಂಡಿರುವ ಶ್ರೀದೇವಿ, ಶಂಕರಯ್ಯ, ಮಲ್ಲಮ್ಮ

ನಗರಗಳಿಗೆ ಸೀಮಿತವಾಗಿದ್ದ ಖೋಟಾ ನೋಟು ಕುಕನೂರು, ಅಗಳಕೇರಿ, ಹನುಮಸಾಗರ, ಕಾರಟಗಿ, ಕುಕನಪಳ್ಳಿ, ಬೂದಗುಂಪಾ, ಭಾಗ್ಯನಗರ, ಬೇವೂರು, ತಾವರಗೇರೆಯಂತಹ ಗ್ರಾಮೀಣ ಪ್ರದೇಶಕ್ಕೆ ಹಬ್ಬಿದೆಯೂ? ಹೌದು, ಜಿಲ್ಲೆಯಲ್ಲಿ ಬ್ಯಾಂಕ್, ವ್ಯಾಪಾರಿಗಳು, ಬಾರಿನವರು ಖೋಟಾ ನೋಟು ಪತ್ತೆ ಹಚ್ಚುವ ಮಷಿನ್ ತಂದಿಟ್ಟುಕೊಂಡ ಮೇಲೆ ಗ್ರಾಮೀಣ ಭಾಗಕ್ಕೆ ವಿಸ್ತರಿಸಿಕೊಂಡ ಬಗ್ಗೆ ಆಗಾಗ ಕೇಳಿ ಬರುತ್ತಿದ್ದ ಪಿಸುಮಾತುಗಳಿಗೆ ಈಗ ಚಿತ್ರಣ ಬಂದಿದೆ.

ತಿಂಗಳ ಹಿಂದೆ ಕೊಪ್ಪಳದ ಮಾಜಿ ಶಾಸಕ ಸಂಗಣ್ಣ ಕರಡಿಯ ಸ್ವಂತ ಊರು ಕುಕನಪಳ್ಳಿಯಲ್ಲಿ ನಡೆಯುವ ಉತ್ತರ ಕರ್ನಾಟಕದ ಪ್ರಮುಖ ಕುರಿಸಂತೆಯಲ್ಲಿ ಖೋಟಾನೋಟು ಓಡಾಡುತ್ತಿದ್ದವು ಎಂಬ ಸುದ್ದಿಗೆ ಇಂಬುಕೊಡುವಂತೆ ಈಗ ಕುಷ್ಟಗಿ ಮಾಜಿ ಶಾಸಕ ಹಸನ್‌ಸಾಬರ ಸ್ವಗ್ರಾಮ ದೋಟಿಹಾಳದ ಶುಕಮುನಿ ಜಾತ್ರೆಯಲ್ಲಿ ಖೋಟಾ ನೋಟು ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಇನ್ನು ನಿದ್ದೆ ಮಾಡುವಂತಿಲ್ಲ.

ಕಳೆದ ಐದು ವರ್ಷಗಳಿಂದ ಜಿಲ್ಲೆಯಲ್ಲಿ ಖೋಟಾ ನೋಟಿನ ಸುದ್ದಿ ಬಂದರೆ ಜನ 'ಖೋಟಾನೋಟು ಸಿಕ್ಕುವಂತ... ಅದೇನು ಹೊಸದಲ್ಲ ಬಿಡಿ' ಎನ್ನುತ್ತಾರೆ. ಪೊಲೀಸರಿಗೆ ಕೇಳಿದರೆ 'ಖೋಟಾನೋಟಾ? ಹೆಂಗಿರ್ತಾವರೀ ಅವು?' ಅಂತ ಹೊರಳಿ ಕೇಳುತ್ತಾರೆ. ಫೆ.28 ಶಿವರಾತ್ರಿ ಅಮವಾಸ್ಯೆ. ಅಂದು ದೋಟಿಹಾಳದ ಶುಕಮುನಿ ಜಾತ್ರೆಯಲ್ಲಿ ಹನುಮಸಾಗರದ ಮಹಿಳೆಯೇ 500 ರೂಪಾಯಿ ಬಜ್ಜಿ ಮಾರಿದ್ದಾಳೆ. ಅದರಲ್ಲಿ ನೂರರ ಎರಡು ನೋಟು ಬಂದಿದ್ದವು. ವ್ಯಾಪಾರ ಮುಗಿಸಿ ಹನುಮಸಾಗರಕ್ಕೆ ಬಂದಾಗ ಅಚಾನಕ್ ಆ ಎರಡು ನೋಟುಗಳು ನೀರಿನಲ್ಲಿ ಬಿದ್ದು ಒಂದರ ಬಣ್ಣ ಗೆಟ್ಟಾಗ ಅದು ಖೋಟಾನೋಟು ಎಂದು ಗೊತ್ತಾಗಿದೆ. ಈ ಸುದ್ದಿ ಜಿಲ್ಲೆ ತುಂಬ ಗೊತ್ತಾದರೂ ಹನುಮಸಾಗರ ಪೊಲೀಸರು ಇದು ತಮಗೆ ಸಂಬಂಧಿಸಿದ್ದಲ್ಲ ಎಂಬಂತೆ ಸುಮ್ಮನಿದ್ದು ಬಿಟ್ಟಿದ್ದಾರೆ.

ಗದಗ, ಹುಬ್ಬಳ್ಳಿ, ಬಾಗಲಕೋಟೆ, ಬಿಜಾಪುರ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಿಗೆ ಜಂಕ್ಷನ್‌ನಂತಿರುವ ಕುಷ್ಟಗಿ ಖೋಟಾನೋಟು ಮಾರ್ಕೆಟಿಂಗ್ ಮಾಡಲು ಒಳ್ಳೆಯ ಜಾಗ ಎಂಬ ಮಾತಿಗೆ ಈಗಿನ ಪ್ರಕರಣದ ಜೊತೆಗೆ ಮೂರು ವರ್ಷದ ಹಿಂದೆ ತಾವರಗೇರಿಯಲ್ಲಿ ಪತ್ತೆಯಾದ ಖೋಟಾನೋಟುಗಳು ಕೂಡ ಸಾಕ್ಷಿ ನುಡಿಯುತ್ತಿವೆ. ಈಗ ಗ್ರಾಮೀಣ ಜನರನ್ನು ಗುರಿಯಾಗಿಟ್ಟುಕೊಂಡು ಜಿಲ್ಲೆಯಲ್ಲಿ ಖೋಟಾನೋಟು ಚಲಾವಣೆಯಾಗುತ್ತಿದೆ ಎಂಬುದಕ್ಕೆ ಹಿಂದಿನ ಘಟನೆಗಳು ಕೂಡಾ ಸಾಕ್ಷಿ.


ತ್ರಿವಳಿಗಳ ನಕಲಿ

2002 ಫೆ.23ರಂದು ಮಲ್ಲಮ್ಮ, ಶ್ರೀದೇವಿ, ಶಂಕ್ರಯ್ಯ ಎಂಬುವವರು ಕುಷ್ಟಗಿ ತಾಲೂಕಿನ ತಾವರಗೇರಿ ಬಸ್‌ಸ್ಟ್ಯಾಂಡ್ ಮುಂದೆ ಸಂಜೆ 4 ಗಂಟೆಗೆ ಎಳನೀರು, ದ್ರಾಕ್ಷಿ, ಖರೀದಿಸಿ ಕೊಟ್ಟ ನೋಟುಗಳು ದೌಟಗೆ ಕಾರಣವಾಗಿ ವ್ಯಾಪಾರಿಗಳು ಪೊಲೀಸರಿಗೆ ಸುದ್ದಿ ಕೊಟ್ಟಾಗ ಸಿಪಿಐ ವಿಠಲ ಐರಾಣಿ, ಪಿಎಸ್‌ಐ ಹನುಮಂತರಾವ್ ಮಿಂಚಿನ ವೇಗದಲ್ಲಿ ಅವರನ್ನು ಅರೆಸ್ಟ್ ಮಾಡಿದರು. ಆಗ ಗೊತ್ತಾದದ್ದು ಮಲ್ಲಮ್ಮ ಸಿರಿಗುಪ್ಪ ತಾಲೂಕಿನ ಸಾತನೂರಿನವಳು, ಶ್ರೀದೇವಿ ಗಂಗಾವತಿಯವಳು, ಶಂಕ್ರಯ್ಯ ಲೋಕಲ್‌ನವನು ಎಂಬುದು. ಇವರನ್ನು ಬಂಧಿಸಿದ ತಾಸಿಗೇ ಎಂಎಲ್‌ಸಿ ನಿರಂಜನ ನಾಯ್ಡು ಪೊಲೀಸರಿಗೇ ಫೋನ್ ಮಾಡಿ ಅವರನ್ನು ಬಿಡುವಂತೆ ಹೇಳಿದರೂ ಅವರನ್ನು ಜೈಲಿಗೆ ಕಳಿಸಿದ್ದರು. ಅಂದರೆ ಇಲ್ಲಿ ಅಧಿಕಾರಸ್ಥರ ಸಿಗ್ನಲ್ ಇಲ್ಲದೇ ಖೋಟಾನೋಟು ಓಡಾಡುವುದಿಲ್ಲ ಎಂದು ಸಾಬೀತಾಗಿತ್ತು.


ಈ ಮೂವರಿಂದ ಸಿಕ್ಕಂತಹ ಖೋಟಾ ನೋಟುಗಳು ಒರಿಜಿನಲ್ ನೋಟನ್ನು ಸ್ಕ್ಯಾನ್ ಮಾಡಿ, ಅತ್ಯಾಧುನಿಕ ಕಲರ್ ಇಂಕ್ ಜೆಟ್ ಪ್ರಿಂಟರ್‌ನಿಂದ ಚೆಕ್ ಬಾಂಡ್ ಹಾಳೆಯಲ್ಲಿ ಪ್ರಿಂಟ್ ಹಾಕಿದ ನೋಟುಗಳು. ಸ್ಕ್ಯಾನ್ ಮಾಡಿದ್ದ ನಂಬರಿನ ಬಹಳಷ್ಟು ಪ್ರಿಂಟ್‌ಗಳನ್ನು ಹಾಕಲಾಗಿತ್ತು. ಅದರ ನಂಬರ್‌ಗಳು ಹೀಗಿವೆ: 2QT 132050-70ನೋಟು, 5SS 644799-64 ನೋಟು, 2QT 132055 - 46 ನೋಟು, 5QS 694799 - 42ನೋಟು, 5QS 694794 -42ನೋಟು 5SS 694744-92 ನೋಟು ಹೀಗೇ ಒಟ್ಟು 366 ನೋಟುಗಳನ್ನು ಪ್ರಿಂಟ್ ಹಾಕಿ 200ಕ್ಕೂ ಹೆಚ್ಚು ನೋಟುಗಳನ್ನು ಮಾರ್ಕೆಟ್‌ನಲ್ಲಿ ಬಿಟ್ಟಿದ್ದರು. ಈ ಪ್ರಕರಣ ಇಂದೇನಾಗಿದೆ ಎಂಬುದೇ ಗೊತ್ತಾಗುತ್ತಿಲ್ಲ.

ಉಡುಪಿ ಜಿಲ್ಲೆ: ಅಪರಾಧಿಗಳ ಸ್ವರ್ಗ

ಯಾವುದೋ ಒಂದು ಊರಿನಿಂದ ಯಾರ್‍ಯಾರೋ ಇಲ್ಲಿಗೆ ಬಂದು ಕೊಲೆ ಮಾಡುವುದು, ಪರಾರಿಯಾಗುವುದು ಮತ್ತು ಭೂಗತ ದೊರೆಗಳ ಸ್ಥಳೀಯ ಬಂಟರು ತಮಗಾಗದವರನ್ನು ಹತ್ಯೆಗೈದು ರಾಜಾರೋಷವಾಗಿ ಹಾಡುಹಗಲೇ ಎಲ್ಲರೆದುರು ಸುತ್ತಾಡುವುದು ಇತ್ಯಾದಿ ಉಡುಪಿ ಜಿಲ್ಲೆಯಲ್ಲಿ ಸಾಮಾನ್ಯ ಸುದ್ದಿಗಳು.



ಹೆಬ್ರಿಯ ಕಾಲೇಜು ವಿದ್ಯಾರ್ಥಿನಿ ಸುಚೇತಾ ಶೆಟ್ಟಿ ಎಂಬಾಕೆಯನ್ನು ಅತ್ಯಾಚಾರ ನಡೆಸಿ ಕೊಲೆಗೈಯಲಾಯಿತು. ಹಂತಕರ ಹಿಂದೆ ಕಾಂಗ್ರೆಸ್ ನಾಯಕರಿದ್ದಾರೆಂದು ಪ್ರಚಾರ ನಡೆಸಿಯೇ ಬಿಜೆಪಿಯಿಂದ ಸುನಿಲ್ ಕುಮಾರ್ ಎಂಎಲ್‌ಎ ಓಟಿನಲ್ಲಿ ಗೆದ್ದು ಬಂದ. ಗೆದ್ದು ಬಂದವನೇ ಮುಂದಿನ ನೂರು ದಿನಗಳೊಳಗೆ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸುವಂತೆ ಮಾಡುತ್ತೇನೆಂದು ಸುನಿಲ್ ಎಂಬ ಉತ್ತರ ಕುಮಾರ ಪೌರುಷ ಕೊಚ್ಚಿದ್ದೇ ಬಂತು. ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ಬಂದು ತಿಂಗಳುರುಳಿದರೂ ಸುಚೇತಾಳನ್ನು ಕೊಲೆ ಮಾಡಿದವರಾರು ಎಂಬುದು ಇಂದಿಗೂ ಅಧಿಕೃತವಾಗಿ ಪತ್ತೆಯಾಗಿಲ್ಲ. ಪತ್ತೆಯಾದರೆ ಮುಂದಿನ ಚುನಾವಣೆಗೆ ಮೊದಲು ಸುನಿಲ್‌ಕುಮಾರ್ ಹೊಸದೊಂದು ವಿವಾದವನ್ನು ಹುಡುಕಬೇಕಾಗುತ್ತದೆ.



ಕಾರ್ಕಳ ತಾಲೂಕಿನ ಹಿರಿಯಂಗಡಿಯಲ್ಲಿ ಕು. ಜಯ ಎಂಬಾಕೆಯ ಕೊಲೆಯಾಗಿಯೂ ವರ್ಷ ಕಳೆಯಿತು. ಈ ಕೊಲೆಯ ಹಿಂದೆ ಭಜರಂಗದಳದ ಕಾರ್ಯಕರ್ತರಿದ್ದಾರೆಂಬ ಆರೋಪವೂ ಇದೆ. ಸುನಿಲ್ ಕುಮಾರ್ ಜಾಣ ಮೌನ ವಹಿಸಿದ್ದಾನೆ. ಆರೋಪಿಯ ಪತ್ತೆ ಇನ್ನೂ ಆಗಿಲ್ಲ.

ಕಾರ್ಕಳದ ಗೊಮ್ಮಟ ಬೆಟ್ಟದ ಬಳಿ ಶೆಣೈ ಹಾಗೂ ವನಮಾಲಾ ಶೆಣೈ ದಂಪತಿಗಳನ್ನು ಕೊಲೆ ಮಾಡಿದ ಮಂದಿ ಇವತ್ತಿಗೂ ಬೀದಿಯಲ್ಲಿ ಸುತ್ತಾಡುತ್ತಿದ್ದಾರೆ. ಖಾಕಿ ಖದೀಮರಿಗೆ ಮಾತ್ರ ಇದು ಕಣ್ಣಿಗೆ ಕಾಣುತ್ತಿಲ್ಲ. ಬ್ರಹ್ಮಾವರದಲ್ಲಿ ನಡೆದ ಗೋಪಿ ಯಾನೆ ಪದ್ಮಳನ್ನು ಕೊಲೆಗೈದವರೂ ಹೀಗೆಯೇ ಸುತ್ತಾಡುತ್ತಿದ್ದಾರೆ.

ಉಡುಪಿ-ಮಣಿಪಾಲ ರಸ್ತೆಯ ಕುಂಜಿಬೆಟ್ಟು ಎಂಬಲ್ಲಿನ ರಸ್ತೆ ಬದಿಯಲ್ಲಿ ನಡು ಮಧ್ಯಾಹ್ನವೇ ಕ್ಲಿನಿಕ್‌ನೊಳಗಡೆಯೇ ಡಾ. ಚಂದ್ರಕಲಾ ಭಟ್ ಎನ್ನುವವರು ಬರ್ಬರವಾಗಿ ಕೊಲೆಗೀಡಾದರು. ಉಡುಪಿ ನಗರದಲ್ಲೇ ಇರುವ ನಾರ್ತ್ ಶಾಲಾ ಆವರಣದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬಳು ಹತ್ಯೆಗೀಡಾದರು. ಎರಡೂ ಪ್ರಕರಣಗಳ ಆರೋಪಿಗಳನ್ನು ಗುರುತಿಸುವ ಕೆಲಸ ಕೂಡ ಇನ್ನೂ ನಡೆದಿಲ್ಲ.

ಕಾಪು ಸಮೀಪದ ಕೊಪ್ಪಲಂಗಡಿ ಬಳಿಯ ಹಾಡಿಯಲ್ಲಿ ಮನೆ ಕೆಲಸದ ಯುವತಿ ಬಿಜಾಪುರ ಮೂಲದ ಸುಧಾ ಎಂಬಾಕೆಯ ಅತ್ಯಾಚಾರ ಮತ್ತು ಕೊಲೆ ಹಾಗೂ ಎಲ್ಲೂರು ನಿವಾಸಿ, ಸ್ವ ಸಹಾಯ ಗುಂಪೊಂದರ ಕಾರ್ಯಕರ್ತೆ ವಿಮಲಾ ಪೂಜಾರಿ ಎಂಬಾಕೆಯನ್ನು ಪಾದೂರು ಎಂಬಲ್ಲಿ ಅತ್ಯಾಚಾರಗೈದು, ಕೊಲೆ ಮಾಡಲಾಯಿತು. ಇತರೆಲ್ಲಾ ಪ್ರಕರಣಗಳಂತೆಯೇ ಆರೋಪಿಗಳನ್ನು ಪತ್ತೆ ಹಚ್ಚುವ ಕೆಲಸ ಹಳ್ಳ ಹಿಡಿಯಿತು.

ಅಬಕಾರಿ ಇಲಾಖೆಯ ಸಿಬ್ಬಂದಿಗಳಿಂದಲೇ ಹೆಲೆನ್ ಡೇಸಾ ಎಂಬಾಕೆಯ ಕೊಲೆಯಾಯಿತು. ಆರೋಪಿಗಳನ್ನು ಸಾರ್ವಜನಿಕರೇ ಗುರುತಿಸಿ ಪ್ರತಿಭಟನೆಯನ್ನೂ ನಡೆಸಿದರು. ಪೋಲೀಸರು ಮಾತ್ರ ಯಾವುದನ್ನೂ ಕೇಳಿಸಿಕೊಳ್ಳಲೇ ಇಲ್ಲ.

ಇಂತಹ ಪ್ರಕರಣಗಳು ಅದೆಷ್ಟೋ ಇವೆ. ಆದರೆ ಯಾವುದರ ಗೊಡವೆಗೂ ಉಡುಪಿಯ ಪೋಲೀಸ್ ಅಧಿಕಾರಿಗಳು ಹೋಗುವುದಿಲ್ಲ. ಮುರುಗನ್ ಕಣ್ಣಿಗೆ ಅಪರಾಧಿಗಳಾಗಿ ಕಾಣುವುದು ಬದುಕುವ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವ ಪಾರ್ವತಿ-ಹಾಜಿಮಾ, ಉಮೇಶ್-ಅಜಿತ್‌ರಂತಹ ಯುವಕ-ಯುವತಿಯರು ಮಾತ್ರ! ಇವರು ನಡೆಸುವ ಜನ ಜಾಗೃತಿ ಕೆಲಸಗಳೇ ಮುರುಗನ್ ಮಟ್ಟಿಗೆ ಮಹಾ ಅಪರಾಧ ಕೃತ್ಯಗಳು!!

ಉಡುಪಿ ಜಿಲ್ಲೆಯನ್ನು ಅಪರಾಧಿಗಳ ಸ್ವರ್ಗವನ್ನಾಗಿ ಮಾಡಿದ ಎಸ್‌ಪಿ ಮುರುಗನ್‌ಗೆ ರಾಷ್ಟ್ರಪತಿ ಪದಕವೂ ಕಡಿಮೆಯೇ ಆಯಿತು!

ಕೊಪ್ಪಳ: ಕುರುಬರಿಗೆ ದ್ರೋಹ, ಸ್ವಾಮೀಜಿಗೇ ಬತ್ತಿ

ಕೊಪ್ಪಳ ಎಂ.ಪಿ. ವಿರುಪಾಕ್ಷಪ್ಪ ಈಗ ಕಾಗಿನೆಲೆ ಕನಕಗುರು ಪೀಠದ ಸ್ವಾಮಿಯೋರ್ವರಿಗೆ ಬತ್ತಿ ಇಡುತ್ತ, ಕುರುಬರಿಗೆ ದ್ರೋಹ ಬಗೆಯುತ್ತಿದ್ದಾನೆ.

ತನ್ನ ರಾಜಕೀಯ ಲಾಭಕ್ಕಾಗಿ, ಕುರುಬರ ಮತಬ್ಯಾಂಕ್ ಗಟ್ಟಿಗೊಳಿಸುವುದಕ್ಕಾಗಿ ಕನಕಗುರು ಪೀಠದ ಗುಲ್ಬರ್ಗಾ ವಿಭಾಗದ ಶಾಖೆಯನ್ನು ತನ್ನ ಸಿಂಧನೂರಿನಲ್ಲಿಯೇ ಸ್ಥಾಪಿಸಿಕೊಂಡ. ಇದಕ್ಕಾಗಿ ಮಾಜಿ ಸಚಿವ ಎಚ್. ವಿಶ್ವನಾಥರಿಂದ ಬೀರೇಂದ್ರ ಸ್ವಾಮಿಗಳಿಗೆ ಇನ್‌ಫ್ಲೂಯೆನ್ಸ್ ಮಾಡಿದ್ದ. ಶಾಖಾ ಮಠಕ್ಕೆ ಸಕಲ ಸವಲತ್ತು ನೀಡುವುದಾಗಿ ಭರವಸೆ ನೀಡಿ ಸ್ವಾಮಿಗೆ ಇರಲು ಕಟ್ಟಡವೊಂದನ್ನು ಒದಗಿಸಿದ್ದು ಬಿಟ್ಟರೆ ಅಂಥದ್ದೇನನ್ನು ಮಾಡಲೇ ಇಲ್ಲ. ಈಗ ಇಲ್ಲಿನ ಸಿದ್ಧರಾಮಾನಂದ ಪುರಿ ಸ್ವಾಮಿಯನ್ನು ಇಲ್ಲಿಂದ ಓಡಿಸಲು ಒಳಸಂಚು ಮಾಡುತ್ತಿರುವ ಎಂ.ಪಿ. ವಿರುಪಾಕ್ಷಪ್ಪನಿಗೆ ತನ್ನ ಕುಟುಂಬದ ಏಳಿಗೆ ಆಗಬೇಕಷ್ಟೇ. ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಸಾಕಷ್ಟು ಪ್ರಾಬಲ್ಯ ಹೊಂದಿರುವ ಕುರುಬ ಜನಾಂಗದಲ್ಲಿ ಇವತ್ತು ಈ ವಿಷಯದ ಚರ್ಚೆ ನಡೆಯುತ್ತಿದ್ದು ವಿರುಪಾಕ್ಷಿಗೆ ಬುದ್ಧಿ ಕಲಿಸಲು ಯೋಚಿಸುತ್ತಿದ್ದಾರೆ. ವಿರುಪಾಕ್ಷಪ್ಪನ ತಂತ್ರಗಳಿಗೆ ಬೆದರಿರುವ ಸಿದ್ಧರಾಮಾನಂದ ಸ್ವಾಮಿ ಗುಲ್ಬರ್ಗಾ ಜಿಲ್ಲೆ ಸುರುಪುರ ತಾಲ್ಲೂಕಿನ ತಿಂಥಣಿಗೆ ತೀರ್ಥಯಾತ್ರೆ ಹೋಗುವ ವಿಚಾರದಲ್ಲಿದ್ದಾರೆ.



ಪೀಠ ಸ್ಥಾಪನೆ ನಂತರ 2004 ರಲ್ಲಿ ಕಾಗಿನೆಲೆ ಪೀಠದ ಬೀರೇಂದ್ರ ಕೇಶವಸ್ವಾಮಿಯ ದ್ವಿದಶಮಾನೋತ್ಸವ ಕಾರ್ಯಕ್ರಮವನ್ನು ಸಿಂಧನೂರಲ್ಲಿ ಅದ್ದೂರಿಯಾಗಿ ನಡೆಸಿ, ತಾನೊಬ್ಬ ಕುರುಬರ ಮಹಾನಾಯಕ ಎಂದು ಕುರುಬರ ಕಿವಿಗಳಿಗೆ ಹೂ ಮುಡಿಸಲು ನೋಡಿದ್ದ ವಿರುಪಾಕ್ಷಪ್ಪ ಕುರುಬರ ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ನಯಾಪೈಸೆ ಕೆಲಸ ಮಾಡಿದವನಲ್ಲ. ಹಿಂದೆ ಸಿಂಧನೂರಿನ ಎಂಎಲ್‌ಎ ಆಗಿದ್ದಾಗ ಬಾದರ್ಲಿ ಹಂಪನಗೌಡನೊಂದಿಗೆ ಜಿದ್ದಾಜಿದ್ದಾ ಸಾಧಿಸಿದ. ಈಗ ಬಾದರ್ಲಿ ಜೊತೆ ಸೇರಿ ಕೊಪ್ಪಳದ ಎಂಪಿಯಾಗಿ ಮೇಯುತ್ತಲೇ ಇದ್ದಾನೆ ಈ ಚಾಲಾಕಿ ವ್ಯಕ್ತಿ. ತನ್ನ ಜನಾಂಗದ ಮೇಲೆ ಶಾಖಾಮಠದ ಸ್ವಾಮಿಯ ಪ್ರಭಾವ ಹೆಚ್ಚಾಗದಂತೆ ನೋಡಿಕೊಂಡ ವಿರುಪ್ಸ್ ಕನಕಪೀಠದ ಶಾಖೆಯನ್ನು ನಿರ್ಲಕ್ಷಿಸಿ, ತನ್ನ ಸ್ವಂತ ಆಸ್ತಿಯಂತೆ ಸ್ಕೂಲ್, ಡಿ.ಎಡ್. ಕಾಲೇಜ್ ಅಲ್ಲದೇ ರಾಯಚೂರಲ್ಲೊಂದು ವಸತಿ ಶಾಲೆ ಆರಂಭಿಸಿರುವ ವಿರುಪ್ಸ್‌ಗೆ ಶಿಕ್ಷಣವೆಂದರೆ ಹಣ ಮಾಡುವ ದಂಧೆ ಅಷ್ಟೇ.





ಕರಿಯಪ್ಪ



ದೊಡ್ಡಬಸವರಾಜ

ವಿರುಪ್ಸ್‌ನ ವಿರೂಪದ ಚರಿತ್ರೆ!

ಎರಡು ದಶಕಗಳ ಹಿಂದೆ ಅಂಗಡಿಯೊಂದರಲ್ಲಿ ಗುಮಾಸ್ತನಾಗಿದ್ದ ವಿರುಪ್ಸ್ ನಂತರ ಗಿರಣಿಯೊಂದನ್ನು ಆರಂಭಿಸಿದ್ದ. ಲಿಂಗಾಯತರ ವಿರುದ್ಧ ಕುರುಬರನ್ನು ಎತ್ತಿಕಟ್ಟುತ್ತಲೇ ವಿ.ಎಸ್.ಎಸ್.ಎನ್.ಎನ್. ಟಿ.ಎಲ್.ಡಿ.ಬಿ. ಎ.ಪಿ.ಎಂ.ಸಿ.ಗಳ ಅಧ್ಯಕ್ಷನಾಗಿ ಕಬಳಿಸುತ್ತಾ ಕಬಳಿಸುತ್ತಾ ಸಿಂಧನೂರಿನ ಶಾಸಕನೂ ಆಗಿಬಿಟ್ಟ. ತಿಂಗಳಿಗೊಂದು ಹೊಸ ಆಸ್ತಿ ಮಾಡುತ್ತಲೇ ಬಂದ ವಿರುಪ್ಸ್ ಈಗ ಕೊಪ್ಪಳದ ಎಂಪಿಯಾಗಿ ಕೊಪ್ಪಳದಲ್ಲೂ ಖರೀದಿ ಮಾಡುವುದರಲ್ಲಿ ಫುಲ್ busy ಆಗಿದ್ದಾನೆ. ಪ್ರಾರಂಭದಲ್ಲಿ ಪುರಸಭಾ ಚುನಾವಣೆಗಳಲ್ಲಿ ಲಗಾಟ ಹೊಡೆಯುತ್ತಿದ್ದ ವಿರುಪ್ಸ್, ತನಗೆ ರಾಜಕೀಯ ನೆಲೆ ಕಲ್ಪಿಸಿದ ಸಿಂಧನೂರಿನ ಮಾಜಿ ಶಾಸಕ ಆರ್. ನಾರಾಯಣಪ್ಪನನ್ನು ಸೈಡಿಗೆ ತಳ್ಳಿ ಮುಂದೆ ಬಂದ. ವಿರುಪ್ಸ್‌ಗಿಂತ ಸೀನಿಯರ್ ಆಗಿರುವ ಸಿಂಧನೂರು ತಾಪಂ ಅಧ್ಯಕ್ಷ ಕುರುಬರ ರಮೇಶಪ್ಪ ದಿದ್ದಿಗಿ, ಇನ್ನೊಬ್ಬ ಕುರುಬ ನಾಯಕ ಕಾಳಿಂಗಪ್ಪ ವಕೀಲರನ್ನು ವಿರುಪ್ಸ್ ಬೆಳೆಯಲು ಬಿಡುತ್ತಲೇ ಇಲ್ಲ. ಗಂಡುಮಕ್ಕಳಿಲ್ಲದ ವಿರುಪ್ಸ್ ತನ್ನ ಸಹೋದರ ಮಟ್ಕಾ ಖ್ಯಾತಿಯ 'ಓ.ಸಿ.' ನಾಗಪ್ಪನ ಪುತ್ರ ಕರಿಯಪ್ಪನನ್ನು ತನ್ನ ಉತ್ತರಾಧಿಕಾರಿಯಾಗಿ ಬೆಳೆಸುತ್ತಿದ್ದಾನೆ. ಜಿ.ಪಂ. ಸದಸ್ಯನಾಗಿ ಒಂದಿಷ್ಟು ಪ್ರಚಾರ ಪಡೆದುಕೊಂಡಿರುವ ಕರಿಯಪ್ಪನೂ ತನ್ನನ್ನು ಭಾವಿ ಎಂಎಲ್‌ಎ ಎಂದೇ ಕರೆದುಕೊಳ್ಳುತ್ತಿದ್ದಾನೆ. ಮಾವನ ಕುತ್ರಿ ಬುದ್ಧಿಯಿಂದಲೇ ಬಳಗಾನೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರದಿಂದ ಗೆದ್ದಿರುವ ವಿರುಪ್ಸ್‌ನ ಏಕೈಕ ಅಳಿಯ ದೊಡ್ಡ ಬಸವರಾಜನಿಗೂ ಎಂಎಲ್‌ಎ ಆಗುವ ಕನಸೋ ಕನಸು. ಸಿಂಧನೂರುವೊಂದರಲ್ಲೇ ನೂರಾರು ಎಕರೆ ಹೊಲ, ಲಾಡ್ಜ್, ಕಾಂಪ್ಲೆಕ್ಸ್‌ಗಳು, ಮಾರ್ವಾಡಿಯೊಬ್ಬನ ಹೆಸರಲ್ಲಿ ರಿಲೈಯನ್ಸ್ ಪೆಟ್ರೋಲ್ ಬಂಕ್ ಹೊಂದಿರುವ ವಿರುಪ್ಸ್ ಆನಂದ ಹೆಗಡೆ ಎಂಬಾತನಿಗೆ ಸೇರಿದ ಫಾರ್ಮ್ ಹೌಸ್, ಅಶ್ವಿನಿ ಲಾಡ್ಜ್, ಪೆಟ್ರೋಲ್ ಬಂಕ್ ಇತ್ಯಾದಿ 6 ಕೋಟಿ ರೂ.ಗಳ ಆಸ್ತಿ ಖರೀದಿಸಿರುವ ಸುದ್ದಿಯೂ ಇದೆ.

-ಅಶೋಕ್ ನೀಮ್‌ಕರ್

ನಂತರ 2003, ಏಪ್ರಿಲ್ 5ರಂದು ಕೊಪ್ಪಳ ಬಳಿಯ ಭಾಗ್ಯನಗರ ಗ್ರಾಮದ ಹಿರೇಹಳ್ಳದ ದಂಡೆಯಲ್ಲಿ ರಾತ್ರಿ ಖೋಟಾನೋಟಿನ ಮೂಟೆಗೆ ಬೆಂಕಿ ಇಡಲಾಯಿತು. ಆಗ ಅದೇ ಹಳ್ಳದಲ್ಲಿ ರಿಂಗ್ ಬಾಂಡ್ ನಿರ್ಮಿಸಿದ್ದ ಕೊಪ್ಪಳ ನಗರಸಭೆ ನೌಕರರು ಅದೇನೆಂದು ನೋಡಲು ಹೋದಾಗ ಬೆಂಕಿ ಇಟ್ಟವರು ಓಡಿ ಹೋಗಿದ್ದರು. ಬೆಂಕಿ ನಂದಿಸಿ ಬೆಳಿಗ್ಗೆ ನೋಡಿದರೆ ಅರ್ಧರ್ಧ ಸುಟ್ಟ ಖೋಟಾನೋಟುಗಳು. ಅವೆಲ್ಲ ಜೆಕೆ ಬಾಂಡ್‌ನ ಹಾಳೆಯಲ್ಲಿ ಮುದ್ರಣಗೊಂಡ 50,100, 500ರ ಖೋಟಾನೋಟುಗಳಾಗಿದ್ದವು. ಈ ಕೇಸ್ ಪೋಲೀಸರಿಗೆ ಗೊತ್ತಾದರೂ ಏನೂ ಆಗಲಿಲ್ಲ. ಆಗ ಕೊಪ್ಪಳದಲ್ಲಿದ್ದ ಪಿಎಸ್‌ಐ ಪ್ರಕಾಶ ಮುರಗೋಡ ಗದಗಿಗೇ ವರ್ಗಾವಣೆಗೊಂಡು ಅಲ್ಲಿ ಚೀಟರ್ ಮೋನ್ಯಾನೊಂದಿಗೆ ಖೋಟಾನೋಟಿಗೆ ಕೈಹಾಕಿ ಸಿಕ್ಕುಬಿದ್ದು ಸಸ್ಪೆಂಡಾದ. ಅಂದ ಮೇಲೆ ಭಾಗ್ಯನಗರ ಕೇಸನ್ನು ಆತನೇ ಮುಚ್ಚಿ ಹಾಕಿರಬೇಕು.

ನಂತರ ಅದೇ ತಿಂಗಳಲ್ಲಿ ಗಂಗಾವತಿ ತಾಲೂಕಿನ ಜಂತಕಲ್ ಗ್ರಾಮದ ವೆಂಕಣ್ಣ ಶೆಟ್ಟಿ ಎಂಬುವವನನ್ನು ಅನುಮಾನದ ಮೇಲೆ ಪೋಲೀಸರು ಬೆನ್ನತ್ತಿ 5000 ರೂಪಾಯಿಯ ಖೋಟಾನೋಟು ವಶಪಡಿಸಿಕೊಂಡು ಶೆಟ್ಟಿಯನ್ನು, ರುದ್ರ, ಬೆಂಗಳೂರಿನ ಓಂ ಪ್ರಕಾಶ್ ಸತ್ಯನಾರಾಯಣ ಚೌದ್ರಿ, ರಾಜೇಂದ್ರ ಪ್ರಸಾದ್ ಸೇರಿದಂತೆ 10 ಮಂದಿಯನ್ನು ಬಂಧಿಸಿ ಜೈಲಿಗಟ್ಟಿದ್ದರು.

ಬಬ್ಲೂ ಔರ್ ಬಾಳ... ಖೋಟಾಜಾಲ!

ಇದಕ್ಕೂ ಮೊದಲು ಗಂಗಾವತಿಯ ಸೈಯದ್ ಹುಸೇನ್ ಅಲಿಯಾಸ್ ಬಬ್ಲೂ ಕಂಪ್ಯೂಟರ್ ಮೂಲಕ ಸ್ಕ್ಯಾನ್ ಮಾಡಿ ಖೋಟಾನೋಟು ಮುದ್ರಿಸುತ್ತಿದ್ದ ಪ್ರಕರಣ [illegible] ಧಾರವಾಡದಲ್ಲಿ ಓದಲೆಂದು ಹೋದ [illegible] ಈ ವಿದ್ಯೆ ಕಲಿತಿದ್ದ, ಅಗರ್ಭ ಶ್ರೀಮಂತನಾದ [illegible] ಇಂದಿಗೂ ಬಳ್ಳಾರಿ ಜೈಲಿನಲ್ಲಿ ಕೊಳೆಯುತ್ತಿದ್ದಾನೆ.

ಅನಂತರ 2005 ಜುಲೈನಲ್ಲಿ ಖೋಟಾನೋಟು



ಭಾಗ್ಯನಗರದ ಕೆಎಚ್‌ಡಿಸಿ ತರಬೇತಿ ಕೇಂದ್ರದ ಸಮೀಪವೇ ರಾಶಿಯಾಗಿ ಬಿದ್ದಿರುವ ಸುಟ್ಟ ನೋಟುಗಳ ಚೂರುಗಳು

ಜಾಲದಲ್ಲಿ ಕೊಪ್ಪಳದ ಬಾಳಪ್ಪ ಬಾರಕೇರ ಎಂಬುವವನನ್ನು ಗದಗ ಪೋಲೀಸರು ಅರೆಸ್ಟ್ ಮಾಡಿದಾಗ ಇಡೀ ಕೊಪ್ಪಳ ಬೆಚ್ಚಿಬಿದ್ದಿತ್ತು, ಏಕೆಂದರೆ ಹೊರನೋಟಕ್ಕೆ ಮುಗ್ಧನಂತಿದ್ದ ಈತ ಕೆನರಾ ಫೈನಾನ್ಸ್‌ನ ಮ್ಯಾನೇಜರ್ ಆಗಿದ್ದ, ಮತ್ತು ಕಾಂಗ್ರೆಸ್‌ನ ಪದಾಧಿಕಾರಿಯಾಗಿದ್ದ.

ಬಡತನದಲ್ಲಿ ಹುಟ್ಟಿ ಗುಡಿಸಲಲ್ಲಿ ಬೆಳೆದ ಬಿಎಡ್ ಓದಿ ನೌಕರಿ ಸಿಗದೇ ನಗರಸಭೆಗೆ ಸ್ಪರ್ಧಿಸಿ ಸೋತಿದ್ದ ಬಾಳಪ್ಪ 20 ಲಕ್ಷದ ಆಸ್ತಿವಂತ ಆಗಿದ್ದು ಹೇಗೆ ಎಂಬ ಅನುಮಾನಕ್ಕೆ ಉತ್ತರ ಸಿಕ್ಕಿದ್ದು ಆತನ ಖೋಟಾನೋಟು ವ್ಯವಹಾರದಲ್ಲಿ. ಬಾಳಪ್ಪ ಅರೆಸ್ಟ್ ಆದ ಕೂಡಲೇ ಕೊಪ್ಪಳದ ಕೆಲವರು ಕೇರಳ, ತಮಿಳುನಾಡಿನಲ್ಲಿ ತಲೆಮರೆಸಿಕೊಂಡರು. ಬಾಳಪ್ಪ ಜಾಮೀನಿನ ಮೇಲೆ ಹೊರಬಂದ ನಂತರವೇ ಊರಿಗೆ ವಾಪಸ್ಸಾಗಿ ಈಗ ಹಾಯಾಗಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಖೋಟಾನೋಟಿನ ಚರಿತ್ರೆ ಇಷ್ಟಿದ್ದರೂ ಪೋಲೀಸರು ತಲೆ ಕೆಡಿಸಿಕೊಳ್ಳುತ್ತಿಲ್ಲ, ಅನುಮಾನದ ಲಿಸ್ಟ್‌ನಲ್ಲಿದ್ದವರನ್ನು ಹಿಂಬಾಲಿಸುತ್ತಿಲ್ಲ, ಹೀಗಾಗಿ ಗ್ರಾಮೀಣ ಭಾಗದಲ್ಲಿ ಖೋಟಾನೋಟುಗಳು ಓಡಾಡುವಂತಾಗಿದೆ. ಮೊದಲೇ ಬರದಿಂದ ಕಂಗೆಟ್ಟಿರುವ ಜಿಲ್ಲೆಯ ಹಳ್ಳಿಗರಿಗೆ ದುಡಿಮೆ ಸಿಗುವುದೇ ಅಪರೂಪ. ಸಿಕ್ಕರೆ ಅದು ಕೂಲಿ ಹಣದ ರೂಪದಲ್ಲಿ ಖೋಟಾನೋಟು ಬಂದಿರುತ್ತೆ, ಅದು ಗೊತ್ತಾಗಿ ನಾವು ಬಡವರು ನಮಗ್ಯಾಕೆ ಬೇಕು ಇದೆಲ್ಲ ಅಂತ ಆ ನೋಟುಗಳನ್ನು ಹರಿದು ಹಾಕಿ ಇನ್ನೊಬ್ಬರ ಮುಂದೆ ಹೇಳಲು ಸುಮ್ಮನಾಗುತ್ತಾರೆ.



ಗೋವಾಗೆ ದುಡಿಯಲು ಹೋಗಿ ಏಡ್ಸ್ ಹಚ್ಚಿಕೊಂಡು ಬಂದ ಗಂಡಸರು ಒಂದೆಡೆ ಆದರೆ, ಸಿಕ್ಕ ಕೂಲಿಯ ಹಣವೂ ಖೋಟಾ ನೋಟಿನ ರೂಪದಲ್ಲಿ ಕೊಚ್ಚಿಕೊಂಡು ಹೋಗುವುದು ಹೆಂಗಸರ ಗೋಳು ಮತ್ತೊಂದೆಡೆ. ಒಟ್ಟಿನಲ್ಲಿ ಇಲ್ಲಿನ ಹಳ್ಳಿಗಳ ಬಡವರ ಬದುಕು ಹೇಳತೀರದು. ಪೋಲೀಸರಿಗೆ ತಮ್ಮ ಇಲಾಖೆ ಬಗ್ಗೆ ಗೌರವ ಇದ್ದರೆ ಕೂಡಲೇ ಖೋಟಾನೋಟಿನ ಜಾಲ ಭೇದಿಸಬೇಕು ಎಲ್ಲರೂ ಖಂಡಿತ ಸಿಕ್ಕಿ ಬೀಳುತ್ತಾರೆ. ಅದಕ್ಕಿಂತ ಹೆಚ್ಚಾಗಿ ಕಳ್ಳರ ಬಗ್ಗೆ ಪೋಲೀಸರಿಗೆ ಹೆಚ್ಚಿಗೆ ಹೇಳುವುದೇನಿದೆ?


-ವರದಿಗಾರ

ಬಡ್ಡಿ ಮಕ್ಕಳ ಕೆಲಸವೇ....

ಜಿಲ್ಲೆಯ ಪೋಲೀಸರು ಖೋಟಾನೋಟಿನ ಕುರಿತು ಸಿಗುವ ಎಳೆಯನ್ನು ಹಿಡಿದು ಸರಿಯಾಗಿ ಹೊರಟರೆ ಆಗ ಸಿಕ್ಕಿ ಬೀಳುವುದು ನೂರಕ್ಕೆ 10-15 ರಂತೆ ಬಡ್ಡಿಗೆ ಸಾಲ ಕೊಡುವವರು. ಖಾಸಗಿಯಾಗಿ ಬಡ್ಡಿ ವ್ಯವಹಾರ ಮಾಡುವ ಕೆಲವರು ಬಡವರಿಗೆ ಸಾಲ ನೀಡುವಾಗ ಖೋಟಾನೋಟು ಬೆರೆಸಿ ನೀಡುತ್ತಾರೆ. ಅದು ಗೊತ್ತಾದಾಗ ಸಾಲ ಪಡೆದವನು ಹೆದರಿ ಸುಟ್ಟು ಹಾಕಿ ಸುಮ್ಮನಾಗುತ್ತಾನೆ. ಬಡ್ಡಿಗೆ ಕೊಟ್ಟವನು ಅಸಲು ಸಮೇತ ಬೇಕು ಅನ್ನುತ್ತ ಗುರ್ ಅನ್ನುತ್ತಾನೆ.

ಹಿಂದೆ ತಾವರಗೇರಿಯಲ್ಲಿ ಸಿಕ್ಕಿಬಿದ್ದ ಶಂಕ್ರಯ್ಯ ಕೂಡಾ ಬಡ್ಡಿ ವ್ಯವಹಾರಿ. ಸ್ವಲ್ಪ ಸಮಯದಲ್ಲೇ ಶ್ರೀಮಂತನಾಗಿ ಊರಿಗೆಲ್ಲಾ ಸಾಲ ಅಂತ ಖೋಟಾನೋಟು ಕೊಟ್ಟಿದ್ದ. ಇವನಂತವನೇ ಜುಲೈಯಲ್ಲಿ ಸಿಕ್ಕಿಬಿದ್ದ ಬಾಳಪ್ಪ ಕೂಡಾ ಬಡ್ಡಿ ವ್ಯವಹಾರಿ. ಬಾಳಪ್ಪ ಅರೆಸ್ಟ್ ಆದಾಗ ಅವನ ಗೆಳೆಯ ಮತ್ತು ಬಡ್ಡಿ ವ್ಯವಹಾರಿಯೊಬ್ಬ ಅರೆಸ್ಟ್ ಆಗಬೇಕಿತ್ತು. ಆದರೆ [illegible] ಕೆಲ ಬಡ್ಡಿಯವರು ಇದರಲ್ಲಿ [illegible] ಬಚಾವಾಗಿದ್ದಾರೆ. [illegible] ಯಾಕೋ ಮನಸ್ಸು ಮಾಡುತ್ತಿಲ್ಲ. ಖೋಟಾ [illegible]

ಲಂಕೇಶ್ 71: ಶುಭ್ರ ಮನಸುಗಳ ಕಾಮನಬಿಲ್ಲು!



ಅವತ್ತು ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 5ಕ್ಕೆ ಕಾಮನಬಿಲ್ಲು ಮೂಡಲಾರಂಭಿಸಿತ್ತು. ರಾಜ್ಯದ ಎಲ್ಲ ಭಾಗಗಳ ಜನರಿಂದ ಕಲಾಕ್ಷೇತ್ರ ಕಿಕ್ಕಿರಿದಿತ್ತು. ಅಲ್ಲಿ ಲಂಕೇಶ್ ಇದ್ದರು-ಮೌಲ್ಯಗಳಿಗಾಗಿ ಹೋರಾಟ ಮಾಡುವ ಮನಸುಗಳಲ್ಲಿ... ಅಲ್ಲಿ ಇತಾ ಕೂಡ ಇದ್ದರು-ಆರೋಗ್ಯಕರ ನಾಳೆಗಳಿಗಾಗಿ ತುಂಬಲಿಸುವ ಕನಸುಗಳನ್ನು ಕಾಣಿಕೊಂಡ ಹೊಳಪಿನ ಕಣ್ಣುಗಳ ಆಳದಲ್ಲಿ....



ಮಾರ್ಚ್ 8 ರಂದು ನಡೆದ 'ಲಂಕೇಶ್ 71' ಮತ್ತು 'ಲಂಕೇಶ್ ಚಿತ್ರ ಪ್ರಶಸ್ತಿ' ಸಮಾರಂಭ ವಿಭಿನ್ನ ವಯಸ್ಸಿನ, ವಿಭಿನ್ನ ಹೋರಾಟಗಳ ಜನರ ಸಮಾಗಮದಿಂದ ವೈವಿಧ್ಯಮಯವಾಗಿತ್ತು. ಆ ವೈವಿಧ್ಯತೆಯಲ್ಲೂ 'ಲಂಕೇಶ್ ಆಶಯಗಳು' ಎಂಬ ಒಂದಂಶ ಮಾತ್ರ ಎದ್ದು ಕಾಣುತ್ತಿತ್ತು. ಕಳೆದ ವರ್ಷ ಆದೇ ದಿನದಂದು ಎಡಿಎ ರಂಗಮಂದಿರದಲ್ಲಿ ಗೌರಿ ಲಂಕೇಶ್ ಆರಂಭಿಸಿದ 'ಲಂಕೇಶ್' ವಾರಪತ್ರಿಕೆ ಎಂಬ ಆಂದೋಲನ ಮೊನ್ನೆ ಯಶಸ್ಸಿನ ಮೊದಲ ಹಂತ ದಾಟಿ ನವಚೇತನದಲ್ಲಿ ಮುನ್ನುಗುತ್ತಿರುವುದು ಸಮಾರಂಭಕ್ಕೆ ಬಂದಿದ್ದವರೆಲ್ಲರ ಮುಖದಲ್ಲೂ ಭಾಸವಾಗುತ್ತಿತ್ತು.

ಎಚ್.ಎಸ್. ದೊರೆಸ್ವಾಮಿಯವರಂತಹ ಹಿರಿಯ ಹೋರಾಟಗಾರರು, ರೈತ, ದಲಿತ, ಕನ್ನಡ ಹಾಗೂ ಕಮ್ಯುನಿಸ್ಟ್ ಚಳವಳಿಗಳ ಮಿತ್ರರೆಲ್ಲ ಸೇರಿದ್ದ ಸಭೆ ಅಕ್ಷರಶಃ ವರ್ಣರಂಜಿತವಾಗಿತ್ತು. ಏಕೆಂದರೆ ಹಸಿರು ಟವೆಲ್‌ಗಳು, ಕೆಂಪು ಮನಸುಗಳು, ಕನ್ನಡ ಧ್ವಜದ ಕೆಂಪು-ಹಳದಿ ವರ್ಣದ ಕೊರಳುಪಟ್ಟಿಗಳೆಲ್ಲವೂ ಇದ್ದವಲ್ಲ.. 'ಔಟ್‌ಲುಕ್'ನ ಸುಗತರಾಜುರಿಂದ ಹಿಡಿದು ಕಲಘಟಗಿ ತಾಲೂಕು ಬಸವನಕೊಪ್ಪದ ಯುವ ರೈತ ಬಸು ಪಾಟೀಲ್‌ವರೆಗೆ ವಿವಿಧ ವೃತ್ತಿಗಳಲ್ಲಿನ ಜನ ಸ್ವಯಂಪ್ರೇರಿತರಾಗಿ ಬಂದು ಸಂಭ್ರಮಿಸಿದ್ದು 'ಲಂಕೇಶ್' ಯಶಸ್ಸಿನ ಪ್ರತೀಕದಂತಿತ್ತು.



ಪಿ. ಲಂಕೇಶ್ ಎದುರೇ ಕುಳಿತು ತಮ್ಮೆಲ್ಲರೊಂದಿಗೆ ಮಾತಾಡುತ್ತಿದ್ದಾರೇನೋ ಎಂಬ ಭಾವ ಮೂಡಿತ್ತು. ಸಭೆಗೆ ಮೊದಲು ಲಂಕೇಶರೊಂದಿಗೆ ಕೆ. ರಾಮದಾಸ್ ನಡೆಸಿದ್ದ ಸಂದರ್ಶನ-ಸಂವಾದದ ವಿಡಿಯೋ ಪ್ರದರ್ಶನ ಬಂದಿದ್ದವರಿಗೆಲ್ಲ ಲಂಕೇಶ್ ಮುಖಾಮುಖಿಯಾದ ಅನುಭವ ನೀಡಿತು. ಕಳೆದ ವರ್ಷದ ಸಕಲ ಕಷ್ಟಗಳ ನಡುವೆಯೂ 'ಲಂಕೇಶ್' ಬೆಳೆದು ಯಶಸ್ವಿಯಾದ ಹಾದಿಯನ್ನು ವಿವರಿಸಿದ ಗೌರಿ ಮಾತು ಆರಂಭಿಸಿ, ನಂತರ ಪತ್ರಿಕೆ ಯಶಸ್ಸಿನ ಸಂತೋಷಕ್ಕೆ ಒಳಗಾಗಿ ಸಭಿಕರಿಗೆಲ್ಲ ಆಪ್ತರೆನಿಸಿದರು. 'ಲಂಕೇಶ್ ಮೌಲ್ಯಗಳು', ವ್ಯವಸ್ಥೆ ವಿರುದ್ಧದ ಲಂಕೇಶ್‌ರ ಹೋರಾಟ ಕುರಿತು ಎಚ್.ಎಲ್. ಕೇಶವಮೂರ್ತಿ, ಸದ್ಯದ ರಾಜಕೀಯ, ಸಾಮಾಜಿಕ ಗೊಂದಲಗಳು ಹಾಗೂ ಜನಸಾಮಾನ್ಯರ ಮುಂದಿನ ಗುರಿಗಳ ಕುರಿತು ಪ್ರೊ. ಕೆ. ರಾಮದಾಸ್ ಮಾತನಾಡಿದರು. ಗೌರಿ ಲಂಕೇಶ್‌ರ ಮೊದಲ ಕನ್ನಡ ಅನುವಾದ ಕೃತಿ (ದರವೇಶಿ ಕತೆಗಳು)ಯನ್ನು ರಂಗಕರ್ಮಿ ಪ್ರಸನ್ನ, ಬಿ. ಚಂದ್ರೇಗೌಡರ 'ಲೈಬ್ರರಿಯಲ್ಲಿ ಕಂಡ ಮುಖ' ಕಾದಂಬರಿಯನ್ನು ಕೆ. ರಾಮದಾಸ್ ಬಿಡುಗಡೆ ಮಾಡಿದ್ದು ಅರ್ಥಪೂರ್ಣವಾಗಿತ್ತು.

ಲಂಕೇಶ್ ಮೇಷ್ಟ್ರ ಆಶಯದಂತೆ ವರ್ಷದುದ್ದಕ್ಕೂ ವಿರೋಧ ಪಕ್ಷವಾಗಿ ಏಕಾಂಗಿ ಹೋರಾಟ ನಡೆಸಿದ 'ಲಂಕೇಶ್' ವಾರಪತ್ರಿಕೆ ಕರ್ನಾಟಕದ ಜನತೆಯ ಆಶಯಗಳು, ಲಂಕೇಶ್‌ರ ಮೌಲ್ಯಗಳು ಹಾಗೂ ಕನಸುಗಳನ್ನು ಸಾಕಾರಗೊಳಿಸುವ ಹಾದಿಯಲ್ಲಿ ಸಾಗುವ ದೃಢ ನಿರ್ಧಾರದೊಂದಿಗೆ ಎರಡನೇ ವರ್ಷಕ್ಕೆ ಕಾಲಿಡುತ್ತಿದೆ.

ಸಭೆಗೆ ಬಂದು ಪ್ರೀತಿ, ಅಭಿಮಾನ, ನೈತಿಕ ಬೆಂಬಲಗಳ ಮಹಾಪೂರ ಹರಿಸಿದ ನಾಡಿನ ಹಿರಿಯರು, ವಿವಿಧ ಚಳವಳಿಗಳ ಕಾರ್ಯಕರ್ತರು, ಮಹಿಳೆಯರು, ಹೊಸ ತುಡಿತಗಳ ಯುವಕರೆಲ್ಲರಿಗೂ 'ಲಂಕೇಶ್' ಬಳಗ ಮನದುಂಬಿ ವಂದಿಸುತ್ತಿದೆ. ನಿಮ್ಮ ಬೆಂಬಲ, ಸಹಕಾರ, ಸಹಭಾಗಿತ್ವ ಸದಾ ಹೀಗೇ ಇರಲೆಂದು ಆಶಿಸುತ್ತೇವೆ.

-'ಲಂಕೇಶ್' ಬಳಗ

'ಹರ್ಬರ್ಟ್' ಸಂಚಲನ....



ವ್ಯವಸ್ಥೆಯ ವಿರುದ್ಧದ ಜನಸಾಮಾನ್ಯರ ಆಕ್ರೋಶ, ಹೋರಾಟಗಳನ್ನು ವಿಭಿನ್ನ ಶೈಲಿಯಲ್ಲಿ ಸಂವೇದನಾತ್ಮಕವಾಗಿ ವಿವರಿಸುವ 'ಹರ್ಬರ್ಟ್' ಬಂಗಾಳಿ ಚಿತ್ರದ ಯುವ ನಿರ್ದೇಶಕ ಸುಮನ್ ಮುಖ್ಯೋಪಾಧ್ಯಾಯ ಅತ್ಯುತ್ತಮ ಚೊಚ್ಚಲ ನಿರ್ದೇಶನಕ್ಕಾಗಿ 'ಲಂಕೇಶ್ ಚಿತ್ರ ಪ್ರಶಸ್ತಿ' ಪಡೆದರು. ಮುಖ್ಯೋಪಾಧ್ಯಾಯಗೆ ಸನ್ಮಾನಿಸಿ ಮಾತಾಡಿದ ಕವಿತಾ ಲಂಕೇಶ್ ಕಳೆದ ವರ್ಷದಿಂದ ಆರಂಭಿಸಿರುವ ಈ ಪ್ರಶಸ್ತಿ ಯುವ ನಿರ್ದೇಶಕರಿಗೆ ನೈತಿಕ ಸ್ಥೈರ್ಯ ನೀಡಲಿ ಎಂದು ಆಶಿಸಿದರು.

ಚಿತ್ರ ಬಿಡುಗಡೆಯಿಂದ ಇಂದಿನವರೆಗೂ ಪಶ್ಚಿಮ ಬಂಗಾಳ ಸರ್ಕಾರದ ಅವಕೃಪೆಗೆ ಒಳಗಾಗುತ್ತ ಬಂದಿರುವ ನಿರ್ದೇಶಕ ಸುಮನ್ ಮುಖ್ಯೋಪಾಧ್ಯಾಯ "ಈ ಚಿತ್ರ ಮಾಡಿ ಸ್ಥಳೀಯ ವ್ಯವಸ್ಥೆಯ ವಿರೋಧ ಎದುರಿಸುತ್ತಿರುವ ಈ ಸಂದರ್ಭದಲ್ಲಿ 'ಲಂಕೇಶ್'ರವರ ಹೆಸರಲ್ಲಿ ನನಗೆ ಈ ಪ್ರಶಸ್ತಿ ನೀಡಿ ನೈತಿಕ ಧೈರ್ಯ ತುಂಬಿದ್ದೀರಿ. ಲಂಕೇಶರಂತಹ ಮೇಧಾವಿ ಹೆಸರಲ್ಲಿ ಈ ಪ್ರಶಸ್ತಿ ಪಡೆಯುತ್ತಿರುವುದು ನನಗೆ ಹೆಮ್ಮೆ ನೀಡಿದೆ..." ಎಂದು ಹೇಳಿದರು.

ವ್ಯವಸ್ಥೆಯ ವಿರುದ್ಧದ ಲಂಕೇಶ್‌ರ ಹೋರಾಟದ ಆಶಯಗಳನ್ನು ಪ್ರತಿಪಾದಿಸುವ 'ಹರ್ಬರ್ಟ್' ಚಿತ್ರಕ್ಕೆ ಪ್ರಶಸ್ತಿ ದೊರಕಿದ್ದು ಅರ್ಥಪೂರ್ಣವಾಗಿತ್ತು. ಸಭೆ ನಂತರ ಚಿತ್ರ ವೀಕ್ಷಿಸಿದ ಬಹುತೇಕರ ಅಭಿಪ್ರಾಯ ಕೂಡ ಇದೇ ಆಗಿತ್ತು.

ನರ್ತನದಿಂದ ಬೇಹುಗಾರಿಕೆಯುತ್ತ ಪಯಣ

-ಜೆ. ಬಾಲಕೃಷ್ಣ



ಆಕೆ ಜರ್ಮನಿಗೆ ಬೇಹುಗಾರಿಕೆ ಮಾಡುತ್ತಿದ್ದಾಳೆ ಎಂದು ಫ್ರಾನ್ಸಿನ ಸೇನೆ ಮತ್ತು ಪೋಲೀಸ್‌ಗೆ ಸಂಶಯ ಬರತೊಡಗಿತು. ಆಕೆಯ ಚಲನವಲನಗಳ ಮೇಲೆ ನಿಗಾ ಇರಿಸತೊಡಗಿದರು. ಆಕೆ ಎಲ್ಲಿ ಹೋದರೂ ಹಿಂಬಾಲಿಸಲು ಪ್ರಾರಂಭಿಸಿದರು.

ಮಾತಾ ಹರಿ ಆರ್ಥಿಕವಾಗಿ ಸಾಕಷ್ಟು ಸುಧಾರಿಸಿದ್ದಳು. ಸದಾ ಒಬ್ಬರಲ್ಲ ಮತ್ತೊಬ್ಬರು ಸಿರಿವಂತ ಗಂಡಸರು ಜೊತೆಗಿರುತ್ತಿದ್ದರು. ಅವಳಿಗೆ ತನ್ನ ಗಂಡನ ನೆನಪು ಕಾಡುತ್ತಿರಲಿಲ್ಲ, ಆತ ಆಕೆಗೆ ನೀಡಿದ್ದ ಮಾನಸಿಕ, ದೈಹಿಕ ಹಿಂಸೆ, ಯಾತನೆಗಳನ್ನು ಆಕೆ ಮರೆಯುವಂಥವಲ್ಲ, ಆದರೆ ಆಕೆಗೆ ಸದಾ ತನ್ನ ಮಗಳ ನೆನಪು ಕಾಡುತ್ತಿತ್ತು. ನೋನ್ ಈಗ ಹೇಗಿರಬಹುದು? ಅವಳಿಗೀಗ ಹದಿಮೂರು ವರ್ಷ, ಆಕೆ ಎಷ್ಟು ಬೆಳೆದಿರಬಹುದು? ಅವಳಿಗೂ ನನ್ನ ನೆನಪು ಬರುತ್ತಿರಬಹುದೆ? ಇಂಥದೇ ಹತ್ತು ಹಲವಾರು ಯೋಚನೆಗಳು ಮಾತಾ ಹರಿಯನ್ನು ಕಾಡುತ್ತಿದ್ದವು. ಗಂಡನ ಜೊತೆಗಿದ್ದಾಗ ಒಂದು ರೀತಿಯ ಹಿಂಸೆಯಾದರೆ, ಈಗ ಅವನನ್ನು ತೊರೆದ ನಂತರ ಮತ್ತೊಂದು ರೀತಿಯ ಹಿಂಸೆ. ಹಗಲೂ ರಾತ್ರಿ ತನ್ನ ಮಗಳ ಬಗ್ಗೆ ಚಿಂತಿಸುತ್ತಿದ್ದಳು, ಹೇಗಾದರೂ ಅವಳನ್ನು ಭೇಟಿ ಮಾಡಲು ತವಕಿಸುತ್ತಿದ್ದಳು. ಮಗಳಿಗಾಗಿ ಹಲವಾರು ಪತ್ರಗಳನ್ನು ಬರೆದಳು. ಆದರೆ ಆ ಪತ್ರಗಳ್ಯಾವುವೂ ನೋನ್‌ಳನ್ನು ತಲುಪಲೇ ಇಲ್ಲ. ರುಡಾಲ್ಫ್ ಅವುಗಳನ್ನು ತೆರೆದೂ ಸಹ ನೋಡದೆ, ಮಗಳಾದ ನೋನ್‌ಳ ಕೈಗೆ ಸಿಗದಂತೆ ಎಲ್ಲವನ್ನೂ ಮಾತಾ ಹರಿಗೇ ಹಿಂದಿರುಗಿಸುತ್ತಿದ್ದ.

ಮಾತಾ ಹರಿ ಎಷ್ಟು ಹತಾಶಳಾದಳೆಂದರೆ, ಹೇಗಾದರೂ ಮಾಡಿ ನೋನ್‌ಳನ್ನು ಭೇಟಿಯಾಗಲೇಬೇಕು ಎಂದು ನಿರ್ಧರಿಸಿದಳು. ಮಾತಾ ಹರಿಯ ಕೆಲಸಗಾರರಲ್ಲಿ ಆನಾ ಲಿಂಟೆನ್ಸ್ ಎಂಬ ಯುವತಿಯಿದ್ದಳು. ಆಕೆಯೂ ಸಮಾಜದ ದೃಷ್ಟಿಯಲ್ಲಿ ಕೆಳಗೆ ಬಿದ್ದ ಹೆಂಗಸಾಗಿದ್ದಳು. ಆನಾಳಿಗೆ ಮದುವೆಗೆ ಮೊದಲೇ ಮಗುವಾಗಿದ್ದುದರಿಂದ ಆಗಿನ ಸಿಪುಮಗಳಂತೆ ಆಕೆ ಮದುವೆಯಾಗುವಂತೆಯೇ ಇರಲಿಲ್ಲ. ಇಬ್ಬರೂ ಬದುಕಲ್ಲಿ ನೋವು ತಿಂದವರೇ ಆದುದರಿಂದಲೋ ಏನೋ ಮಾತಾ ಹರಿ ಮತ್ತು ಆನಾ ಆತ್ಮೀಯರಾಗಿದ್ದರು. ಆನಾಳಲ್ಲಿ ಮಾತಾ ಹರಿ ತನ್ನ ಅಳಲು ತೋಡಿಕೊಂಡಳು. ಹೇಗಾದರೂ ತನ್ನ ಮಗಳನ್ನು ನೋಡಬೇಕು. ಅವಳೊಂದಿಗೆ ಕೆಲ ಕಾಲ ಕಳೆಯಬೇಕೆಂಬ ತನ್ನ ಆಸೆ ತೋಡಿಕೊಂಡಳು.

ತನ್ನ ಮಗಳನ್ನು ಭೇಟಿಯಾಗಲು ಮಾತಾ ಹರಿ ಯೋಜನೆಯೊಂದನ್ನು ರೂಪಿಸಿದಳು. ಅದರಂತೆ ರುಡಾಲ್ಫ್ ಮತ್ತು ನೋನ್ ವಾಸಿಸುತ್ತಿರುವ ವೆಲ್ಪ್ ನಗರಕ್ಕೆ ಆನಾ ಹೋಗುವುದು. ಅಲ್ಲಿ ನೋನ್‌ಳ ಶಾಲೆಯ ಬಳಿ ಹೋಗಿ ಆಕೆ ಶಾಲೆಯಿಂದ ಹೊರಬರುತ್ತಿರುವಂತೆ ಆಕೆಯನ್ನು ಭೇಟಿ ಮಾಡಿ ವಿಷಯ ತಿಳಿಸಿ, ಆಕೆಯನ್ನು ಕರೆದುಕೊಂಡು ಟ್ಯಾಕ್ಸಿಯೊಂದನ್ನು ಹಿಡಿದು ಆಮ್‌ಸ್ಟರ್‌ಡ್ಯಾಂ ತಲುಪಿ ಕೂಡಲೇ ಅಲ್ಲಿಂದ ಟ್ರೈನಿನಲ್ಲಿ ಪ್ಯಾರಿಸ್ ತಲುಪುವುದು.

ಆ ಯೋಜನೆಯಂತೆ ಆನಾ ವೆಲ್ಪ್ ನಗರ ಸೇರಿದಳು. ನೋನ್ ಓದುತ್ತಿದ್ದ ಶಾಲೆಯನ್ನು ಗುರುತಿಸಿ ಶಾಲೆ ಬಿಡುವ ಸಮಯಕ್ಕಾಗಿ ಹೊರಗೆ ಕಾದು ನಿಂತಳು. ಶಾಲೆಯ ಗಂಟೆ ಹೊಡೆದಂತೆ ನೋನ್ ಹೊರಬಂದಳು. ಆನಾ ಇನ್ನೇನು ಹೋಗಿ ಅವಳನ್ನು ಭೇಟಿ ಮಾಡಬೇಕು ಎನ್ನುವಷ್ಟರಲ್ಲಿ ರುಡಾಲ್ಫ್ ತನ್ನ ಮಗಳನ್ನು ಕರೆದೊಯ್ಯಲು ಅಲ್ಲಿಗೆ ಬಂದ. ಮಾತಾ ಹರಿ ಮತ್ತು ಆನಾಳ ಯೋಜನೆಯೆಲ್ಲಾ ತಲೆಕೆಳಗಾಯಿತು. ಹೇಗಾದರೂ ಮಾತನಾಡಿ ಮಗಳಿಗೆ ತಾಯಿಯ ವಿಷಯ ತಿಳಿಸೋಣವೆಂದು ಆನಾ ಹೋಗಿ ರುಡಾಲ್ಫ್‌ನನ್ನೇ ಮಾತನಾಡಿಸಿದಳು. ನೋನ್‌ಳಿಗಾಗಿ ಪ್ಯಾರಿಸ್ಸಿನಿಂದ ಉಡುಗೊರೆಯನ್ನು ತಂದಿರುವುದಾಗಿಯೂ, ಆಕೆಯೊಂದಿಗೆ ಮಾತನಾಡಲು ಅವಕಾಶ ಕೊಡಬೇಕೆಂದೂ ಕೇಳಿಕೊಂಡಳು. ಪ್ಯಾರಿಸ್ಸಿನಿಂದ ಎಂದಾಕ್ಷಣ ರುಡಾಲ್ಫ್‌ನಿಗೆ ಯಾರಿಂದ ಎಂಬುದು ತಿಳಿದುಹೋಯಿತು. ಕೂಡಲೇ ಆನಾಳನ್ನು ಬೈದು ಮತ್ತೆಂದೂ ಇಂತಹ ಸಾಹಸಕ್ಕೆ ಕೈ ಹಾಕಬೇಡವೆಂದು ತಿಳಿಸಿ ಓಡಿಸಿದ. ಆನಾ ಬರಿಗೈಲಿ ಹಿಂದಿರುಗಿದಳು; ಮಾತಾ ಹರಿಯ ಖಿನ್ನತೆ ಮತ್ತಷ್ಟು ಹೆಚ್ಚಾಯಿತು.

ಆ ದಿನ 1914ರ ಮೇ 23. ಜರ್ಮನಿಯ ಸಂಗೀತ ಸಭಾಂಗಣವೊಂದರಲ್ಲಿ ಮಾತಾ ಹರಿಯ ನೃತ್ಯ ಪ್ರದರ್ಶನವಿತ್ತು. ಜನ ಎಂದಿನಂತೆ ಕಿಕ್ಕಿರಿದಿದ್ದರು. ಆಕೆಯ ನಗ್ನ ನೃತ್ಯವನ್ನು ಎಲ್ಲರೂ ಆನಂದಿಸಿದರು. ಆದರೆ ನಗ್ನತೆಯನ್ನು ನಿರೀಕ್ಷಿಸದ ಕೆಲವರಿಗೆ ಆಕೆಯ ನೃತ್ಯ ಅಶ್ಲೀಲವೆನ್ನಿಸಿತು. ಅವರು ಅಷ್ಟಕ್ಕೆ ಸುಮ್ಮನಾಗಲಿಲ್ಲ, ಕಾರ್ಯಕ್ರಮದ ಮಧ್ಯದಲ್ಲಿಯೇ ಹೋಗಿ ಪೋಲೀಸರಿಗೆ ದೂರು ನೀಡಿದರು. ಅಲ್ಲಿಗೆ ಬಂದ ಪೋಲೀಸ್ ಅಧಿಕಾರಿ ಗ್ರೀಬೆಲ್ ಮಾತಾ ಹರಿಯ ನೃತ್ಯ ನೋಡಿದ, ಮಬ್ಬುಗತ್ತಲಿನಲ್ಲಿನ ಆಕೆಯ ನಗ್ನ ದೇಹದ ಸೌಂದರ್ಯ ನೋಡಿ ಆವಾಕ್ಕಾದ. ಕಾರ್ಯಕ್ರಮ ಮುಗಿಯುವವರೆಗೂ ನೃತ್ಯ ನೋಡಿ ಆನಂದಿಸಿ ನಂತರ ಆಕೆಯನ್ನು ಭೇಟಿಯಾದ, ಆಕೆಯ ಸ್ನೇಹ ಬಯಸಿದ. ಆದರೆ ಕೆಲ ದಾಖಲೆಗಳು ಹೇಳುವಂತೆ ಗ್ರೀಬೆಲ್ ಚಿತ್ರದಲ್ಲಿ ಇರಲೇ ಇಲ್ಲ, ಆತನ ಬದಲಿಗೆ ಆತನ ಹಿರಿಯ ಅಧಿಕಾರಿ ಟ್ರಾಗಟ್ ವಾನ್ ಜಾಗೋ ಮಾತಾ ಹರಿಯ ಗೆಳೆಯನಾದ. ಈ ವಾನ್ ಜಾಗೋ ಜರ್ಮನಿಯ ಬೇಹುಗಾರಿಕೆಯ ಮುಖ್ಯಸ್ಥನಾಗಿದ್ದ. ಯಾವತ್ತು ಎಂದು ಮಾತಾ ಹರಿ ವಾನ್ ಜಾಗೋನ ಸಮವಸ್ತ್ರಕ್ಕೆ ಮರುಳಾದಳೋ ಅಂದೇ ಬೇಹುಗಾರಿಕೆಯ ಚಕ್ರವ್ಯೂಹಕ್ಕೆ ಸಿಲುಕಿಕೊಂಡಳು. ಇಲ್ಲಿಂದ ಮಾತಾ ಹರಿಯ ಬದುಕಿನ ದಾಖಲೆಗಳು ಎಲ್ಲವೂ ಅಸ್ಪಷ್ಟ.

ವಾನ್ ಜಾಗೋನ ಸೂಚನೆಯಂತೆ ಮಾತಾಳನ್ನು ಬೆಲ್ಜಿಯಂನ ಆಂಟ್ವೆರ್ಪ್‌ನಲ್ಲಿನ ಬೇಹುಗಾರಿಕೆಯ ಶಾಲೆಗೆ ತರಬೇತಿಗೆಂದು ಕಳುಹಿಸಲಾಯಿತು. ಜರ್ಮನಿಯ ಪರ ಆಕೆ ಫ್ರಾನ್ಸ್‌ನಲ್ಲಿ ಬೇಹುಗಾರಿಕೆ ಮಾಡಬೇಕಾಗಿತ್ತು. ಆಂಟ್ವೆರ್ಪ್‌ನ ಬೇಹುಗಾರಿಕೆಯ ತರಬೇತಿ ಶಾಲೆ ಬಹಳ ಕುಖ್ಯಾತವಾಗಿತ್ತು, ಅದನ್ನು ನಡೆಸುತ್ತಿದ್ದವಳು ಎಲ್ಸಬೆತ್ ಶ್ಯಾಗ್‌ಮುಲ್ಲರ್. ಎಲ್ಲರೂ ಅವಳನ್ನು ಫ್ರಾಲೀನ್ ಡಾಕ್ಟರ್ ಎಂದು ಕರೆಯುತ್ತಿದ್ದರು. ದಷ್ಟಪುಷ್ಟವಾಗಿದ್ದ ಆಕೆ ಅತ್ಯಂತ ಗಡುಸು ಹೆಂಗಸಾಗಿದ್ದಳು. ಆಕೆ ತನ್ನ ಕಲ್ಲು ಹೃದಯ, ಅಸಾಧಾರಣ ದೈಹಿಕ ಶಕ್ತಿ ಸಾಮರ್ಥ್ಯಕ್ಕೆ ಹೆಸರಾಗಿದ್ದಳು.

'ವರ್ಷದ ಸಾಧನೆ'

ಕಳೆದ ವರ್ಷ (2005) ಮಾರ್ಚ್ 8 ರಂದು ಎಡಿಎ ರಂಗ ಮಂದಿರದಲ್ಲಿ 'ಲಂಕೇಶ್' ಬಿಡುಗಡೆಯಾದಾಗಲೂ ಜನರು ಕಿಕ್ಕಿರಿದ್ದರು. ಅಂದು ಕುತೂಹಲಕ್ಕೆಂದು ಬಂದವರಿಗಿಂತ, ಕೇವಲ 21 ದಿನಗಳ ಕೆಳಗೆ ತನ್ನ ಅಪ್ಪ ಹುಟ್ಟು ಹಾಕಿದ್ದ ಪತ್ರಿಕೆಯ ಸಂಪಾದಕಿ ಸ್ಥಾನದಿಂದ ಹೊರ ಹಾಕಲ್ಪಟ್ಟ, ಸಂಬದ್ಧ ಪ್ರಜಾತಾಂತ್ರಿಕ ಮೌಲ್ಯಗಳ ವಿಚಾರದಲ್ಲಿ ರಾಜಿ ಮಾಡಿಕೊಳ್ಳದೆ ಇದ್ದುದರಿಂದ ತೀವ್ರ ಒತ್ತಡಗಳಿಗೆ ಸಿಲುಕಿದ್ದ ನಕ್ಸಲೀಯ ಬೆಂಬಲಿಗರೆಂಬ ಹಣೆಪಟ್ಟಿಯನ್ನು ಸರ್ಕಾರ/ಸಂಘ ಪರಿವಾರದಿಂದ ಹೊರಿಸಲ್ಪಟ್ಟಿದ್ದ ಗೌರಿ ಲಂಕೇಶ್ ಮತ್ತು ಬಳಗಕ್ಕೆ ಒಂದು ರೀತಿಯ ಬೆಂಬಲ ತೋರಿಸಲು ಬಂದದ್ದು ಎದ್ದು ಕಾಣುತ್ತಿತ್ತು. ಈ ಪತ್ರಿಕೆಯು ಗಟ್ಟಿಯಾಗಿ ನಿಲ್ಲುತ್ತದೆ ಎಂಬುದು ಅಂದೇ ಖಚಿತವಾಯಿತು.

ಈ ಬಾರಿಯ ವರ್ಷದ ಕಾರ್ಯಕ್ರಮ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದಾಗ ಇಷ್ಟು ಸಂಖ್ಯೆಯಲ್ಲಿ ಪತ್ರಿಕೆಯ ಹಿತೈಷಿಗಳು ಬರಬಹುದು ಎನಿಸಿರಲಿಲ್ಲ. ಏಕೆಂದರೆ ಕಾರ್ಯಕ್ರಮದ ತಯಾರಿ ಅಷ್ಟಿರಲಿಲ್ಲ. 'ಮಾರ್ಚ್ 8 ರ ಕಾರ್ಯಕ್ರಮಕ್ಕೆ ಇನ್ವಿಟೇಷನ್ಸ್ ಪೋಸ್ಟ್ ಮಾಡಬೇಕಿದೆ, ಯಾರಾದ್ರೂ ಬಂದು ಸಹಾಯ ಮಾಡ್ತೀರಾ' ಎಂಬ ಕರೆ 'ಲಂಕೇಶ್' ಕಚೇರಿಯಿಂದ ಬಂದಾಗ ಇಬ್ಬರು ಮೂವರು ಬರ್ತೀವಿ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದ ನಾನು ಆ ಕಡೆ ತಲೆಯೇ ಹಾಕಿರಲಿಲ್ಲ. ಹಿಂದಿನ ದಿನ ಪತ್ರಿಕೆಯ ಕಚೇರಿಯಲ್ಲಿ ಆಹ್ವಾನ ಪತ್ರಿಕೆಗಳು ಸಾಕಷ್ಟು ಹಾಗೆಯೇ ಉಳಿದಿದ್ದವು. ಆದರೂ ಕಲಾಕ್ಷೇತ್ರ ತುಂಬುವಷ್ಟು ಜನರನ್ನು ಎಳೆದು ತಂದ ಈ 'ವರ್ಷದ ಸಾಧನೆ' ಏನು ಎಂಬುದನ್ನು ತೋರಿಸುತ್ತದೆ.

ನೋಡ ನೋಡುತ್ತಿದ್ದಂತೆಯೇ ಮುಗಿದು ಹೋದ ಒಂದು ವರ್ಷದ ಕೊನೆಯಲ್ಲಿ 52 ಸಂಚಿಕೆಗಳನ್ನೂ ತಿರುವುತ್ತಾ ಹೋದರೆ ಕೈಗೆ ತಡಕುವ ಸಾಧನೆಯೆಂದರೆ 'ನಿಜವಾದ ವಿರೋಧ ಪಕ್ಷವಾಗಿ' 'ಲಂಕೇಶ್' ಕೆಲಸ ನಿರ್ವಹಿಸಿದ್ದು. ವರ್ಷದುದ್ದಕ್ಕೂ ಅಧಿಕಾರ ನಡೆಸಿದ ಸಮ್ಮಿಶ್ರ ಸರ್ಕಾರ ಮತ್ತು ವರ್ಷದ ಕೊನೆಯಲ್ಲಿ ಅಧಿಕಾರ ಹಿಡಿದ ಸಮ್ಮಿಶ್ರ ಸರ್ಕಾರದ ಸ್ವರೂಪವನ್ನು ನೋಡಿದರೆ ಸಮಕಾಲೀನ ಕರ್ನಾಟಕದ ರಾಜಕೀಯದಲ್ಲಿ ವಿರೋಧ ಪಕ್ಷವೆಂಬುದಿಲ್ಲ ಎಂಬುದು ಮತ್ತಷ್ಟು ಸ್ಪಷ್ಟವಾಗಿದೆ. 'ಲಂಕೇಶ್' 2-3 ಕಂತುಗಳಲ್ಲಿ ವರದಿ ಮಾಡಿದ 'ಬಿಡಿಎ ಸೈಟು ಹಗರಣ'ದಲ್ಲಿ ಎಲ್ಲ ಪಕ್ಷದವರೂ ಪಾಲುದಾರರು ಎಂಬುದು ಇದಕ್ಕೆ ಇನ್ನೊಂದು ನಿದರ್ಶನ. ಮೈತ್ರಿ ಸರ್ಕಾರಗಳ ಜನದ್ರೋಹಿ ರಾಜಕಾರಣ, ಚಳವಳಿಗಳ ನಾಯಕರುಗಳ ಅವ್ಯವಹಾರಗಳು, ಬಾಬಾ ಬುಡನ್‌ಗಿರಿ ಕುರಿತ ವರದಿಗಳು ಇವೆಲ್ಲವೂ ಲಂಕೇಶ್ ಪರಂಪರೆಯ ಮುಂದುವರಿಕೆಗಳಾಗಿ ವರ್ಷದುದ್ದಕ್ಕೂ ಬಂದು ಹೋಗಿವೆ.



ಆದರೆ ಕಳೆದ 15 ವರ್ಷಗಳ ಜಾಗತೀಕರಣ ನೀತಿಗಳು ಭಾರತದಂತಹ ದೇಶಗಳಲ್ಲಿ 'ವಿರೋಧ ಪಕ್ಷದ' ಪಾತ್ರಕ್ಕೆ ಬೇರೊಂದು ಅನಿವಾರ್ಯ ಆಯಾಮವನ್ನು ಸೃಷ್ಟಿಸಿವೆ. ಉದಾರೀಕರಣದ ಪ್ರಾರಂಭದ ವರ್ಷಗಳಲ್ಲಿ ಅಷ್ಟು ಸ್ಪಷ್ಟ ನಿಲುವಿಗೆ ಎಲ್ಲರೂ ಬರಲಾಗಲಿಲ್ಲವೆಂಬುದು ಹೌದಾದರೂ, ಇಂದು ವಿಶ್ವಬ್ಯಾಂಕ್ ಒಳಗೊಂಡಂತೆ ಯಾರೂ ಸಮರ್ಥಿಸಲಾಗದ ಮಟ್ಟಕ್ಕೆ ಅದರ ಪರಿಣಾಮಗಳು ವ್ಯಾಪಿಸಿವೆ. ಕೋಮುವಾದದ ಬಗ್ಗೆ, ಅಧಿಕಾರ ರಾಜಕಾರಣದಲ್ಲಿ ಭ್ರಷ್ಟತೆ ಮತ್ತು ಗೋಸುಂಬೆತನದ ಬಗ್ಗೆ ಅತ್ಯಂತ ನಿಷ್ಠುರ ನಿಲುವನ್ನು ಹೊಂದಿದ್ದ ಲಂಕೇಶರೂ ಸಹ ಜಾಗತೀಕರಣದ ಬಗ್ಗೆ ಇನ್ನೂ ಒಂದು ಖಚಿತ ನಿಲುವಿಗೆ ಬಂದಿರಲಿಲ್ಲ. ಆ ಮಟ್ಟಿಗೆ 'ಲಂಕೇಶ್' ವಾರ ಪತ್ರಿಕೆಯು ಲಂಕೇಶರ ಮರುಹುಟ್ಟು ಎಂದೇ ನನಗನ್ನಿಸುತ್ತದೆ.

ಕೋಮುವಾದಿಗಳ ಬಗೆಗೆ ಲಂಕೇಶರು ತೆಗೆದುಕೊಂಡ ನಿಲುವು ಎಷ್ಟು ಅಚಲವಾಗಿರುತ್ತಿತ್ತೆಂದರೆ, ಗೊಂದಲದ ಸಂದರ್ಭ ಉಂಟಾದಾಗ ಬುದ್ಧಿಜೀವಿಗಳೆನಿಸಿಕೊಂಡ ಹಲವರು ಹಿಂದುತ್ವದ ವಾದಸರಣಿಯ ಜೊತೆ ಕೆಲವೊಮ್ಮೆ ತೇಲಿ ಹೋಗಿಬಿಡುತ್ತಿದ್ದಾಗ, ಲಂಕೇಶರ ಸ್ಪಷ್ಟ ಮತ್ತು ನಿಷ್ಠುರ ಪ್ರತಿಪಾದನೆಯು ನನ್ನಂತಹವರಿಗೆ ಎಲ್ಲ ಗೊಂದಲವನ್ನು ನಿವಾರಿಸಿಬಿಡುತ್ತಿತ್ತು. ಆದರೆ ಇಂದಿನ ಮಟ್ಟಿಗೆ ಕೋಮುವಾದದ ಜೊತೆಗೆ ಜಾಗತೀಕರಣದ ಬಗ್ಗೆಯೂ ಯಾವ ನಿಲುವನ್ನು ತೆಗೆದುಕೊಳ್ಳುತ್ತೇವೆಂಬುದು ಒಂದು ಲಿಟ್ಮಸ್ ಪರೀಕ್ಷೆಯೇ ಆಗಿದೆ. ಆ ಲಿಟ್ಮಸ್ ಪರೀಕ್ಷೆಯಲ್ಲಿ ಪಾಸಾಗುವುದೆಂದರೆ ನಿಜವಾದ ವಿರೋಧ ಪಕ್ಷದ ಸ್ಥಾನದಲ್ಲಿದ್ದಂತೆ. ಪ್ರಜಾತಂತ್ರವನ್ನು ಗಟ್ಟಿಗೊಳಿಸುವ ಭಿನ್ನ ದನಿಯಾದಂತೆ. ಇರಾಕ್ ಬಗ್ಗೆ, ಬುಷ್ ಬಗ್ಗೆ, ಬಹುರಾಷ್ಟ್ರೀಯ ಕಂಪೆನಿಗಳು ಪೊಲೀಸ್ ಠಾಣೆಗಳನ್ನು ಕಟ್ಟಿಸುತ್ತಿರುವುದರ ಬಗ್ಗೆ, ಇನ್ನೂ ಹಲವು ವಿಚಾರಗಳ ಬಗ್ಗೆ ಗೌರಿ ಲಂಕೇಶರು ಬರೆದ 'ಕಂಡ ಹಾಗೆ' ಅಂಕಣದ ಸಾಲುಗಳು, ಕೆಎಸ್‌ಆರ್‌ಟಿಸಿ, ಪ್ರೋಸ್ಟ್ರವಾ್ರನ್/ ಗಾರ್ಮೆಂಟ್ ಕಾರ್ಮಿಕರ ಬಗ್ಗೆ ಬಂದ ಲೇಖನಗಳು 'ಲಂಕೇಶ್' ಅನ್ನು ಈ ಲಿಟ್ಮಸ್ ಪರೀಕ್ಷೆಯಲ್ಲಿ ಪಾಸು ಮಾಡಿವೆ. ಹೊಸ ಸಂದರ್ಭದ ವಿರೋಧ ಪಕ್ಷವಾಗಿ 'ಲಂಕೇಶ್' ರೂಪುಗೊಂಡಿದೆ. ಆ ಮೂಲಕ ಗೌರಿ, ಲಂಕೇಶರಿಗೆ ಮರುಹುಟ್ಟು ನೀಡಿದ್ದಾರೆ. ಇದು ವರ್ಷದ ನಿಜವಾದ ಸಾಧನೆಯೆಂದು ಲಂಕೇಶರ ಪತ್ರಿಕೆಯಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿದ ನನ್ನಂತಹವನಿಗೆ ಅನಿಸುತ್ತದೆ.

'ಲಂಕೇಶ್‌ಗೊಬ್ಬ ಜೊತೆಗಾರ'ನಾಗಿ ಬಂದಿರುವ 'ಗ್ರೈಡ್' ಸಂಸ್ಥೆಯನ್ನು ಇನ್ನಷ್ಟು ಭದ್ರವಾಗಿ ನಿಲ್ಲಿಸಿರಬಹುದೇನೋ? ಆದರೆ ಜೊತೆಗಾತಿಯಾಗಿ 'ನೀಲು' ಬರಲಿ; ಅದಕ್ಕಿಂತ ಮುಖ್ಯವಾಗಿ ಲಿಟ್ಮಸ್ ಪರೀಕ್ಷೆಯಲ್ಲಿ ಪಾಸಾಗಿರುವ ಗೌರಿ ಲಂಕೇಶ್, ಮರುಹುಟ್ಟು ಪಡೆದುಕೊಂಡಿರುವ 'ಲಂಕೇಶ್' ಕರ್ನಾಟಕದ ನಿಜವಾದ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಲೇ ನಮ್ಮೆಲ್ಲರ ಸೌಹಾರ್ದದ, ಪ್ರಜಾತಂತ್ರದ ಚಳವಳಿಗೆ ಒಂದಷ್ಟು ಬಿಡುವು ಮಾಡಿಕೊಳ್ಳಲಿ ಎಂದು 'ವರ್ಷದ ಸಾಧನೆ'ಯ ಸಂಭ್ರಮದಲ್ಲಿ ಭಾಗಿಯಾಗಿರುವ ನಮ್ಮಗಳ ಆಶಯವಾಗಿದೆ.

-ಡಾ. ಎಚ್.ವಿ. ವಾಸು



5

ಸ್ಪೈ ಸುಂದರಿ ಮಾತಾ ಹರಿ

...ನವೊಂದಕ್ಕೆ ನಿರಂತರ ಇಪ್ಪತ್ತು ಗಂಟೆ ದುಡಿಯಬಲ್ಲ ...ಾಮರ್ಥ್ಯ ಆಕೆಗಿತ್ತು. ಆಕೆಯ ತರಬೇತಿ ಶಾಲೆಯಲ್ಲಿ ...ಿಣ ಶಿಸ್ತಿನ ನಿಯಮ ಪಾಲಿಸಬೇಕಾಗುತ್ತಿತ್ತು. ಆಕೆ ...ಧಿಸುತ್ತಿದ್ದ ಶಿಸ್ತಿನ ನಿಯಮಗಳಿಂದಾಗಿ ಆಕೆಯನ್ನು ...ಂಪು ಹುಲಿ ಮತ್ತು ಹುಲಿಯ ಕಣ್ಣವಳು ಎಂದು ...ರೆಯುತ್ತಿದ್ದರು. ಮಾತಾ ಹರಿಯ ಮೇಲೆ ...ೇಹುಗಾರಿಕೆಯ ಆರೋಪ ಹೊರಿಸಿದವರು ಹೇಳುವಂತೆ ...ಕೆ ಇಲ್ಲಿ ಹದಿನೈದು ವಾರಗಳ ಕಾಲ ಬೇಹುಗಾರಿಕೆಯ ...ರಬೇತಿ ಪಡೆದಳು ಹಾಗೂ ಅವಳಿಗೆ ಎಚ್ 21 ...ಂಬ ಸಂಕೇತದ ಹೆಸರು ನೀಡಲಾಯಿತು. ಅಲ್ಲಿ ಆಕೆಗೆ ...ೂಢಲಿಪಿಗಳು, ಸಂಕೇತಗಳು, ಅವುಗಳನ್ನು ಬಿಡಿಸುವ ...ಗೆ, ರಾಸಾಯನಿಕಗಳು, ಅವುಗಳ ಬಳಕೆ ಹಾಗೂ ...ಯಾರಿಕೆ, ನಕ್ಷೆಗಳು, ಚಾರ್ಟ್‌ಗಳು ಹಾಗೂ ಫೋಟೋಗಳ ...ಧ್ಯಯನ, ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು, ...ತ್ರುಗಳು ಬಳಸುವ ಶಸ್ತ್ರಗಳ ಅಧ್ಯಯನ, ಇತ್ಯಾದಿಗಳನ್ನು ...ಲಿಸಲಾಯಿತು. ದಕ್ಷ ಗೂಢಚಾರರು ಶತ್ರುಗಳ ಕೈಗೆ ...ಕ್ಕಿ ಹಾಕಿಕೊಂಡಲ್ಲಿ ಅವರಿಗೆ ಅಲ್ಲಿ ಸಿಗುವ ನಿರ್ದಯ ...ಕ್ಷೆಯ ಬಗ್ಗೆಯೂ ಹೇಳಿ ತೀವ್ರ ಎಚ್ಚರಿಕೆ ನೀಡಲಾಗಿತ್ತು.

ಇದೆಲ್ಲಾ ಎಷ್ಟರಮಟ್ಟಿಗೆ ಸತ್ಯ ಎಂಬುದು ಯಾರಿಗೂ ...ಿದಿಲ್ಲ. ಸಾಂದರ್ಭಿಕ ಆಧಾರಗಳಂತೆ ಮಾತಾ ಹರಿ ... ಬೇಹುಗಾರಿಕೆ ಶಾಲೆಯಲ್ಲಿ ಕಾಲೇ ಇರಿಸಿರಲಿಲ್ಲ. ...ಸಾಯುವವರೆಗೂ ಅದನ್ನೇ ಹೇಳುತ್ತಿದ್ದಳು.

ಮೊದಲ ವಿಶ್ವಯುದ್ಧದ ಸಮಯವದು. ಫ್ರಾನ್ಸ್ ...ತ್ತು ಜರ್ಮನಿಯ ಮಧ್ಯೆ ಸಂಘರ್ಷ ಹೆಚ್ಚಾಗುತ್ತಿತ್ತು. ...ುದ್ಧ ಪ್ರಾರಂಭವಾದ ಎರಡು ದಿನಗಳಲ್ಲೇ ಆಕೆ 1914ರ ...ಗಸ್ಟ್ 4ರಂದು ಜರ್ಮನಿ ತೊರೆದು ಹೊರಟಳು. ...ರ್ಮನಿಯ ಪೋಲೀಸರು ಗುಮಾನಿಯಿಂದ ...ಕೆಯನ್ನು ಕಟ್ಟುನಿಟ್ಟಾಗಿ ಗಮನಿಸಿಕೊಳ್ಳುತ್ತಿದ್ದರು. ಆಕೆ ...ಹಲವಾರು ವರ್ಷಗಳಿಂದ ಫ್ರಾನ್ಸ್‌ನಲ್ಲಿ ಇದ್ದುದರಿಂದ ...ಳನ್ನು ಫ್ರೆಂಚ್ ಗೂಢಚಾರಿಣಿಯೆಂದುಕೊಳ್ಳುತ್ತಾರೆಂದು ಹೆದರಿದ ...ತಾ ಹರಿ ಸ್ವಿಟ್ಜರ್‌ಲ್ಯಾಂಡ್‌ಗೆ ಹೋದಳು. ಅಲ್ಲಿ ಪಾಸ್‌ಪೋರ್ಟ್ ವಿಷಯದಲ್ಲಿ ತೊಂದರೆಗೆ ಸಿಲುಕಿ ಆಕೆಯನ್ನು ಮತ್ತೆ ಜರ್ಮನಿಗೇ ವಾಪಸ್ ಕಳುಹಿಸಲಾಯಿತು. ಅಲ್ಲಿಂದ ಆಮ್‌ಸ್ಟರ್‌ಡ್ಯಾಂಗೆ ಹೋದಳು. ಯುದ್ಧ ನಡೆಯುತ್ತಿರುವಂತೆ ಹಲವಾರು ಬಾರಿ ಪ್ಯಾರಿಸ್ ಮತ್ತು ಹಾಲೆಂಡ್ ಮಧ್ಯೆ ಓಡಾಡಬೇಕಾಯಿತು.

ಪ್ರೇಮದ ರಾಜಧಾನಿಯಾಗಿದ್ದ ಪ್ಯಾರಿಸ್ ಈಗ ಯುದ್ಧದ ರಾಜಧಾನಿಯಾಗಿತ್ತು. ಯುದ್ಧದ ಕರಾಳ ಛಾಯೆ ಇಡೀ ಯೂರೋಪನ್ನು ಆವರಿಸಿತ್ತು. ಪ್ರತಿಯೊಬ್ಬರೂ ಮತ್ತೊಬ್ಬರನ್ನು ಗುಮಾನಿಯಿಂದ ನೋಡುವಂತಾಗಿತ್ತು. ಎಲ್ಲಿ ತಮ್ಮ ನಡುವೆ ಗೂಢಚಾರರಿರುವರೋ ಎಂಬ ಸಂಶಯ ಎಲ್ಲರನ್ನೂ ಕಾಡತೊಡಗಿತ್ತು. ಅಂತಹ ಅಪನಂಬಿಕೆಯ ವಾತಾವರಣದಲ್ಲಿ ಇತ್ತೀಚೆಗಷ್ಟೆ ಜರ್ಮನ್ ಇನಿಯನನ್ನು ಇಟ್ಟುಕೊಂಡಿದ್ದ ಮಾತಾ ಹರಿಯನ್ನು ಗುಮಾನಿಯಿಂದ ನೋಡತೊಡಗಿದರು. ಆಕೆ ಜರ್ಮನಿಗೆ ಬೇಹುಗಾರಿಕೆ ಮಾಡುತ್ತಿದ್ದಾಳೆ ಎಂದು ಫ್ರಾನ್ಸಿನ ಸೇನೆ ಮತ್ತು ಪೋಲೀಸ್‌ಗೆ ಸಂಶಯ ಬರತೊಡಗಿತು. ಆಕೆಯ ಚಲನವಲನಗಳ ಮೇಲೆ ನಿಗಾ ಇರಿಸತೊಡಗಿದರು. ಆಕೆ ಎಲ್ಲಿ ಹೋದರೂ ಹಿಂಬಾಲಿಸತೊಡಗಿದರು. ಇದು ಆಕೆಗೆ ತಿಳಿದು ಕಿರಿಕಿರಿಯಾಯಿತು, ಅತಿಯಾದ ಸಿಟ್ಟು ಬಂದಿತು.

ಅದುವರೆಗೂ, ಯಾರೂ ಆಕೆಯನ್ನು ಪ್ರೇಮಿಸಿ ಗೆಳೆಯರಾಗಲು ಮುಂದೆ ಬಂದಿರಲಿಲ್ಲ. ಮಬ್ಬುಗತ್ತಲಿನಲ್ಲಿ ಆಕೆಯ ನಗ್ನ ನೃತ್ಯ ನೋಡಿ ಮೋಹಗೊಂಡು ಆಕೆಯೊಂದಿಗೆ ಮಲಗಲು ಬಂದಿದ್ದರು ಅಥವಾ ಪ್ರಖ್ಯಾತ ನರ್ತಕಿ ಮಾತಾ ಹರಿ ತಮ್ಮ ಇನಿಯಳು ಎಂದು ತೋರಿಸಿಕೊಳ್ಳಲು ಸಂತೋಷಕೂಟಗಳಿಗೆ ತಮ್ಮೊಂದಿಗೆ ಕರೆದೊಯ್ಯಲು ಸಿರಿವಂತರು ಬಂದಿದ್ದರು, ಅಷ್ಟೇ. ಅಂತಹ ಬರಡು ಪ್ರೇಮದ ಮರಳುಗಾಡಿನಲ್ಲೂ ಆಕೆಗೊಂದು ಸಿಹಿನೀರ ಒರತೆ ಸಿಕ್ಕಿತು. ತನ್ನ ಪ್ರೇಮದಾಹವನ್ನು ತಣಿಸಿಕೊಳ್ಳಲು ಬಯಸಿದಳು. ಆತನಲ್ಲಿ ಪ್ರೇಮಿಯನ್ನು ಕಂಡಳೆ, ಇನಿಯನನ್ನು ಕಂಡಳೆ? ಅಥವಾ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸತ್ತು ಹೋಗಿದ್ದ ತನ್ನ ಮಗನನ್ನು ಕಂಡಳೆ?

ಆತನ ಹೆಸರು ವ್ಲದಿಮೀರ್ ಮಸ್ಲೋಫ್. ಆತ ಒಬ್ಬ ರಷಿಯನ್ ಅಧಿಕಾರಿ. ಆತನನ್ನು ಭೇಟಿಯಾದಾಗ ಆಕೆಗೆ ವಯಸ್ಸು ನಲವತ್ತು ವರ್ಷ. ಆತನಿಗೆ ಇಪ್ಪತ್ತೊಂದು!

(ಮುಂದುವರೆಯುತ್ತದೆ....)

ಬದ್ಧತೆಗಾಗಿ ಅಕಾಡೆಮಿಯಲ್ಲಿ ಉಳಿದಿದ್ದೇವೆ....!

ಈಶ ಬರೆದ 'ಕೋ-ಜಾಗಳಾದ ಸಾಹಿತಿಗಳು' ಲೇಖನ ಓದಿ ಸ್ಪಷ್ಟೀಕರಣ ಕೊಡಬೇಕಾಗಿದೆ. ಸಾಹಿತ್ಯ ಅಕಾಡೆಮಿಗೆ ಸಂಬಂಧ ಪಟ್ಟ ಹಾಗೇ ಪ್ರಾಮಾಣಿಕವಾಗಿ ಹೇಳುವುದಾದರೆ ನಾವು ಯಾರು ಬಾಯೋಡಾಟಾ ಹಿಡಿದು ವಿಧಾನಸೌಧ ಸುತ್ತಿ ಹೈರಾಣಾಗಿ, ಮಂತ್ರಿ ಮಹೋದಯರ ಬಾಗಿಲು ತಟ್ಟಿ ಸದಸ್ಯರಾದವರಲ್ಲ. ಮುಕ್ಕಾಲು ಪಾಲು ಅಧ್ಯಕ್ಷರನ್ನು ಒಳಗೊಂಡ ಹಾಗೆ ಮಹಿಳೆಯರೆ ಇರುವ ಸಾಹಿತ್ಯ ಅಕಾಡೆಮಿಯ ಸದಸ್ಯರುಗಳು ಗೂಟದ ಕಾರನ್ನು ಬಿಟ್ಟು ಹೇಗೆ ಇಳಿಯುವುದೆಂದು ಕಾಲು ಹೊಸೆದು ಅಳುವವರಲ್ಲ. ಸಮಚಿತ್ತದಿಂದ, ವಿವೇಕದಿಂದ ಎಲ್ಲರೂ ಇದರ ಕುರಿತು ಹಾಗೇ ಹಲವು ಪ್ರಶ್ನೆಗಳನ್ನು ಹಾಕಿಕೊಂಡೆ ಮುಂದುವರಿದಿದ್ದೇವೆ. ನಮ್ಮ ಇಚ್ಛೆಗೆ ಅನುಗುಣವಾಗಿ ಈಗಿನ ಸರಕಾರ ಕೆಲಸ ಮಾಡಲು ಬಿಡದಿದ್ದರೆ, ಸರ್ಕಾರ ಹಸ್ತಕ್ಷೇಪ ಮಾಡಿದರೆ ಅದರ ವಿರುದ್ಧ ಪ್ರತಿಭಟಿಸಿ ನಾವು ತಕ್ಷಣ ರಾಜೀನಾಮೆ ನೀಡುವುದರ ಬಗ್ಗೆ ಅನುಮಾನೇ ಇಲ್ಲ.

ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರದ ಯಾವುದೇ ಸಂಸ್ಥೆಗಳಿಗೆ ಸರ್ಕಾರದ ಅನುದಾನವಿದೆ ಅಂದಾಕ್ಷಣ ಪಕ್ಷ ಧೋರಣೆಯಿಂದ ಕೆಲಸ ಮಾಡಬೇಕೆಂದು ಎಲ್ಲಿ ಹೇಳಿದ್ದಾರೆ? ಅಕಾಡೆಮಿಯ ಸದಸ್ಯರನ್ನಾಗಿ ಆಯ್ಕೆ ಮಾಡುವಾಗ ನಮ್ಮನ್ನು ಕಾಂಗ್ರೆಸ್‌ದವರೆಂದಾಗಲಿ, ದಳದವರೆಂದಾಗಲಿ ಮಾಡಿರುವುದಿಲ್ಲ. ಸಂವಿಧಾನಿಕ ಚೌಕಟ್ಟಿನಲ್ಲಿ ಪ್ರಜಾಪ್ರಭುತ್ವ ಆಶಯಗಳಿಗೆ ಧಕ್ಕೆ ಬರೆದ ಹಾಗೆ ಕೆಲಸ ಮಾಡುವ ವಿವೇಕ ಮತ್ತು ಬದ್ಧತೆಯುಳ್ಳವರು ಎಂದೇ ಆಯ್ಕೆ ಮಾಡಲಾಗಿದೆ.

ದಿ. 22.3.05 ರ ಹಿಂದಿನ ಸರ್ಕಾರ ಹೊರಡಿಸಿದ ಅಧೀನ ಪ್ರಕಾರ ಅಕಾಡೆಮಿಯ ಸದಸ್ಯರ ಮತ್ತು ಅಧ್ಯಕ್ಷರ ಅವಧಿ ಮೂರು ವರ್ಷ. ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಕೆಲಸ ಮಾಡುವ ಇರಾದೆ ಇರುವ ಸದಸ್ಯರುಗಳೆಲ್ಲ ಈ ಸುತ್ತೋಲೆಯಂತೆ ಕೆಲಸ ಮಾಡುತ್ತಿರುವೆವು. ಕೋ-ಜಾ ಸರ್ಕಾರ ಆದೇಶ ಹೊರಡಿಸಿದರೆ ಒಂದು ಕ್ಷಣವೂ ಅಧಿಕಾರದಲ್ಲಿ ಉಳಿಯುವುದಷ್ಟೇ ಅಲ್ಲ ಅದರ ಧೋರಣೆಯನ್ನು ಪ್ರತಿಭಟಿಸಿ ರಾಜೀನಾಮೆ ನೀಡುವುದರ ಬಗ್ಗೆ ಅನುಮಾನವಿಲ್ಲ.

ಡಾ. ಅಂಬೇಡ್ಕರ್ ಫೋಟೋ ಪ್ರಕರಣದಲ್ಲಿ ನಮ್ಮ ನಮ್ಮ ನೆಲೆಯಲ್ಲೇ ಪ್ರಾಮಾಣಿಕವಾಗಿ ಪ್ರತಿಭಟಿಸಿದ್ದೇವೆ. ಜಾಗತಿಕ ದಗಾಕೋರ, ನರಹಂತಕ ಬುಷ್‌ನನ್ನು ರತ್ನಕಂಬಳಿ ಹಾಸಿ ಬರಮಾಡಿಕೊಂಡ ಕಾಂಗ್ರೆಸ್ ಪಕ್ಷ ಮತ್ತು ಅದಕ್ಕೆ ಮೌನವಾಗಿ ಸಮ್ಮತಿ ನೀಡಿ ಸಂಭ್ರಮಿಸುತ್ತಿರುವ ರಕ್ತಬೀಜಾಸುರ ಕೋಮುವಾದಿ ಪಕ್ಷ ಎರಡೂ ಒಂದೇ ನಾಣ್ಯದ ಮುಖಗಳು ಎಂಬ ಸ್ಪಷ್ಟ ಅರಿವು ನಮಗಿದೆ.

ಬಂಡಾಯವೆಂಬುದೊಂದು ಮನೋಭಾವ, ಧೋರಣೆ, ಸಿದ್ಧಾಂತ, ತತ್ವ. ಸಾಮಾಜಿಕ ಬದುಕಿನಲ್ಲಿ ಒಂದು ಗಟ್ಟಿ ವೇದಿಕೆಯನ್ನು ಹುಟ್ಟು ಹಾಕಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿಯ ಪ್ರಜಾ ವಿರೋಧಿ ಕಾರ್ಯಗಳನ್ನು ಪ್ರತಿಭಟಿಸುತ್ತ ಬಂದ ಬದ್ಧತೆ ನಮಗಿದೆ. ಹಗಲುರಾತ್ರಿ ಬಯೋಡಾಟಾ ಹಿಡಿದುಕೊಂಡು ಅವರಿಗೆ ಕಾಣದ ಹಾಗೇ ಇವರಿಗೆ, ಇವರಿಗೆ ಕಾಣದ ಹಾಗೆ ಅವರಿಗೆ ನೀಡಿ ಬಕೆಟು ಹಿಡಿದುಕೊಂಡೆ ನಿಂತಿರುವ ಹಲವರು ದಿಢೀರನೆ ಹುತಾತ್ಮರಾಗಲು ರಾಜೀನಾಮೆ ನೀಡಿದ್ದನ್ನು ಮುಂದೆ ಮಾಡಿ ಎಲ್ಲರನ್ನು ಅನುಮಾನಿಸುವುದು ಸಿನಿಕತನವಾಗುವುದಿಲ್ಲವೆ? ಸಾಂಸ್ಕೃತಿಕ ಲೋಕ ಕೋಮುವಾದಕ್ಕೆ ಬಲಿಯಾಗದಂತೆ ನೋಡಿಕೊಳ್ಳುವ ಅಗತ್ಯ ನಮ್ಮೆಲ್ಲರ ಮೇಲಿದೆ ಎಂಬ ಜವಾಬ್ದಾರಿಯ ಕಾರಣ ಮತ್ತು ಬದ್ಧತೆಯನ್ನು ಉಳಿಸಿಕೊಂಡು ಅಕಾಡೆಮಿಯಲ್ಲಿ ಮುಂದುವರಿದಿದ್ದೇವೆ.

- ವೈದೇಹಿ, ಡಾ. ಮಲ್ಲಿಕಾ ಘಂಟಿ, ಡಾ. ಬಂಜಗೆರೆ ಜಯಪ್ರಕಾಶ್, ಡಾ. ಸವಿತಾ ಭೂಮಿಗೌಡ, ರಾಜಶೇಖರ ಹತಗುಂದಿ, ಡಾ. ಸ್ವಾಮಿರಾವ್ ಕುಲಕರ್ಣಿ, ಡಾ. ಲಕ್ಷ್ಮೀಪತಿ ಕೋಲಾರ, ಲತಾ ರಾಜಶೇಖರ್, ಡಾ. ಶೇಖರ್, ಡಾ. ವೆಂಕಟಗಿರಿ ದಳವಾಯಿ, ಡಾ. ಸ್ವಾಮಿನಾಥ ಬಿದಾದಾರ.

ಲಂಕೇಶ್

ಪ್ರಶಸ್ತಿ ಹೇಳಿದ ಕಥೆಗಳು

ಮಾರ್ಚ್ ಒಂದರ ಸಂಚಿಕೆಯಲ್ಲಿ 'ಲಂಕೇಶ್' ಒಂದು ಸುದ್ದಿ ಪ್ರಕಟಿಸಿತ್ತು. ಪ್ರಶಸ್ತಿಗಳಿಗೆ ಸಂಬಂಧಿಸಿದ ಸುದ್ದಿ ಅದು. ಕೋಮುವಾದಿ-ಜಾತಿವಾದಿ ಪಕ್ಷಗಳು ಅಧಿಕಾರ ಹಿಡಿದಿರುವುದರಿಂದ ಒಂದು ಉಪಯೋಗ ಆಗಿದೆ. ಇದರಿಂದಾಗಿ ಪ್ರಗತಿಪರರೆಲ್ಲ ಒಟ್ಟಿಗೆ ಬರುತ್ತಿದ್ದಾರೆ. ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯಮಟ್ಟದ ಸಭೆಯಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳಲಾಗಿದೆ. ಆ ನಿರ್ಧಾರ ಏನು ಅಂದರೆ 'ಈ ಸರ್ಕಾರ ಹಿಂದೂತ್ವವಾದಿಗಳ ನಿಯಂತ್ರಣದಲ್ಲಿ ಇರುವುದರಿಂದ ಅದು ನೀಡುವ ಯಾವುದೇ ಪ್ರಶಸ್ತಿ ಗೌರವಗಳನ್ನು ಪಡೆಯಬಾರದು' ಎಂಬುದಾಗಿತ್ತು.

ಪಾಪ ಸಂಪಾದಕಿ ಆಶಾವಾದಿ. ಈ ಪ್ರಶಸ್ತಿಗಳು ಎಂತಹ ಆಯಸ್ಕಾಂತ ಶಕ್ತಿಯನ್ನು ಪಡೆದಿವೆ ಎಂಬುದು ಗೊತ್ತಿರಲಿಕ್ಕಿಲ್ಲ. ಇವರು ಬೇಡ ಅಂದರೆ ಅದನ್ನು ಗೌರವಾನ್ವಿತವಾಗಿ ಸ್ವೀಕರಿಸಲು ಸುಸಂಸ್ಕೃತ ಸಾಹಿತಿಗಳ ಸಾಲೇ ವಿಧಾನಸೌಧದ ಎದುರು ಕೈಕಟ್ಟಿ ನಿಂತಿರುತ್ತದೆ! ಈ ಸುದ್ದಿ ಓದಿ ರೋಮಾಂಚನ ಆಗಲಿಲ್ಲ. ಅದಕ್ಕೆ ಇದೂ ಒಂದು ಕಾರಣ. ಇನ್ನೊಂದು ಕಾರಣ ಅಂದರೆ ಈ ಸಂಚಿಕೆ ನನ್ನ ಕೈ ತಲುಪಿದ ಬೆಳಿಗ್ಗೆಯೇ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಂದು ಬಾಕ್ಸ್ ಐಟಮ್ ಸುದ್ದಿ ಓದಿದ್ದೆ. ಅದು ಈ ಪ್ರಶಸ್ತಿ ಕುರಿತಂತೆ ಬಂದಿದ್ದ ಸುದ್ದಿ. ಆ ಸುದ್ದಿ ಏನು ಅಂದರೆ ಸಮಾಜವಾದಿಗಳೂ, ಬಂಡಾಯ ಸಾಹಿತ್ಯ ಸಂಘಟನೆಯ ಪ್ರಮುಖ ರೂವಾರಿಗಳೂ ಆದ ಬಂಡಾಯ ಸಾಹಿತಿ ಎಂದೇ ಗುರುತಿಸಿಕೊಂಡಿರುವವರ ಹೇಳಿಕೆ ಅದು. ಅವರು ಏನು ಹೇಳಿದ್ದರು ಅಂದರೆ "ನನಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುವುದಕ್ಕೆ ಅತೀವ ಸಂತೋಷ ಆಗಿದೆ!"

ಬಂಡಾಯ ಅನ್ನುವುದು ಮಾನಸಿಕ ಸ್ಥಿತಿ. ಅದು ಅಂತರಾಳದಿಂದ ಬರಬೇಕು. ಮೇಲುನೋಟಕ್ಕೆ ಅದು ಬಹಿರಂಗಗೊಂಡರಷ್ಟೇ ಸಾಲದು. ಇಂತಹ ಬಂಡಾಯ ಸಾಹಿತಿಗಳನ್ನು ಕುರಿತೇ ಲಂಕೇಶರು 'ಡಂಬಾಯ ಸಾಹಿತಿಗಳು' ಅನ್ನುತ್ತಿದ್ದುದು.

ಲಂಕೇಶರ 'ಕಲ್ಲು ಕರಗುವ ಸಮಯ' ಕಥಾಸಂಕಲನಕ್ಕೆ 1993ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಅವರು ಪ್ರತಿಕ್ರಿಯಿಸಿದ್ದು ಹೇಗೆ ಅಂದರೆ-ಮೌನ, ದಿವ್ಯಮೌನದಿಂದ. ಆ ಮೌನ ಅಹಂಕಾರದಿಂದ ಬಂದದ್ದಲ್ಲ, ಬಿಗುಮಾನದಿಂದ ಬಂದದ್ದಲ್ಲ, ಹೇಗೆ ಪ್ರತಿಕ್ರಿಯಿಸಬೇಕೆಂಬ ಗೊಂದಲದ್ದು. 'ನನ್ನ ಎಲ್ಲ ಮಾತಿನ ಗದ್ದಲದ ಪ್ರತಿಕ್ರಿಯೆಗಿಂತ ಈ ಮೌನ ಅರ್ಥಪೂರ್ಣ ಎಂದು ತಿಳಿದಿದ್ದೇನೆ' ಅಂದ ಲಂಕೇಶರು ಮುಂದುವರೆದು ಹೇಳುತ್ತಾರೆ- 'ಸಾಹಿತಿ ಮಾತನಾಡುವುದನ್ನು ಕಲಿಯುವುದು ಸುಲಭ. ಬರೆಯಲು ಬಳಕೆಯಾಗಬೇಕಾದ ಮಾತು, ಅನ್ನಿಸಿಕೆ ಭಾಷಣದಲ್ಲಿ ವ್ಯಯವಾಗುತ್ತದೆ. ಆದ್ದರಿಂದ ಸಾಹಿತಿ ಅರ್ಥಪೂರ್ಣ ಮೌನ, ಸಭೆಗಳನ್ನು ದ್ವೇಶಿಸಿ ಮಾತನಾಡಲಾಗದ ಮಾನಸಿಕ ಜಿಪುಣತನ ಬೆಳೆಸಿಕೊಳ್ಳಬೇಕು.'

* * * * * * *

ಈ ವರ್ಷ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯೂ ಪ್ರಶಸ್ತಿ ಪ್ರಕಟಿಸಿದೆ. ಅದರಲ್ಲಿ ಒಬ್ಬರು ಹಿರಿಯ ಸಾಹಿತಿಗಳು. ಅವರು ಅನುವಾದಿಸಿದ ಕೃತಿಗಳಲ್ಲಿ ಕೆಲವನ್ನು ನಾನು ಓದಿದ್ದೇನೆ. ಸೊಗಸಾದ ಅನುವಾದ. ಕೆಲವು ಸಲ ಮೂಲ ಕೃತಿಗಳಿಗಿಂತಲೂ ಅನುವಾದವೇ ಚೆನ್ನಾಗಿದೆ ಅನ್ನಿಸುತ್ತದೆ. ಅವರಿಗೆ ಈ ಪ್ರಶಸ್ತಿ ನೀಡಿರುವುದು ಸಮರ್ಥನೀಯವೇ ಸರಿ.

ಆದರೆ..... ಈ ಪ್ರಶಸ್ತಿಯನ್ನು ಅವರು ನಿರಾಕರಿಸಿದರು! ಬಂಡಾಯ ಸಾಹಿತ್ಯ ಸಂಘಟನೆಯ ಸದಸ್ಯರಲ್ಲದಿದ್ದರೂ ತಿರಸ್ಕರಿಸಿದರು!

ಹೀಗೆ ತಿರಸ್ಕರಿಸಲು ಕಾರಣ ಹಿಂದೂತ್ವದ ಹಿಡಿತದಲ್ಲಿರುವ ಸರ್ಕಾರ ನೀಡುವ ಪ್ರಶಸ್ತಿ ಸ್ವೀಕರಿಸಬಾರದು ಎಂಬುದಲ್ಲ, ಅವರಿಗೆ ಆ ರೀತಿಯ ಮಡಿವಂತಿಕೆಯೂ ಇಲ್ಲ, ಅದಕ್ಕೆ ಅವರು ನೀಡಿರುವ ಕಾರಣವೇ ಬೇರೆ. 'ನಾನು ಮುವ್ವತ್ತು ವರ್ಷಗಳಿಂದ ಸತತವಾಗಿ ಅನುವಾದ ಸಾಹಿತ್ಯ ಅಕಾಡೆಮಿ ಆಗಬೇಕೆಂದು ಪ್ರಯತ್ನಿಸುತ್ತಿದ್ದೆ. ಅದು ಈಗ ಸಫಲ ಆಗಿದೆ. ನಾನೇ ಪ್ರಶಸ್ತಿ ಸ್ವೀಕರಿಸಿದರೆ ಇವನು ಪ್ರಶಸ್ತಿ ಹೊಡೆದುಕೊಳ್ಳಲೆಂದೇ ಇದಕ್ಕೆ ಪ್ರಯತ್ನಿಸಿದ ಎಂಬ ಆಪಾದನೆ ಬರುತ್ತದೆ. ಆದುದರಿಂದ ನಾನು ಇದನ್ನು ತಿರಸ್ಕರಿಸುತ್ತಿದ್ದೇನೆ.'

ಪ್ರಶಸ್ತಿ ವಿಜೇತ ಸಾಹಿತಿಗಳನ್ನು ಈ ಹಿರಿಯರೇ ಹಿಂದೊಮ್ಮೆ 'ಪ್ರಶಸ್ತಿ ಪಡೆದುಕೊಂಡವರು,' 'ಪ್ರಶಸ್ತಿ ಹೊಡೆದುಕೊಂಡವರು' ಎಂದು ವಿಂಗಡಣೆ ಮಾಡಿದ್ದರಿಂದ ಇಲ್ಲಿ ಹೊಡೆದುಕೊಂಡರೋ, ಪಡೆದುಕೊಂಡರೋ ಎಂಬುದರ ವಿಶ್ಲೇಷಣೆ ಅನವಶ್ಯಕ. ಇಷ್ಟಕ್ಕೆ ನಿಲ್ಲಿಸಿದ್ದರೆ ಆ ಹಿರಿಯ ಸಾಹಿತಿಗಳ ಮಾತನ್ನು ಅವರವರ ಮನೋಧರ್ಮ ಎಂದು ಹೇಳಿ ಸುಮ್ಮನಿರಬಹುದಿತ್ತು. ಆದರೆ ಅವರು ಮುಂದುವರೆದು ಹೇಳಿದರು- 'ನಾನು ಹೀಗೆ ಪ್ರಶಸ್ತಿ ತಿರಸ್ಕರಿಸುವುದರಿಂದ ಅಕಾಡೆಮಿ ಸದಸ್ಯರ ಮನಸ್ಸಿಗೆ ನೋವುಂಟಾಗಬಹುದು, ಹಾಗಾದರೆ ಏನು ಮಾಡಬೇಕು? ಬೇಕಾದರೆ ಪ್ರಶಸ್ತಿ ಪಡೆಯುತ್ತೇನೆ, ಆದರೆ ಅದರೊಂದಿಗೆ ನೀಡಲಾಗುವ ಹಣ ಮಾತ್ರ ಬೇಡ.' ಆ ಹಣವನ್ನೇನು ಮಾಡಬೇಕು? 'ಅದನ್ನು ಬೇರೆ ಅನುವಾದಕರಿಗೆ ನೀಡಿ!'

ಅಣಕ

ಅಂದರೆ ಪ್ರಶಸ್ತಿ ಒಬ್ಬರಿಗೆ, ಹಣ ಒಬ್ಬರಿಗೆ ಎಂಬ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು. ಇದು ಕೋಮುವಾದಿ-ಜಾತಿವಾದಿ ಸಂಯುಕ್ತ ಸರ್ಕಾರಕ್ಕೆ ಅನುಗುಣವಾಗಿಯೇ ಇದೇ ಅನ್ನಿ. ಪ್ರಶಸ್ತಿ ಯಾರಿಗೆ? ಕೋಮುವಾದಿಗೊ? ಜಾತಿವಾದಿಗೊ? ಹಣ ಇವರಿಬ್ಬರಲ್ಲಿ ಯಾರಿಗೆ ಅನ್ನುವುದನ್ನು ಸ್ಪಷ್ಟಪಡಿಸಿದ್ದರೆ ಚೆನ್ನಾಗಿರುತ್ತಿತ್ತು.

ಇದು ಹೇಗಾದರೂ ಇರಲಿ. ಆ ಸಾಹಿತಿಗಳು ಸಾಕಷ್ಟು ಶ್ರೀಮಂತರು. ಅವರಿಗೆ ಹಣದ ಕೊರತೆ ಇಲ್ಲ, ಆದರೆ ಅವರ ಹೆಸರಿನಲ್ಲಿ ಪ್ರಶಸ್ತಿ ದಾಖಲಾಗಬೇಕು.



ಇದರಿಂದ ಆಗುವ ಪ್ರಯೋಜನವೇನು?

ಹುತಾತ್ಮನಾಗುವ ಬಯಕೆಯನ್ನು ಸಾಹಿತಿಗಳು ಪ್ರಕಟಿಸಿದ್ದರು. ಹಾಗಾಗಲು ಇದು ಪೂರ್ವ ಸಿದ್ಧತೆ!

ಈ ಸಾಹಿತಿಗಳ ಕೆಲವು ಪ್ರೀತಿ ಪಾತ್ರ ಶಿಷ್ಯರು ನಭೂತೋ ನಭವಿಷ್ಯತಿ ಎನ್ನುವಂತೆ ಅಭೂತಪೂರ್ವ ಸಂತಾಪ ಸೂಚಕ ಸಭೆ ನಡೆಸಲು ತುದಿಗಾಲಲ್ಲಿ ನಿಂತಿದ್ದಾರಂತೆ. ಅದಕ್ಕೆ ಪೂರ್ವ ಸಿದ್ಧತೆಗಳೂ ನಡೆದಿವೆಯಂತೆ. ಶ್ರೀಯುತರು ದಿವಂಗತರಾಗುವುದಷ್ಟೇ ಉಳಿದಿರುವುದು ಅಂತೆ! ಹೇಗೂ ಆ ಸಂತಾಪ ಸೂಚಕ ಸಭೆಯಲ್ಲಿ '.... ಶ್ರೀಯುತರಿಗೆ ಕರ್ನಾಟಕ ಅನುವಾದ ಅಕಾಡೆಮಿಯ ಪ್ರಶಸ್ತಿ ದೊರೆಯಿತಾದರೂ ಅದರೊಂದಿಗೆ ನೀಡಲಾಗುವ ಹಣವನ್ನು ಪಡೆಯದ ಸಜ್ಜನಿಕೆ ಅವರದಾಗಿತ್ತು' ಎಂದು ಮುಂತಾಗಿ ಹೇಳಲು ಅವಕಾಶ ಕಲ್ಪಿಸಿದ್ದಾರಲ್ಲ!

ಲಂಕೇಶರ ಜೀವನದಲ್ಲಿಯೂ ಇಂತಹ ಒಬ್ಬ ಸಂತಾಪ ಸೂಚಕ ಪ್ರಚಂಡ ಸಾಹಿತಿ ಬರುತ್ತಾರೆ. ಆತ ಒಬ್ಬ ವೈಸ್ ಛಾನ್ಸಲರ್. ಆತನ ಬಗ್ಗೆ ಲಂಕೇಶ್‌ಗೆ ತಿರಸ್ಕಾರ. ಲಂಕೇಶ್ ಕಾಯಿಲೆ ಮಲಗಿದ್ದಾಗ ಆತನ ಫೋನ್ ಬರುತ್ತದೆ. 'ನಿಮ್ಮನ್ನು ನೋಡಬೇಕಲ್ಲ' ಅನ್ನುತ್ತದೆ ಆ ಕಡೆಯ ದನಿ. ಲಂಕೇಶ್ ದಾಖಲಿಸುತ್ತಾರೆ: 'ಉತ್ತರ ಹೇಳುವುದಕ್ಕೆ ಮುನ್ನ ಯೋಚಿಸಿದೆ. ಈ ತರಹದವರು ಚೆನ್ನಾಗಿ ಮಿಂಚುವುದು ಕಾಯಿಲೆಯ ಬೆಡ್ ಪಕ್ಕದಲ್ಲಲ್ಲ; ಸಂತಾಪ ಸೂಚಕ ಸಭೆಗಳಲ್ಲಿ, ಅಂತಹ ಅವಕಾಶ ಅವರಿಗೆ ಒದಗಿಸದೆ ಕೇವಲ ಕಾಯಿಲೆ ಮಲಗಿದ್ದೆ.'

* * * * * * *

ಶಿಶುನಾಳ ಷರೀಫ ಪ್ರಶಸ್ತಿ ಕೋಲಾಹಲ ಉಂಟು ಮಾಡಿದೆ. ಪಿ. ಕಾಳಿಂಗರಾಯರ ಹೆಸರಿಡಿ ಎಂದು ಕೆಲವು ಸುಗಮ ಸಂಗೀತಿಗಳ ಒತ್ತಡ.

ಈಗ ಯಾಕೆ ಇಂತಹ ಒತ್ತಾಯ? ಪ್ರಶಸ್ತಿ ಸ್ಥಾಪಿತಗೊಂಡಾಗಲೇ ಇದನ್ನು ಪ್ರಸ್ತಾಪಿಸಬಹುದಿತ್ತಲ್ಲ? ಆಗಲೂ ಕಾಳಿಂಗರಾಯರ ಸಂಗೀತ ಪ್ರಸಿದ್ಧಿ ಪಡೆದಿತ್ತಲ್ಲ?

ಉಹುಂ, ಆಗ ಅದು ಸಾಧ್ಯ ಆಗುತ್ತಿರಲಿಲ್ಲ. ಯಾಕೆಂದರೆ ಆಗ ರಾಮಕೃಷ್ಣ ಹೆಗಡೆ ಸರ್ಕಾರ ಇತ್ತು. ನಜೀರ್ ಸಾಬ್, ಬೊಮ್ಮಾಯಿಯಂತಹವರು ಪ್ರಭಾವಶಾಲಿಗಳಾಗಿದ್ದರು. ಅವರ ಒಪ್ಪಿಗೆ ಬೇಕಾಗಿತ್ತು. ಕಾಳಿಂಗರಾಯರ ಹೆಸರು ಈ ಪ್ರಶಸ್ತಿಗೆ ಹೇಗೆ ಸೂಕ್ತ ಎಂಬುದನ್ನು ವಿವರಿಸಿ, ಅವರ ಮನಸ್ಸು ಗೆಲ್ಲಲು ಅವರಿಗೆ ಪಾಪ ಅವಕಾಶವೇ ಇರಲಿಲ್ಲ. ತುರ್ತಾಗಿ ಸುಗಮ ಸಂಗೀತಕ್ಕೆ ಒಂದು ಪ್ರಶಸ್ತಿ ಹೊಡೆದುಕೊಳ್ಳಬೇಕಾಗಿತ್ತು. ಸುಗಮ ಸಂಗೀತಕ್ಕೆ ಬದಲು ಒಂದು ಪ್ರಶಸ್ತಿಯನ್ನು ಜನಪ್ರಿಯ ಸಂಗೀತಕ್ಕೆ ನೀಡಿ ಎಂಬ ಸಲಹೆಯೂ ಪ್ರಜ್ಞಾವಂತರಿಂದ ಬಂದಿತು. ಹಾಗೇನಾದರೂ ಆದರೆ ಜನಪದ ಗಾಯಕರು, ಲಾವಣಿ ಹೇಳುವವರು ಇಂತಹವರೆಲ್ಲ ಲಗ್ಗೆ ಹಾಕಿ ತಮ್ಮ ಕಂಠದಿಂದ ಹೊರಬರುವ ಸುಮಧುರ ಸುಗಮ ಸಂಗೀತ ಹೇಳ ಹೆಸರಿಲ್ಲದ ಹಾಗೆ ಆಗಬಹುದು. ಅವರ ಕಂಠಸಿರಿಯ ಮುಂದೆ ತಾವು ಯಾವ ಸೊಂಪಲು ಎಂದು ಗಾಬರಿಗೊಳಗಾದ ಸುಗಮ ಸಂಗೀತಿಗಳು ಸರ್ಕಾರಕ್ಕೆ ಒಪ್ಪಿಗೆಯಾಗಬಹುದಾದ ಹೆಸರನ್ನು ತಡಕಿ ಶರೀಫರನ್ನು ಎಳೆತಂದು ನಿಲ್ಲಿಸಿದರು. ಸುಗಮ ಸಂಗೀತಕ್ಕೆ ಮೀಸಲಾದ ಪ್ರಶಸ್ತಿ ಹೊಡೆದುಕೊಂಡರು.

ಈಗ ಸರ್ಕಾರ ಬದಲಾಗಿದೆ.

ಜಾತ್ಯತೀತವಾದ ಕೋಮುವಾದಕ್ಕೆ ಬಲಿಯಾಗಿದೆ.

ಶಿಶುನಾಳ ಷರೀಫ ಪ್ರಶಸ್ತಿ ಮತಾಂತರ ಹೊಂದಿ ಪಿ. ಕಾಳಿಂಗರಾವ್ ಪ್ರಶಸ್ತಿ ಆಗಲಿದೆ!

ಹೀಗಿದೆ ಕೋಮುವಾದಿಗಳ ಹುನ್ನಾರ!

-ಎಚ್.ಎಲ್. ಕೇಶವಮೂರ್ತಿ


ವಿಶೇಷಾಂಕ ನಿಜಕ್ಕೂ ವಿಶೇಷವಾಗಿದೆ!

ಲಂಕೇಶ್ ವಿಶೇಷಾಂಕಕ್ಕಾಗಿ ನಾನು ಜಾತಕಪಕ್ಷಿಯಂತೆ ಕಾಯ್ತಾ ಇದ್ದೆ. ಕೊನೆಗೆ ಮಾ. 8 ರಂದು ನನ್ನ ಪ್ರೀತಿಯ ವಿಶೇಷಾಂಕ ನನ್ನ ಕೈ ಸೇರಿತು.

ವಿಶೇಷಾಂಕ ಅತ್ಯಂತ ನಯನ ಮನೋಹರವಾಗಿ ಬಂದಿದೆ. ಪ್ರಬುದ್ಧತೆಯಿಂದ ಕಂಗೊಳಿಸುತ್ತಿದೆ.

ಒಟ್ಟಿನಲ್ಲಿ ಪಿ. ಲಂಕೇಶರ ಅಪಾರ ಅಭಿಮಾನಿ ವೃಂದಕ್ಕೆ ಒಂದು ಚಿರಸ್ಮರಣೀಯ ವಿಶೇಷಾಂಕ ನೀಡಿದ್ದಕ್ಕೆ 'ಲಂಕೇಶ್' ಬಳಗಕ್ಕೆ ತುಂಬ ಹೃದಯದ ನಮನಗಳು.

-ಸ. ಶರಣಪ್ಪ ಪಾಟೀಲ, ಕೊಪ್ಪಳ



'ಲಂಕೇಶ್ 71'ರ ಹುಟ್ಟುಹಬ್ಬದ ಸಂಭ್ರಮ ಹಾಗೂ ಪತ್ರಿಕೆ ಸವೆಸಿದ ಒಂದು ವರ್ಷದ ಹಾದಿಯ ನೆನಪಿನ ಅಂಗಳಕ್ಕೆ ಸಾಕ್ಷಿ ರವೀಂದ್ರ ಕಲಾಕ್ಷೇತ್ರ ಸೀಟುಗಳು ತುಂಬ ಜನಗಳು ಸಿಂಕೀ ತಮ್ಮ ಅಭಿಮಾನ, ಪ್ರೀತಿ ವ್ಯಕ್ತಪಡಿಸಿದ್ದು. ಮೊದಲು ಲಂಕೇಶ್ ಮೇಷ್ಟ್ರು ಸ್ಕ್ರೀನಿನ ಮೇಲೆ ನಡೆಸಿದ ಚರ್ಚೆಗಳು ಅವರು ಇನ್ನು ಬದುಕಿದ್ದಾರೆ ಎಂಬ ಭ್ರಮೆಗೆ ನೂಕಿದಂತಾಯಿತು. ಅವರ ಮಾತುಗಳು, ಅವರಿಗಿದ್ದ ಛಲ, ವೈಚಾರಿಕತೆ, ಚಿಂತನೆ, ವಿಡಂಬನೆ, ಬದಲಾವಣೆಯ ಕನಸುಗಳು ಅಬ್ಬಬ್ಬಾ ಹತ್ತು ತಲೆಯ ರಾವಣನೇ ಬಿಡಿ.



ಇನ್ನು ಗೌರಿ ಪತ್ರಿಕೆ ವರ್ಷ ಸವೆಸಿದ ಹಾದಿ ಹಾಗೂ ಪತ್ರಿಕೆ ಹುಟ್ಟಿದ್ದು, ಬೆಳೆದಿದ್ದು, ಪತ್ರಿಕೆ ಒಬ್ಬರದಲ್ಲ ಸಮುದಾಯದ್ದು ಎಂದು ಹೇಳಿದ್ದು ಸೂಕ್ತವಾಗಿತ್ತು, ಪಾಪ ಕೇಶವಮೂರ್ತಿಯವರು ಅನುವಾದದ ಕವಿಯ ಜಾತಕ ಜಾಲಾಡಿ ಸಾಂತ್ವಾನ ಸೂಚಕದ ವಿಷಯ ಕೆದಕಿ, ಲಂಕೇಶರ ಜೊತೆಯಲ್ಲಿ ಕಳೆದ ಕ್ಷಣಗಳನ್ನು ಮರೆತು, ಅನುವಾದಕನ ಮೇಲಿನ ಸಿಟ್ಟನ್ನೇ ವ್ಯಕ್ತಪಡಿಸಿದ್ದು ವಿಷಯ ಪಲ್ಲಟವಾಗಿತ್ತು. ಪ್ರಸನ್ನರವರು 'ಲಂಕೇಶ್ ನನ್ನ ಗುರುಗಳು, ನನ್ನ ಶಾಲೆ' ಎಂಬ ಅಭಿಮಾನ ಅರೆಬರೆ ಕನ್ನಡದವರು ಮಾತ್ರ ಕನ್ನಡ ಬಳಸೋಕೆ ಸಾಧ್ಯ ಎಂಬ ಮುನ್ನುಡಿ ಕೊಟ್ಟು ಅಲ್ಲಿ ನೆರೆದಿದ್ದ ಅರೆಬರೆ ಕನ್ನಡಿಗರಿಗೆ ಒಂದಿಷ್ಟು ಪ್ರೋತ್ಸಾಹಿಸಿದರು. Next ರಾಮದಾಸ್ ರಣರಂಗ! ಯಾರ್ರಿ ದೇವೇಗೌಡ, ಯಾರ್ರಿ ಕುಮಾರ-ಅಣ್ಣಾ ಎಂದ ದೇವೇಗೌಡರ ಮಾರ್ಜಾಲ ಬುದ್ಧಿ ಹಾಗೂ ಶನಿಸಂತತಿಯ ಬಗ್ಗೆ ತಮ್ಮ ರೋಷವನ್ನು ವ್ಯಕ್ತಪಡಿಸಿ ತಮ್ಮ "ಸಮಕಾಲೀನರು ಒಬ್ಬ ಒಬ್ಬರೇ ಹೊರಟು ಹೋದ್ರು, ಇದ್ದವರು ಬಾಯಿ ಮುಚ್ಚಿಕೊಂಡಿದ್ದಾರೆ" ಎಂಬ ಪ್ರಶ್ನೆ ಹಾಕಿ, ಹಾಗೆ ರಾಜಕೀಯ ವಿಡಂಬನೆ ಮಾಡುತ್ತಾ ಜನ ನಕ್ಕಾಗ ಇದು "ವಾಸ್ತವ" ಎಂದು ಜನರನ್ನು ಎಚ್ಚಿಸುತ್ತಿದ್ದು ಸತ್ಯದಿಂದ ಕೂಡಿತ್ತು, ಇನ್ನು ಬೇಬಿಯ (ಕವಿತಾ) ಮಾತುಗಳು ಸಿಂಪಲ್ ಆಗಿದ್ದು ಪ್ರಶಸ್ತಿ ಕೊಟ್ಟರು. ಲಂಕೇಶ್ ಕಂಡ ಕನಸುಗಳು ಈಡೇರಲಿ. ಹಾಗೆ ವಿಶ್ವ ಮಹಿಳಾ ದಿನಾಚರಣೆಯಂದೇ ಕಂಡ ಕನಸುಗಳು ನೆರವೇರುತ್ತವೆ ಅಂತ ಅನ್ನಿಸಿದೆ. ನಿಮ್ಮ ಪತ್ರಿಕೆ ಹೀಗೆ ಜಯದ ಹಾದಿಯಲ್ಲಿ ಸಾಗಲಿ ಎಂದು ಹಾರೈಸುವ, ನಿಮ್ಮ ಪತ್ರಿಕೆಯ ಬಳಗದ ಸಿಬ್ಬಂದಿಗೂ ಹಾಗೂ ವಾರ ಪತ್ರಿಕೆಯನ್ನು ಸೈಕಲ್ ಮೇಲೆ ಓದುಗನಿಗೆ ಮುಟ್ಟಿಸುವ ಹಸಿವಿನ ಕಂದಮ್ಮಗಳಿಗೂ ನನ್ನ ಕೃತಜ್ಞತೆಗಳು.

ಹೊಗತೆಗಳಿಕೆ

-ಮುತ್ತಣ್ಣ ಪೂಜಾರ್, ಕಪಲಬಾಷು

'ಲಂಕೇಶ್ 71' ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ನಾನು ಮತ್ತು ಬಸವರಾಜ್ ಅರಸರು ಹಿಂದಿನ ಸೀಟನಲ್ಲಿ ಕೂತಿದ್ದೇವು. ರಾಮದಾಸ್‌ರವರು ಚೆನ್ನಾಗಿ ಮಾತನಾಡಿದರು.

-ಡಾ. ಕೆ.ಎಂ. ಶ್ರೀನಿವಾಸಗೌಡ, ಬೆಂಗಳೂರು



'ಹನಿಮೂನ್'ನಲ್ಲಿ ಜಗ್ಗೇಶ್, ಎಸ್. ನಾರಾಯಣ್


'ಹನಿಮೂನ್ ಎಕ್ಸ್‌ಪ್ರೆಸ್' ಚಿತ್ರದ ನಿರ್ಮಾಪಕರು ತಮ್ಮ ಮೊದಲ ಚಿತ್ರದಲ್ಲೇ ಯಾರೂ ಮಾಡದಂತಹ ಒಂದು ಅಪರೂಪದ ದಾಖಲೆಯನ್ನು ನಿರ್ಮಿಸಿದ್ದಾರೆ.

ವಿಷಯವಿಷ್ಟೇ: ಹೈದ್ರಾಬಾದ್‌ನಲ್ಲಿ ನಡೆಯುತ್ತಿರುವ ಈ ಚಿತ್ರದ ಚಿತ್ರೀಕರಣಕ್ಕೆ ಬೆಂಗಳೂರಿನಿಂದ 32 ಜನ ಸಿನಿಮಾ ಪತ್ರಕರ್ತರನ್ನು ವಿಮಾನದಲ್ಲಿ ಕರೆದುಕೊಂಡು ಹೋಗಿದ್ದಾರೆ.

ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇಷ್ಟು ಸಂಖ್ಯೆಯ ಪತ್ರಕರ್ತರನ್ನು ವಿಮಾನದಲ್ಲಿ ಕರೆದುಕೊಂಡು ಹೋದ ಉದಾಹರಣೆ ಇಲ್ಲ. ತನ್ನ ಚೊಚ್ಚಲ ಚಿತ್ರ ನಿರ್ಮಾಣದಲ್ಲೇ ಈ ಸಾಹಸ ಮಾಡಿದ ನಿರ್ಮಾಪಕರ ಹೆಸರು ಎಸ್.ವಿ. ಬಾಬು. ಇವರು ರಾಜಾಜಿನಗರದ ನಿವಾಸಿ.

'ಕೋಟಿ ವೀರ' ಎಂದು ಖ್ಯಾತಿ ಗಳಿಸಿರುವ ಅನೇಕ ನಿರ್ಮಾಪಕರು ಪತ್ರಕರ್ತರನ್ನು ಸೆಟ್‌ಗೆ ಕರೆಸುವುದರಿಂದಲೇ ತಪ್ಪಿಸಿಕೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಎಸ್.ವಿ. ಬಾಬು ವಿಭಿನ್ನ ವ್ಯಕ್ತಿ ಎನಿಸಿಕೊಳ್ಳುತ್ತಾರೆ. ಅಂದಹಾಗೆ ಜಗ್ಗೇಶ್ ಮತ್ತು ಎಸ್. ನಾರಾಯಣ್ ಈ ಚಿತ್ರದ ನಾಯಕರು.

ಶಾಟ್ ಕಟ್



ಡಿನೋ ಮೋರಿಯಾನ ಹೊಸ 'ಜ್ಯೂಲಿ'...

ಬೆಂಗಳೂರ್-ಬಾಯ್, ಕನ್ನಡ 'ಜ್ಯೂಲಿ' ನಾಯಕ ಡಿನೋ ಮೋರಿಯಾ ಈಗ ಹೊಸ 'ಜ್ಯೂಲಿ'ಯೊಂದಿಗೆ ರೋಮ್ಯಾನ್ಸ್ ನಡೆಸಿದ್ದಾನೆ. ಡೋಂಟ್ ವರಿ, ಅವಳು ಬಿಂದಿತಾ ನಮ್ಮ ಪುಟಾಣಿ 'ಜ್ಯೂಲಿ' ರಮ್ಯ ಅಲ್ಲ ಬಿಡಿ. ಜಾನ್ ಅಬ್ರಹಾಂನ ದೈತ್ಯ ತೋಳುಗಳಿಂದ ಹಳೆ ಗೆಳತಿ ಬಿಪಾಶಾ ಬಸು ತಿರುಗಿ ಬರುವುದು ಅಸಾಧ್ಯ ಎಂದು ಮನಗಂಡ ಡಿನೋ ಈಗ ಲಂಡನ್ನಿನಲ್ಲಿ ನಂದಿತಾ ಮೆಹ್ತಾ ಎನ್ನುವ 'ಜ್ಯೂಲಿ'ಯೊಂದಿಗೆ ರೋಮ್ಯಾನ್ಸ್ ನಡೆಸಿದ್ದಾನೆ....

ಹಿಂದಿಯಲ್ಲಿ ಇನ್ನು ಏನೇನು ನಡೆಯುತ್ತೊ? ಅದೆಲ್ಲ ಸದ್ಯಕ್ಕೆ `Raaz' (ರಹಸ್ಯ).....

'ಮೈ'ಸೂರು 'ಮಲ್ಲಿಗೆ' ಬದಲು 'ಕಶ್ಮೀರಾ' ಸೇಬು!

ಕಾಡು 'ಮಲ್ಲಿಗೆ' ಒಲ್ಲೆ ಎಂದಿತು. ಆ ಜಾಗಕ್ಕೆ 'ಕಶ್ಮೀರಾ' (ಕಾಶ್ಮೀರ!) ಸೇಬು ಬಂದು ಕೂತಿತು... **sorry**, ಕೂಡಲಿಲ್ಲ; ತಕತಕ ಪುಟಿಯುತ್ತ ಕುಣಿಯಿತು. ಮಾರಿಷಸ್‌ನಲ್ಲಿ ನಡೆದ ಝೀ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮಲ್ಲಿಕಾ ಶೆರಾವತ್‌ಳನ್ನು ಆಹ್ವಾನಿಸಲಾಗಿತ್ತು. ತನಗೆ, ತನ್ನ ಬಾಡಿಗಾರ್ಡ್‌ಗಳಿಗೆ, ತನ್ನ 'ಪೆಕಿನಿಸ್' ಚಿಕ್ಕಿಗೆಲ್ಲ ಬಿಸಿನೆಸ್ ಕ್ಲಾಸ್ ಏರ್‌ಟಿಕೆಟ್ ಕೇಳಿದ್ದಳು. ಝೀಯವರು "ಊರಿಗೆ ಇವಳೊಬ್ಬೆ ಚರ್ಮ-ಚಕೋರಿ ನಾ?" ಎಂದು ಕಶ್ಮೀರಾ ಶಾ ಎಂಬ ಕಾಶ್ಮೀರ ಸೇಬನ್ನು ಆಹ್ವಾನಿಸಿದರು. ತೆರೆದ ಮನಸ್ಸಿಂದ... **no no...** ತೆರೆದೆದೆಯಿಂದ ಒಪ್ಪಿಕೊಂಡ ಕಶ್ಮೀರಾ ವಸ್ತ್ರ ತ್ಯಾಗದಲ್ಲಿ ಮಲ್ಲಿಕಾಗಿಂತ ತಾನೇನು ಕಡಿಮೆ ಇಲ್ಲ ಎಂದು ಸೇಬನಂತೆ ರಂಗುರಂಗಾಗಿ ಕಾಣಿಸಿಕೊಂಡು ಸಿಹಿ ಹರಡಿ ಬಿಟ್ಟಳು..... ಈಗ ರಾಮ್‌ಗೋಪಾಲ್ ವರ್ಮಾನ ಹೊಸ ತೆಲುಗು ಚಿತ್ರ "ಆ ಅಮ್ಮಾಯಿ" ಚಿತ್ರಕ್ಕೆ ಸೆಲೆಕ್ಟ್ ಆಗಿದ್ದಾಳೆ. ಮಲ್ಲಿಕಾಳ ಮಲ್ಲಿಗೆ ಮೈಯನ್ನು ಬಾಡಿಗಾರ್ಡ್‌ಗಳು ಕಟ್ಟೆಚ್ಚರದಿಂದ ಕಾಯುತ್ತಿದ್ದಾರೆ... ಪ್ರೇಕ್ಷಕರು ಕಶ್ಮೀರಾಳ ಸೇಬು ಮೈಮಾಟ ನೋಡಲು 'ಕಾದು' ಕಾಯ್ದು ಬೆಚ್ಚಗಾಗುತ್ತಿದ್ದಾರೆ... ಇತ್ತ ಲಡಾಕ್‌ನಲ್ಲಿರುವ ಸೈನಿಕರೊಂದಿಗೆ 'ಹೋಲಿ' ಆಡಲು ಮಲ್ಲಿಕಾ ಹೋಗ್ತಿದ್ದಾಳೆ.



ಮೀಟರ್ ಇಲ್ಲದ ಚಿತ್ರರಂಗ

ಚಲನಚಿತ್ರ ಪ್ರಶಸ್ತಿ ಸಮಾರಂಭವು ಗುಲ್ಬರ್ಗಾದಿಂದ ರಾಮನಗರಕ್ಕೆ ಸ್ಥಳಾಂತರಗೊಂಡಿದೆ.

ಕಾರಣ ವೆರಿ ಸಿಂಪಲ್. ಈ ರಾಜ್ಯದ ಮುಖ್ಯಮಂತ್ರಿ ಬದಲಾಗಿರುವುದರಿಂದ. ಹೀಗಾಗಿ ಹೊಸ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಕ್ಷೇತ್ರವಾದ ರಾಮನಗರದಲ್ಲಿ ಚಲನಚಿತ್ರ ಪ್ರಶಸ್ತಿ ಸಮಾರಂಭ ನಡೆಸಲು ವಾರ್ತಾ ಇಲಾಖೆಯ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಹೀಗಾಗಿ ಧರ್ಮಸಿಂಗ್‌ಗೆ ಪ್ರಶಸ್ತಿ ವಿತರಿಸುವ ಮತ್ತು ಅವರ ಕ್ಷೇತ್ರದಲ್ಲಿ 'ತಾರಾ ಜಾತ್ರೆ' ನಡೆಸುವ ಸೌಭಾಗ್ಯ ತಪ್ಪಿ ಹೋಗಿದೆ.

ಸಾಮಾನ್ಯವಾಗಿ ಜಿಲ್ಲಾ ಕೇಂದ್ರ ಅಥವಾ ಆ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ಪ್ರಶಸ್ತಿ ಸಮಾರಂಭ ನಡೆಸುವುದು ವಾಡಿಕೆ. ರಾಮನಗರ ಜಿಲ್ಲಾ ಕೇಂದ್ರವೂ ಅಲ್ಲ, ಪ್ರಮುಖ ಪಟ್ಟಣವೂ ಅಲ್ಲ, ಆದ್ದರಿಂದ ಅಲ್ಲಿ ಈ ಸಮಾರಂಭ ನಡೆಸಲು ಉದ್ಯಮದವರಿಗೆ ಒಂದಿಷ್ಟೂ ಇಷ್ಟವಿಲ್ಲ. ಆದರೆ ತಮ್ಮ ಅಸಮಾಧಾನವನ್ನು ಮುಖ್ಯಮಂತ್ರಿಯವರಿಗೆ ತಿಳಿಸಲು ಸಿನಿಮಾದವರಿಗೆ 'ಮೀಟರ್' ಇಲ್ಲ.

ಈ ಹಿಂದೆಯಲ್ಲಾ ಚಿಕ್ಕಪುಟ್ಟ ವಿಷಯಕ್ಕೆಲ್ಲ ಸಿಎಂ ಕಚೇರಿಗೆ ದೌಡಾಯಿಸಿ ಸರ್ಕಾರವನ್ನು ಹೆದರಿಸುತ್ತಿದ್ದ ಸಿನಿಮಾ ಮಂದಿಗೆ ಕುಮಾರಸ್ವಾಮಿ ಬಂದನಂತರ ಕೈ ಕಟ್ಟಿ ಹಾಕಿದಂತಾಗಿದೆ!

ಗುಂಡೂ ಇಲ್ಲ; ತುಂಡೂ ಇಲ್ಲ ಪತ್ರಕರ್ತರ ಬಗ್ಗೆ ಕಾಳಜಿ ಇದೆ!

'ಕುಮಾರರಾಮ' ಚಿತ್ರದ ನಿರ್ಮಾಪಕ ಪಟ್ಟಾಭಿರಾಮನ್ ಸಿನಿಮಾ ಪತ್ರಕರ್ತರಿಗೆ ಅಪರೂಪದ 'ಸೌಜನ್ಯ' ತೋರಿಸಿದ್ದಾರೆ.

ಎಲ್ಲಾ ಸಿನಿಮಾ ಪತ್ರಕರ್ತರ ಹೆಸರಲ್ಲಿ 2 ಲಕ್ಷ ರೂಪಾಯಿ ಮೌಲ್ಯದ ಎರಡು ವರ್ಷ ಅವಧಿಯ 'ಹೆಲ್ತ್ ಇನ್ಸೂರೆನ್ಸ್ ಬಾಂಡ್'ನ್ನು ತೆಗೆದಿದ್ದಾರೆ. ಈ ಕಾರ್ಡನ್ನು ನಗರದ ಯಾವುದೇ ಹಾಸ್ಪಿಟಲ್‌ನಲ್ಲಿ ತೋರಿಸಿ ಶುಶ್ರೂಷೆ ಪಡೆಯಲು ಅವಕಾಶ ಮಾಡಿಕೊಟ್ಟಿದ್ದಾರೆ.

ಇತ್ತೀಚೆಗೆ ವಾರದ 'ಒಂಭತ್ತೂ ದಿನ' ಗುಂಡು ಪಾರ್ಟಿಗಳಿರುವುದರಿಂದ ಸಿನಿಮಾ ಪತ್ರಕರ್ತರಿಗೆ ಇಂತಹ ಆರೋಗ್ಯದ ಇನ್ಸೂರೆನ್ಸ್ ಅಗತ್ಯವಿತ್ತು. ಅಂದಹಾಗೆ 'ಕುಮಾರರಾಮ' ಚಿತ್ರದ ಪತ್ರಿಕಾ ಗೋಷ್ಠಿಗಳಲ್ಲಿ ಗುಂಡು ಮತ್ತು ತುಂಡು ಇರಲೇ ಇಲ್ಲ!

60 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ನಾಯಕ-ನಾಯಕಿಯರ ಬದಲು ಪತ್ರಕರ್ತರ ಆರೋಗ್ಯದ ಬಗ್ಗೆಯೂ ಚಿಂತಿಸುವ ಮೊದಲ ನಿರ್ಮಾಪಕ ಎನಿಸಿಕೊಂಡಿದ್ದಾರೆ ಪಟ್ಟಾಭಿರಾಮನ್.

ಕನ್ನಡ ಚಿತ್ರರಂಗಕ್ಕೀಗ ಶುಭಕಾಲ ಬಂದೈತೆ!



ಈಗಾಗಲೇ ಎರಡು ಅಚ್ಚ ಸ್ವಮೇಕ್ ಚಿತ್ರಗಳಾದ 'ಜೋಗಿ' ಮತ್ತು 'ಅಮೃತ ಧಾರೆ' ಸಿಲ್ವರ್ ಜ್ಯೂಬಿಲಿ ಪ್ರದರ್ಶನ ಕಂಡಿವೆ. ಇವೆರಡು ಚಿತ್ರಗಳನ್ನು ಗೆಲ್ಲಿಸುವ ಮೂಲಕ ರಿಮೇಕ್ ಪರ ವಾದಿಸುವವರಿಗೆ ಪ್ರೇಕ್ಷಕರು ಸೂಕ್ತ ಉತ್ತರ ನೀಡಿದ್ದಾರೆ.



ಇದರ ಜೊತೆ ಜೊತೆಗೆ 'ನೆನಪಿರಲಿ', 'ಅಣ್ಣತಂಗಿ' ಮತ್ತು 'ರಾಮ ಶಾಮ ಭಾಮ' ಎಂಬ ಮೂರು ಚಿತ್ರಗಳು ಕೂಡಾ ಶತದಿನೋತ್ಸವ ಆಚರಿಸಿವೆ. ಈ ಮೂರು ಚಿತ್ರಗಳಲ್ಲಿ ಮಚ್ಚು, ಲಾಂಗ್‌ಗಳು ಆಕ್ಟ್ ಮಾಡಿಲ್ಲವೆಂಬುದೇ ವಿಶೇಷ. ಈ ಅಂಶವನ್ನು ಡ್ಯಾಶಿಂಗ್ ಹೀರೋ ದರ್ಶನ್ ಗಮನಿಸಿದರೆ ಆತನಿಗೆ ಒಳ್ಳೆಯದಾಗುತ್ತದೆ.


ಈ ಮೂರರಲ್ಲಿ 'ನೆನಪಿರಲಿ' ಸಂಪೂರ್ಣ ಹೊಸಬರದ್ದು ಎಂಬುದು ಇನ್ನೊಂದು ವಿಶೇಷ. ಇಷ್ಟಾಗಿಯೂ ಇದು ಸ್ವಮೇಕ್. 'ಅಣ್ಣ-ತಂಗಿ' ಸಂಪೂರ್ಣ ರೀಮೇಕ್ ಅಲ್ಲ; ಆಫ್‌ಕೋರ್ಸ್ 'ರಾಮ ಶಾಮ ಭಾಮ' ಚಿತ್ರ ತಮಿಳಿನ ಜೆರಾಕ್ಸ್ ಕಾಪಿ. ಆದರೆ ರಮೇಶ್ ಚೊಚ್ಚಲ ನಿರ್ದೇಶನ ಮಾಡಿ ಮೊದಲ ಪ್ರಯತ್ನದಲ್ಲೇ ಗೆದ್ದಿರುವುದನ್ನು ಮರೆಯುವಂತಿಲ್ಲ.



ಈ ಐದು ಚಿತ್ರಗಳ ಯಶಸ್ಸು ಐದಾರು ಸಂದೇಶಗಳನ್ನು ನೀಡಿವೆ. ಈ ಚಿತ್ರಗಳ ಮುಖಾಂತರ ಪ್ರೇಕ್ಷಕ ತನ್ನ ಅಭಿರುಚಿಯನ್ನು ವ್ಯಕ್ತಪಡಿಸಿದ್ದಾನೆ.

ಇದನ್ನು ಅರ್ಥ ಮಾಡಿಕೊಂಡು ನಮ್ಮ ಗಾಂಧಿನಗರಿಗಳು ಚಿತ್ರ ತೆಗೆದರೆ, ಗಾಂಧಿನಗರದ ಬಣ್ಣವೇ ಬದಲಾಗುವ ಸಾಧ್ಯತೆ ಇದೆ. ಹೀಗಾಗಿ ಇನ್ನಾದರೂ ನಮ್ಮವರು ಮಚ್ಚು, ಲಾಂಗ್, ಅಶ್ಲೀಲ ಡೈಲಾಗ್‌ಗಳಿಗೆ ಗುಡ್‌ಬೈ ಹೇಳುತ್ತಾರೆ ಎಂದು ನಂಬೋಣ.

'ಕಭಿ ಕಭಿ' ಕಮಿಂಗ್



ಅಮಿತಾಭ್, ಶಶಿಕಪೂರ್, ರಾಖಿ ಅಭಿನಯದ 70ರ ದಶಕದ ಹಿಟ್ ಚಿತ್ರ 'ಕಭಿ ಕಭಿ'ಯನ್ನು ಯಶ್ ಚೋಪ್ರಾ ಈಗ ಮತ್ತೊಮ್ಮೆ ನಿರ್ಮಿಸುತ್ತಿದ್ದಾರೆ. ಶಾರುಕ್, ಅಕ್ಷಯ್‌ಕುಮಾರ್, ಪ್ರೀತಿ ಜಿಂಟಾ ಅಭಿನಯಿಸಲಿರುವ ಈ ಹೊಸ 'ಕಭಿ ಕಭಿ'ಯನ್ನು ಫ್ರೇಮ್-ಟು-ಫ್ರೇಮ್ ರಿಮೇಕ್ ಮಾಡುತ್ತಿಲ್ಲ. ಮೂಲಕತೆ ಹಾಗೆ ಇಟ್ಟುಕೊಂಡು ಹಲವಾರು ಬದಲಾವಣೆ ಮಾಡುತ್ತಿದ್ದಾರೆ.

ಕನ್ನಡದಲ್ಲಿ ತಮಿಳು, ತೆಲುಗುಗಳಿಂದ ಮಕ್ಕಿಕಾಮಕ್ಕಿ ಕಾಪಿ ನಡೆಯುತ್ತಿರುವಾಗ, ಬಾಲಿವುಡ್‌ನಲ್ಲಿ 70, 80ರ ದಶಕದ ಚಿತ್ರಗಳನ್ನು ಮತ್ತೆ ನಿರ್ಮಿಸುತ್ತಿದ್ದಾರೆ. ಬರಲಿರುವ ಹೊಸ 'ಡಾನ್' ಚಿತ್ರದಲ್ಲಿ ಅಮಿತಾಬ್ ರೋಲ್‌ನಲ್ಲಿ ಶಾರುಕ್‌ನೇ ಅಭಿನಯಿಸುತ್ತಿದ್ದಾನೆ. 'ಡಾನ್' ಚಿತ್ರದಲ್ಲಿ 'ಏ ಮೇರಾ ದಿಲ್ ಪ್ಯಾರ್ ಕಾ ದಿವಾನಾ' ಹಾಡಿನಲ್ಲಿ ಹೆಲೆನ್ ಮಾಡಿದ ಕ್ಲಬ್ ಡ್ಯಾನ್ಸನ್ನು ಇಲ್ಲಿ ಕರೀನಾ ಕಪೂರ್ ಮಾಡಿದ್ದಾಳೆ. ಫಿರೋಜ್ ಖಾನ್ 'ಖುರ್‌ಬಾನಿ'ಯನ್ನು ಮತ್ತೆ ಚಿತ್ರಿಸುತ್ತಿದ್ದಾನೆ. ಏನಿದು ಎಲ್ಲರಿಗೂ ಮರು ನಿರ್ಮಾಣದ ಹುಚ್ಚು? ಕಭಿ ಕಭಿ ಐಸಾ ಹೋತಾ ಹೈ ಬಾಲಿವುಡ್ ಮೆ...



ರಾಜ್ ಪಾತ್ರದಲ್ಲಿ ರಕ್ಷಿತಾ

'ಭಲೇ ಜೋಡಿ' ಎಂಬ ಸಿನಿಮಾ ಸದ್ಯದಲ್ಲಿಯೇ ಸೆಟ್ಟೇರಲಿದೆ.

ರಾಜ್‌ಕುಮಾರ್ ದ್ವಿಪಾತ್ರದಲ್ಲಿ ನಟಿಸಿದ್ದ 'ಭಲೇ ಜೋಡಿ' ಚಿತ್ರ 70ರ ದಶಕದಲ್ಲಿ ಬಾಕ್ಸ್ ಆಫೀಸ್‌ನಲ್ಲಿ ಹಣವನ್ನು ದೋಚಿದ್ದು ಮಾತ್ರವಲ್ಲ; ಪ್ರೇಕ್ಷಕರನ್ನು ರಂಜಿಸಿತ್ತು.

ಈಗ ಅದೇ ಚಿತ್ರವನ್ನು 36 ವರ್ಷಗಳ ಬಳಿಕ ರೀಮೇಕ್ ಮಾಡಲು ಹೊರಟಿದ್ದಾರೆ ನಿರ್ದೇಶಕಿ ಪೂರ್ಣಿಮಾ ಮೋಹನ್. ಕನ್ನಡ ಚಿತ್ರವನ್ನು ಕನ್ನಡದಲ್ಲಿ ರೀಮೇಕ್ ಮಾಡುವ ಮೂಲಕ ಪೂರ್ಣಿಮಾ ಹೊಸ ದಾಖಲೆ ಸ್ಥಾಪಿಸಲಿದ್ದಾರೆ. ಅಂದಹಾಗೆ, ಅವರ ಚೊಚ್ಚಲ ನಿರ್ದೇಶನದ 'ಜ್ಯೂಲಿ' ಮುಂದಿನ ತಿಂಗಳು ತೆರೆ ಕಾಣಲಿದೆ.

ಡಾ. ರಾಜ್‌ಕುಮಾರ್ ಪಾತ್ರವನ್ನು ಹೊಸ 'ಭಲೇ ಜೋಡಿ'ಯಲ್ಲಿ ಯಾರು ಮಾಡುತ್ತಾರೆ ಗೊತ್ತಾ? ಜಸ್ಟ್ ಗೆಸ್ ಮಾಡಿ...! ನಿಮ್ಮಿಂದ ಊಹಿಸಲೂ ಅಸಾಧ್ಯ.

ಈ ಪಾತ್ರ ಕ್ರೇಜಿ ಕ್ವೀನ್ ರಕ್ಷಿತಾ ಪಾಲಾಗಿದೆ! ಅಂದರೆ ಪೂರ್ಣಿಮಾ ಮೋಹನ್ 'ಇರ್ಫಾನ್ ಪಠಾಣ್' ರಿವರ್ಸ್ ಸ್ವಿಂಗ್ ಮಾಡಿದ್ದಾರೆ. ರಾಜ್ ಪಾತ್ರವನ್ನು ನಾಯಕಿ ರಕ್ಷಿತಾಗೆ ನೀಡಿ, ನಾಯಕಿ ಪಾತ್ರವನ್ನು ಹೊಸ ನಾಯಕಿಗೆ ನೀಡಲಿದ್ದಾರೆ.

ಹೀಗಾಗಿ ಇದೇ ಮೊದಲ ಬಾರಿ ರಕ್ಷಿತಾ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾಳೆ. ಒಂದೇ ಟಿಕೆಟ್‌ನಲ್ಲಿ ಎರಡೆರಡು ರಕ್ಷಿತಾಳನ್ನು ನೋಡಬಹುದು. ಇದು ಆಕೆಯ ಅಭಿಮಾನಿಗಳಿಗೆ ಸಂತೋಷ ನೀಡುವ ಸುದ್ದಿ. ಇತ್ತೀಚೆಗೆ ರಕ್ಷಿತಾ ಸಾಕಷ್ಟು ಸ್ಲಿಮ್ ಆಗಿರುವುದರಿಂದ ಇಡೀ ಪರದೆಯನ್ನು ಆಕೆ ಆಕ್ರಮಿಸಿಕೊಳ್ಳುವ ಸಾಧ್ಯತೆ ಕಡಿಮೆ! ಅದೇನೆ ಇರಲಿ ಡಾ. ರಾಜ್ ನಿರ್ವಹಿಸಿದ ಪಾತ್ರವನ್ನು ಮಾಡುವುದೆಂದರೆ ರಕ್ಷಿತಾಗೆ ಹೆಮ್ಮೆ ಮಾತ್ರವಲ್ಲ ದೊಡ್ಡ ಸವಾಲು. ಪರೀಕ್ಷೆ ಕೂಡಾ! ಈ ಪರೀಕ್ಷೆಯಲ್ಲಿ ಪಾಸಾಗುತ್ತೇನೆ ಎಂಬ ಆತ್ಮವಿಶ್ವಾಸದಲ್ಲಿದ್ದಾಳೆ ರಕ್ಷಿತಾ.



ಎಲ್ಲರ ಆಶೀರ್ವಾದ ಪಡೆದ 'ಶಿಷ್ಯ' ದೀಪಕ್



ಹೆಸರು ದೀಪಕ್! ಚಿತ್ರರಂಗದಲ್ಲಿ ಉದಯಿಸುವ ಹೊಸ ಸ್ಟಾರ್ ಈತ.

'ಶಿಷ್ಯ' ಚಿತ್ರದ ನಾಯಕ ದೀಪಕ್‌ನಿಗೆ ಪ್ರೇಕ್ಷಕರು ಮಾತ್ರವಲ್ಲ ಉದ್ಯಮದವರೂ ಮೆಚ್ಚಿ ಶುಭ ಹಾರೈಸಿರುವುದು ಒಂದು ದೊಡ್ಡ ಬೆಳವಣಿಗೆ. ಬಹುಶಃ ಕನ್ನಡದಲ್ಲಿ ಯಾವ ನಟನಿಗೂ ಗಾಂಧಿನಗರದವರು ಇಂತಹ ರಿಸಪ್ಷನ್ ನೀಡಿದ್ದೇ ಇಲ್ಲ.

ವರನಟ ರಾಜ್‌ಕುಮಾರ್, ವಿಷ್ಣುವರ್ಧನ್ ಇವರಿಬ್ಬರೂ ಈತನ ನಟನೆಯನ್ನು ನೋಡಿ ಶುಭ ಹಾರೈಸಿದ್ದಾರೆ. ಯುವ ನಾಯಕ ನಟ ಸುದೀಪ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪತ್ರಿಕೆಯಲ್ಲಿ ಜಾಹೀರಾತು ನೀಡಿ ದೀಪಕ್‌ಗೆ ಶುಭ ಹಾರೈಸಿದ್ದಾರೆ. "ಶಂಕರ್‌ನಾಗ್ ತರಹ ಕಾಣಿಸುತ್ತೀಯ, ಅವರ ನಡೆ ನುಡಿಗಳನ್ನು ಕೇಳಿ ಅನುಸರಿಸು" ಎಂದು ಡಾ. ರಾಜ್ ಈ ಹುಡುಗನಿಗೆ ಕಿವಿಮಾತು ಹೇಳಿದ್ದಾರೆ.

ಆರಡಿ ಎತ್ತರದ ದೀಪಕ್ ಈ ಹೊಗಳಿಕೆಯ ಮಾತಿನಿಂದ ಹಿಗ್ಗಿಲ್ಲವೆಂಬುದೇ ಸಮಾಧಾನದ ವಿಷಯ. ಡ್ಯಾನ್ಸ್ ಮತ್ತು ಫೈಟಿಂಗ್‌ನ್ನು 'ಶಿಷ್ಯ' ಚಿತ್ರದಲ್ಲಿ ಚೆನ್ನಾಗಿ ನಿರ್ವಹಿಸಿರುವ ದೀಪಕ್ ಡೈಲಾಗ್ ಡೆಲಿವರಿ ಮತ್ತು ನಟನೆಯಲ್ಲಿ ಇನ್ನೂ ಸ್ವಲ್ಪ ಸುಧಾರಿಸಬೇಕಾಗಿದೆ. ಆದರೂ ಚೊಚ್ಚಲ ಚಿತ್ರದಲ್ಲಿ ನಿರೀಕ್ಷೆಗೂ ಮೀರಿ ದೀಪಕ್ ನಟಿಸಿದ್ದಾರೆ.

ಈತ ನಿರ್ಮಾಪಕ ಭಾ.ಮ. ಹರೀಶ್ ಅವರ ಚಿಕ್ಕಪ್ಪನ ಮಗ. ಹರೀಶ್ ಗರಡಿಯಲ್ಲಿ ಬೆಳೆದ ಈ ಹುಡುಗನಿಗೆ ಖಂಡಿತವಾಗಿಯೂ ಚಿತ್ರರಂಗದಲ್ಲಿ ಉಜ್ವಲ ಭವಿಷ್ಯವಿದೆ. ಹರೀಶ್‌ಗೆ ಚಿತ್ರರಂಗದ ಬಗ್ಗೆ ಆಳವಾದ ಅನುಭವವಿರುವುದರಿಂದ ದೀಪಕ್‌ಗೆ ಅಂತಹ ಸಮಸ್ಯೆ ಎದುರಾಗದು.



'ಗಂಡ-ಹೆಂಡತಿ' ಚಿತ್ರದಲ್ಲಿ ರವಿ ಬೆಳಗೆರೆ

ಮುರಳಿ ಎಂಬ ಫ್ಲಾಪ್ ಹೀರೋ



ಚೆನ್ನೇಗೌಡರ ಎರಡನೇ ಸುಪುತ್ರ ಮುರಳಿ 'ಒನ್ ಫಿಲ್ಮ್ ವಂಡರ್ ನಟ' ಎಂದೆನಿಸಿಕೊಳ್ಳುವ ಸಾಧ್ಯತೆ ಕಾಣಿಸುತ್ತಿದೆ.

ಆತನ ತಾರಾಮೌಲ್ಯ ಹೆಚ್ಚಿಸುವ ನಿರೀಕ್ಷೆಯಲ್ಲಿದ್ದ 'ಗೋಪಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಇನ್ನಿಲ್ಲದಂತೆ ಮುಗ್ಗರಿಸಿರುವುದರಿಂದ ಮುರಳಿಯ ವೃತ್ತಿ ಜೀವನವೂ ಕವಲುದಾರಿಯಲ್ಲಿದೆ.


ತೆಲುಗಿನ ಸೂಪರ್ ಹಿಟ್ ಚಿತ್ರವಾದ 'ಮುರಾರಿ'ಯ ಜೆರಾಕ್ಸ್ ಕಾಪಿಯಾದ 'ಗೋಪಿ' ಈ ರೀತಿ ನೆಲ ಕಚ್ಚುತ್ತದೆ ಎಂದು ಯಾರೂ ಭಾವಿಸಿರಲಿಲ್ಲ.

ಇದಕ್ಕಿಂತ ಮೊದಲು ಮುರಳಿ ನಟಿಸಿದ 'ಯಶವಂತ್', 'ಶಂಭು', 'ಕಂಠಿ' ಮತ್ತು 'ಸಿದ್ದು' ಚಿತ್ರಗಳ ಹಣೆಬರಹವೂ ಅದೇ ಆಗಿತ್ತು. ಮುರಳಿಯ ಚೊಚ್ಚಲ ಚಿತ್ರ 'ಚಂದ್ರಚಕೋರಿ' ಬಾಕ್ಸ್ ಆಫೀಸ್‌ನಲ್ಲಿ ಹಣ ಕೊಳ್ಳೆ ಹೊಡೆದದ್ದು ಬಿಟ್ಟರೆ ಆತನ ಬೇರೆ ಯಾವ ಚಿತ್ರವೂ ನಿರ್ಮಾಪಕನಿಗೆ ಲಾಭ ತಂದು ಕೊಟ್ಟಿರಲಿಲ್ಲ.

ಇಷ್ಟೆಲ್ಲಾ ಚಿತ್ರಗಳು ಫ್ಲಾಪ್ ಆದರೂ ಮುರಳಿ ತನ್ನ ಸಂಭಾವನೆಯ ವಿಷಯದಲ್ಲಿ ಒಂದಿಷ್ಟೂ ಕಾಂಪ್ರಮೈಸ್ ಆಗುತ್ತಿಲ್ಲ ಎಂಬುದೇ ಗಾಂಧಿನಗರಿಗಳ ದೂರು. ಮುರಳಿ ಚಿತ್ರವೊಂದಕ್ಕೆ 27 ಲಕ್ಷ ರೂಪಾಯಿ ಸಂಭಾವನೆ ಡಿಮ್ಯಾಂಡ್ ಮಾಡುತ್ತಿದ್ದಾನೆ. ಕನ್ನಡದ ಮಟ್ಟಿಗೆ ಅದು ಖಂಡಿತಾ ದುಬಾರಿ.

ಒಳ್ಳೆಯ ಮೈಕಟ್ಟು ಹೊಂದಿರುವ ಮುರಳಿ ಚೆನ್ನಾಗಿ ಡ್ಯಾನ್ಸ್ ಮಾಡಬಲ್ಲ. ಒಳ್ಳೆಯ ಪಾತ್ರವನ್ನು ಆಯ್ಕೆ ಮಾಡಿ, ಸಂಭಾವನೆಯನ್ನು ಸ್ವಲ್ಪ ಕಡಿಮೆ ಮಾಡಿದ್ದೇ ಆದಲ್ಲಿ ಮುರಳಿ ಗಟ್ಟಿಯಾಗಿ ತಳವೂರಬಹುದು. ಇಡೀ ಗಾಂಧಿನಗರದ ಇನ್ ಅಂಡ್ ಔಟ್ ಗೊತ್ತಿರುವ ಚೆನ್ನೇಗೌಡರು ಮಗನಿಗೆ ಯಾಕೆ ಹಿತ ನುಡಿ ಹೇಳುತ್ತಿಲ್ಲ ಎಂಬುದೇ ಅರ್ಥವಾಗದು.

ಕುಮಾರರಾಮ ಫ್ಲಾಪ್ ಆದರೆ ಇವರ ಗತಿಯೇನು?





"ಕನ್ನಡ ಚಿತ್ರರಂಗ ಕಂಡಿರುವ ಅತ್ಯಂತ ಅದ್ದೂರಿ ಚಿತ್ರವಾದ 'ಕುಮಾರರಾಮ' ಒಂದು ವೇಳೆ ಫ್ಲಾಪ್ ಆದರೆ ಚಿತ್ರರಂಗಕ್ಕೆ 'ಗುಡ್‌ಬೈ' ಹೇಳುತ್ತೀರಾ?"

ಇಂತಹ ಒಂದು ಅಪ್ರಿಯ ಮತ್ತು ಅಸಂಬದ್ಧ ಪ್ರಶ್ನೆಯನ್ನು ನಿರ್ಮಾಪಕ ಪಟ್ಟಾಭಿರಾಮನ್ ಅವರಿಗೆ ಪತ್ರಕರ್ತರು ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಕೇಳಿದಾಗ ಅವರಿಗೇನೂ ಆಶ್ಚರ್ಯವಾಗಲಿಲ್ಲ. ಅದರ ಬದಲಿಗೆ ಅವರ ಉತ್ತರ ಕೇಳಿ ಪತ್ರಕರ್ತರೇ ಆಶ್ಚರ್ಯಗೊಂಡರು.

"ಈ ಚಿತ್ರ ಆರಂಭಿಸಿದಾಗ, ಸಿನಿಮಾ ಉದ್ಯಮ ಬೇಡ ಎಂದೇ ಸಹೋದರರು ಅಪಸ್ವರ ತೆಗೆದಿದ್ದರು. ಈಗ ಚಿತ್ರ ಮುಗಿಯುವ ಮೊದಲು ಎಂಟು ಜನ ಸಹೋದರರು ಒಂದೊಂದು ಕೋಟಿ ರೂಪಾಯಿ ನೀಡಿ ಸಿನಿಮಾ ಬಿಸಿನೆಸ್ ಮುಂದುವರಿಸಿ ಎಂದು ಹಾರೈಸಿದ್ದಾರೆ" ಎಂದರು ಪಟ್ಟಾಭಿರಾಮನ್. ಅಷ್ಟೇ ಅಲ್ಲ, 'ಕುಮಾರ ರಾಮ' ನಿರ್ದೇಶಕ ಭಾರ್ಗವ, ನಾಯಕ ಶಿವರಾಜ್‌ಕುಮಾರ್ ಸೇರಿದಂತೆ ಎಲ್ಲಾ ಪ್ರಮುಖ ತಂತ್ರಜ್ಞರಿಗೆ ಐದು ವರ್ಷದ ಕಾಂಟ್ರಾಕ್ಟ್ ಆಫರ್ ನೀಡಿದ್ದಾರಂತೆ. ಆದರೆ ಇನ್ನೂ ಯಾರೂ ಸಹಿ ಮಾಡಿಲ್ಲವಂತೆ.

ಈ ಎಲ್ಲಾ ವಿಷಯಗಳನ್ನು ಚೀಪ್ ಪಬ್ಲಿಸಿಟಿಗಾಗಿ ಗಾಂಧಿನಗರದವರ ತರಹ ಇವರೂ ಹೇಳಿದ್ದಾರೆಂದು ತಳ್ಳಿ ಹಾಕುವಂತಿಲ್ಲ. ಯಾಕೆಂದರೆ ಪಟ್ಟಾಭಿರಾಮನ್ ಬೇರೆ ಯಾರೂ ಅಲ್ಲ; ಅರ್ಧ ಬೆಂಗಳೂರನ್ನೇ ತಮ್ಮದಾಗಿಸಿಕೊಂಡಿರುವ ಆಗರ್ಭ ಶ್ರೀಮಂತರಾದ ದಿ. ಎಂ.ಎಸ್. ರಾಮಯ್ಯ ಅವರ ಒಂಭತ್ತು ಪುತ್ರರಲ್ಲಿ ಒಬ್ಬರು!

ಶ್ಯಾಮ್ ಶಾಕ್ : ರಕ್ಷಿತಾ 'ತನನಂ ತನನಂ'



ರಕ್ಷಿತಾ ಥಟ್ಟನೆ ಕಿರುಚುತ್ತಾ ಎರಡಡಿ ಹಿಂದಕ್ಕೆ ಜಿಗಿದಳು. 'ಚೆಲುವಾಂತ ರಾಜಕುಮಾರ...' ಎಂಬ ಹಾಡು ತೇಲಿಬರುವಾಗ ನಯನ ಮನೋಹರವಾಗಿ ಶ್ಯಾಮ್‌ನ ಕೈ ಹಿಡಿದ ರಕ್ಷುಗೆ 'ಶಾಕ್' ಹೊಡೆದಿತ್ತು. ಅವರಿಬ್ಬರ ಮಧ್ಯದ 'ಕೆಮಿಸ್ಟ್ರಿ' ತಪ್ಪಿತಾ? ಅಥವಾ ಅದು ಸ್ಪರ್ಶವುಂಟುಮಾಡಿದ ವಿದ್ಯುತ್ ಸಂಚಾರವಾ? ಹಾಗೇನೂ ಇಲ್ಲ ಬಿಡಿ, ಅದು ಅಕ್ಷರಶಃ ಲಿಟಲ್ ಶಾಕ್. ಆಗಾಗ ಮನುಷ್ಯರ ದೇಹದಲ್ಲಿನ ಸ್ಥಿರ-ವಿದ್ಯುತ್ ಸಂಪರ್ಕದಲ್ಲಿರುವ ಪಕ್ಕದಲ್ಲಿರುವವರಿಗೆ ಒಂದು ಸಣ್ಣ ಶಾಕ್ ಕೊಡುತ್ತಿರುತ್ತದೆ. ಅವತ್ತೂ ಹಾಗೇ ಆಗಿದ್ದು. 'ಮನುಷ್ಯರ ದೇಹದಲ್ಲೂ ಅಷ್ಟು ವಿದ್ಯುತ್ ಇರುತ್ತಾ?' ಎಂದು ರಕ್ಷಿತಾ ಆಶ್ಚರ್ಯಪಟ್ಟಳು!

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44